Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 22 | ಮೇ 23-29, 2022 | ಪುಟ 16 | ರೂ.10/-
Volume: 16 Issue: 22 May 23-29, 2022 Pages: 16 Price: 10/-
https://janashakthi.wordpress.com e-mail : js_weekly@yahoo.com



ಮಹಿಳಾ ಕೃಷಿ ಕೂಲಿಕಾರರ ಬದುಕು-ಬವಣೆಗಳು








ಜಿಂದಾಲ್: ಬೂದಿಯಲ್ಲಿ ಬೂದಿಯಾದ ಬಡವರು



ಜನತಾ ಜಲಧಾರೆ: ಜೆಡಿಎಸ್ ನ ಸಂದೇಶವೇನು?



ಹಣದುಬ್ಬರ: ದುಡಿಯುವ ಜನರ ಮೇಲಿನ ಕ್ರೂರ ಪ್ರಹಾರ



ಪಠ್ಯ ಪರಿಷ್ಕರಣೆ: ವಿಷವಿಕ್ಕುವ ಹುನ್ನಾರ ಹಿಮ್ಮೆಟ್ಟಿಸಬೇಕು

ಗ್ರ್ಯಾನ್‌ವಾಪಿ ಮಸೀದಿಯ ಆವರಣದೊಳಗೆ ವೀಡಿಯೋ ಚಿತ್ರಣಕ್ಕೆ ಅವಕಾಶ: ಸಿಪಿಐ(ಎಂ) ಕಳವಳ

ವಾರಣಾಸಿಯ ಜಿಲ್ಲಾ ನ್ಯಾಯಾಲಯವು ಗ್ಯಾನ್ ವಾಪಿ ಮಸೀದಿಯ ಆವರಣದೊಳಗೆ ತನ್ನ ಮೇಲ್ವಿಚಾರಣೆಯಲ್ಲಿ ವೀಡಿಯೊ ಚಿತ್ರಣ ನಡೆಸಲು ಅವಕಾಶ ನೀಡುವ ನಿರ್ಧಾರವನ್ನು ತೆಗೆದುಕೊಂಡಿದೆ. ಇದರಿಂದ ಕೋಮುವಾದಿ ಶಕ್ತಿಗಳು ಬಳಸಬಹುದಾದ ಒಂದು ಸನ್ನಿವೇಶ ಉಂಟಾಗಿದೆ. ಇದು ಸರಿಯಾಗಿ ಪರಿಗಣಿಸದ ನಿರ್ಧಾರ ಎಂದು ಸಿಪಿಐ(ಎಂ)ನ ಗಂಭೀರ ಕಳವಳವನ್ನು ಪೊಲಿಟ್‌ಬ್ಯುರೊ ವ್ಯಕ್ತಪಡಿಸಿದೆ.

ಸುಪ್ರೀಂ ಕೋರ್ಟ್ ಈಗ ಈ ವಿಷಯದಲ್ಲಿ ಮಧ್ಯಪ್ರವೇಶಿಸಿದೆ. ಈ ವಿಷಯದಲ್ಲಿ ಅತ್ಯಂತ ಎಚ್ಚರಿಕೆ ವಹಿಸಬೇಕು, ಮತ್ತು ಧಾರ್ಮಿಕ ಸ್ಥಳಗಳು(ವಿಶೇಷ ನಿಬಂಧನೆಗಳು) ಕಾಯಿದೆ, 1991 ರ ಮತ್ತು ಅದರ ಆಶಯದ ಯಾವುದೇ ಉಲ್ಲಂಘನೆ ನಡೆಯಬಾರದು ಎಂದು ಸಿಪಿಐ(ಎಂ) ಆಗ್ರಹಿಸಿರುವುದಾಗಿ ಪೊಲಿಟ್‌ಬ್ಯುರೊ ತಿಳಿಸಿದೆ. ಧಾರ್ಮಿಕ ಸ್ಥಳಗಳನ್ನು ಕುರಿತಂತೆ ಇಂತಹ ವಿವಾದಗಳನ್ನು ತಪ್ಪಿಸಬೇಕು ಮತ್ತು ಅವುಗಳ ಅಸ್ತಿತ್ವದಲ್ಲಿರುವ ಸ್ವರೂಪವನ್ನು ಬದಲಾಯಿಸುವ ಪ್ರಯತ್ನಗಳನ್ನು ಅನುಮತಿ ನೀಡಬಾರದು ಎಂಬುದಕ್ಕಾಗಿಯೇ ಎಂದು ಖಚಿತಪಡಿಸಿಕೊಳ್ಳಲು ಈ ಕಾಯಿದೆಯು ಅಸ್ತಿತ್ವಕ್ಕೆ ಬಂದಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ತ್ರಿಪುರದಲ್ಲಿ ಬಿಜೆಪಿ ಮುಖ್ಯಮಂತ್ರಿ ಬದಲಾವಣೆ – ಹೀನಾಯ ವೈಫಲ್ಯವನ್ನು ಒಪ್ಪಿಕೊಂಡಿರುವ ಸಂಕೇತ

ತ್ರಿಪುರ ಸರ್ಕಾರದ ಅವಧಿ ಮುಗಿಯುವ ಕೆಲವು ತಿಂಗಳುಗಳ ಮೊದಲು ಮುಖ್ಯಮಂತ್ರಿಯನ್ನು ಬದಲಾಯಿಸುವ ಬಿಜೆಪಿಯ ನಿರ್ಧಾರ ಬಿಜೆಪಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂಬ ಅಂಶವನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಆಡಳಿತ ಹದಗೆಟ್ಟಿದೆ. ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ನೀಡಿದ ಯಾವುದೇ ಭರವಸೆಗಳನ್ನು ಜಾರಿಗೆ ತರಲಾಗಿಲ್ಲ ಮತ್ತು ಅದರ ನೀತಿಗಳು ಸಂಪೂರ್ಣವಾಗಿ ಜನವಿರೋಧಿಯಾಗಿ ಜನರ ಮೇಲೆ ಅಭೂತಪೂರ್ವ ಆರ್ಥಿಕ ಹೊರೆಗಳನ್ನು ಹೇರುತ್ತಿವೆ. ಬಿಜೆಪಿ ಸರ್ಕಾರ ನಡೆಸಿದ ಭಯೋತ್ಪಾದನೆ ಮತ್ತು ಹಿಂಸಾಚಾರದ ರಾಜಕೀಯವು ಪ್ರಜಾಪ್ರಭುತ್ವವನ್ನು ನಾಶಪಡಿಸಿ ಚುನಾವಣೆಯನ್ನು ಪ್ರಹಸನದ ಮಟ್ಟಕ್ಕೆ ಇಳಿಸಿದೆ. ಫ್ಯಾಸಿಸ್ಟ್ ತೆರನ ದಾಳಿಗಳು ಸಾಂವಿಧಾನಿಕ ಖಾತರಿಗಳು ಮತ್ತು ಕಾನೂನಿನ ಆಳ್ವಿಕೆಯನ್ನು ಧ್ವಂಸ ಮಾಡಿವೆ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬದಲಾವಣೆಯಂತಹ ಚತುರ ತಂತ್ರಗಳು ಅದರ ಸಂಪೂರ್ಣ ವೈಫಲ್ಯವನ್ನು ಅಳಿಸಲು ಸಾಧ್ಯವಿಲ್ಲ. ತ್ರಿಪುರಾದ ಜನತೆ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಗೋಧಿಯ ಸಂಪೂರ್ಣ ಸಂಗ್ರಹಣೆ ಮತ್ತು 500 ರೂ. ಕ್ವಿಂಟಾಲ್ ಬೋನಸ್: ಎಐಕೆಎಸ್ ಒತ್ತಾಯ

ಹವಾಮಾನ ಬದಲಾವಣೆ ಮತ್ತು ಉತ್ಪಾದನಾ ವೆಚ್ಚದಲ್ಲಿ ಅನಿಯಂತ್ರಿತ ಏರಿಕೆಯಿಂದಾಗಿ ಉತ್ಪಾದನೆಯಲ್ಲಿನ ಕುಸಿತವನ್ನು ಪರಿಗಣಿಸಿ ಗೋಧಿಯನ್ನು ಸಂಗ್ರಹಿಸಲು ಪ್ರತಿ ಕ್ವಿಂಟಾಲ್‌ಗೆ ರೂ 500 ಬೋನಸ್ ನೀಡುವಂತೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ. ಸರ್ಕಾರಿ ಸಂಸ್ಥೆಗಳು ಸಾಕಷ್ಟು ಸಂಖ್ಯೆಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯದ ಕಾರಣ ರೈತರು ಕಡಿಮೆ ಪ್ರಮಾಣದ ಉತ್ಪಾದನೆ ಮತ್ತು ಕಡಿಮೆ ಮಟ್ಟದ ಖರೀದಿಯ ದುಪ್ಪಟ್ಟು ಸಂಕಟವನ್ನು ಎದುರಿಸುತ್ತಿದ್ದಾರೆ. ಆದ್ದರಿಂದ, ರೈತರು ಹತಾಶ ಮಾರಾಟಕ್ಕೆ ಇಳಿಯಲೇಬೇಕಾದ, ಅದರಿಂದಾಗಿ ಈ ಬಿಕ್ಕಟ್ಟಿನ ಸಮಯದಲ್ಲಿ ಗಳಿಕೆ ಇನ್ನಷ್ಟು ಕಡಿಮೆಯಾಗುವ ಪರಿಸ್ಥಿತಿ ಉಂಟಾಗಿದೆ. ಈಗಾಗಲೇ ತಮ್ಮ ಗೋಧಿಯನ್ನು ಸರ್ಕಾರಿ ಸಂಸ್ಥೆಗಳಿಗೆ ಮಾರಾಟ ಮಾಡಿದ ರೈತರಿಗೂ ಈ ಬೋನಸ್ ನೀಡಬೇಕು ಎಂದು ಎಐಕೆಎಸ್ ಹೇಳಿದೆ.

ಗೋಧಿ ಉತ್ಪಾದಿಸುವ ಬಹುತೇಕ ಪ್ರದೇಶಗಳಲ್ಲಿ ಮಾರ್ಚ್–ಏಪ್ರಿಲ್‌ನಲ್ಲಿ ವಿಪರೀತ ಮತ್ತು ಅಕಾಲಿಕ ಬಿಸಿಲಿನ ವಾತಾವರಣದಿಂದಾಗಿ ಈ ವರ್ಷ ಉತ್ಪಾದನೆಯ 20–25% ನಷ್ಟು ಬೆಳೆ ನಷ್ಟದಿಂದ ರೈತರು ತೀವ್ರ ನಷ್ಟವನ್ನು ಎದುರಿಸುತ್ತಿದ್ದಾರೆ. ಆಗಲೂ ಮೋದಿ ಸರ್ಕಾರ ಈ ವರ್ಷ ಘೋಷಿತ ಕೋಟಾದ 4.44 ಕೋಟಿ ಟನ್ ಗೋಧಿಯ ಅರ್ಧದಷ್ಟನ್ನೂ ಖರೀದಿಸಿಲ್ಲ. ನಿಗದಿತ ಪ್ರಮಾಣದ ಗೋಧಿಯನ್ನು ಸಂಗ್ರಹಿಸಲು ಸರ್ಕಾರಿ ಸಂಸ್ಥೆಗಳು ಮುಂದಾಗದಿದ್ದರೆ, ಮುಂದಿನ ದಿನಗಳಲ್ಲಿ ಆಹಾರ ಭದ್ರತೆಗೆ ಅಪಾಯ ಉಂಟಾಗಬಹುದು ಮತ್ತು ಹಿಟ್ಟು ಮತ್ತು ಇತರ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಏರಬಹುದು ಎಂದು ಎಐಕೆಎಸ್ ಎಚ್ಚರಿಸಿದೆ.

ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡು ಖಾಸಗಿ ವ್ಯಾಪಾರಿಗಳು ಮತ್ತು ಕಾರ್ಪೊರೇಟ್ ಕಂಪನಿಗಳು ಕಾಳ ದಾಸ್ತಾನು ಮತ್ತು ಲಾಭಕೋರತನಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಗೋಧಿ ಖರೀದಿಯಲ್ಲಿ ನಿರತವಾಗಿವೆ. ಮತ್ತೊಂದೆಡೆ ವ್ಯಾಪಾರಸ್ಥರು ಹಿಟ್ಟು/ಆಟ್ಟಾ ಬೆಲೆಯನ್ನು ಏರಿಸುತ್ತಿದ್ದಾರೆ, ಹೀಗೆ ಕಾಳಸಂತೆಯ ಮೂಲಕ ಭಾರಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರಿ ಏಜೆನ್ಸಿಗಳನ್ನು ಹಿಂತೆಗೆದುಕೊಳ್ಳುವ ಮೂಲಕ, ಮೋದಿ ಸರ್ಕಾರವು ಕೃಷಿ ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಳ್ಳಲು ಖಾಸಗಿ ವ್ಯಾಪಾರಿಗಳು ಮತ್ತು ದೊಡ್ಡ ಆಹಾರ ಕಾರ್ಪೊರೇಟ್ ಗಳಿಗೆ ಉತ್ತೇಜನ ನೀಡಲು ಪ್ರಯತ್ನಿಸುತ್ತಿದೆ, ಈ ಮೂಲಕ ಕೃಷಿಯನ್ನು ಕೈವಶಮಾಡಿಕೊಳ್ಳಲು ಕಾರ್ಪೊರೇಟ್ ಗಳಿಗೆ ಅನುಕೂಲ ಕಲ್ಪಿಸಿ ಕೊಡುತ್ತಿದೆ.

ಮೋದಿ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಗೋಧಿ ರಫ್ತಿಗೆ ಉತ್ತೇಜನ ನೀಡುತ್ತ ಬಂದಿದೆ. 2020–21ರಲ್ಲಿ 21.55 ಲಕ್ಷ ಟನ್‌ಗಳಷ್ಟಿದ್ದ ಗೋಧಿ ರಫ್ತು 2021–22ರಲ್ಲಿ 72.15 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ. ಈ ನೀತಿಯು ದೇಶೀಯ ಆಹಾರ ಸಂಗ್ರಹದ ಮೇಲೆ ಪರಿಣಾಮ ಬೀರಿತು ಮತ್ತು ಗೋಧಿ ದಾಸ್ತಾನು ಕೊರತೆಯಿಂದಾಗಿ ಮೋದಿ ಸರ್ಕಾರವು ಮೊದಲು ಗೋಧಿಯನ್ನು ವಿತರಿಸಿದ ಪ್ರದೇಶಗಳಲ್ಲಿ ಅಕ್ಕಿಯನ್ನು ವಿತರಿಸ ಬೇಕಾಗಿ ಬಂತು. ಮೋದಿ ಸರ್ಕಾರವು ಈ ಅತಂತ್ರದ ಪರಿಸ್ಥಿತಿಯನ್ನು ನಿರ್ವಹಿಸಲು ಅಸಮರ್ಥವಾಗಿದೆ. ಇದು ರೈತರು ವ್ಯಾಪಕವಾಗಿ ಹತಾಶ ಮಾರಾಟಕ್ಕೆ ಇಳಿಯುವಂತೆ ಮಾಡಿ ಅವರ ಸಂಕಟಗಳನ್ನು ಹೆಚ್ಚಿಸುವುದರೊಂದಿಗೇ ಜನಗಳ ಆಹಾರ ಭದ್ರತೆಯನ್ನು ನಾಶಪಡಿಸುವ ಅಪಾಯಕ್ಕೆ ಕಾರಣವಾಗುತ್ತದೆ. ಇದೀಗ ಮೋದಿ ಸರ್ಕಾರದ ರೈತ ವಿರೋಧಿ ನೀತಿ ಎಂದು ಎಐಕೆಎಸ್ ಬಲವಾಗಿ ಪ್ರತಿಭಟಿಸಿದೆ.

ವಿವಾಹ ವಯಸ್ಸಿನ ಪ್ರಸ್ತಾವಿತ ತಿದ್ದುಪಡಿ ಮಹಿಳೆಯ ಸ್ವಾಯತ್ತತೆಯನ್ನು ಮೊಟಕುಗೊಳಿಸುತ್ತದೆ: ಮಹಿಳಾ ಸಂಘಟನೆಗಳು

ಮಹಿಳೆಯರ ವಿವಾಹದ ವಯಸ್ಸನ್ನು 18 ರಿಂದ 21 ಕ್ಕೆ ಏರಿಸಬೇಕೆಂಬ ಉದ್ದೇಶಿತ ತಿದ್ದುಪಡಿಯ ಪರಿಣಾಮಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ವಿವಿಧ ಮಹಿಳಾ ಸಂಘಟನೆಗಳು ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷ ಡಾ ವಿನಯ್ ಸಹಸ್ರಬುದ್ಧೆಯವರಿಗೆ ಜಂಟಿ ಮನವಿ ಪತ್ರವನ್ನು ಸಲ್ಲಿಸಿವೆ.

ಮಹಿಳೆಯರಿಗೆ ತಮ್ಮ ಸ್ವಂತ ಆಯ್ಕೆಯನ್ನು ಚಲಾಯಿಸಲು ಅಧಿಕಾರ ನೀಡುವ ಬದಲು, ಈ ತಿದ್ದುಪಡಿಯು ವಯಸ್ಕ ಮಹಿಳೆಯರ ಆಯ್ಕೆಗಳನ್ನು ನಿರ್ಬಂಧಿಸುತ್ತದೆ ಮತ್ತು ಅಪರಾಧೀಕರಿಸುತ್ತದೆ ಮತ್ತು ವಯಸ್ಕ ಮಹಿಳೆಯರ ಹಕ್ಕುಗಳ ಮೇಲಿನ ಅಂತಹ ನಿರ್ಬಂಧಗಳು ಅಸಾಂವಿಧಾನಿಕ ಮತ್ತು ಸ್ವೀಕಾರಾರ್ಹವಲ್ಲ ಎಂದು ಈ ಮಹಿಳಾ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ.

ತಾಯಿಯ ಮತ್ತು ಮಗುವಿನ ಆರೋಗ್ಯದ ಬಗ್ಗೆ ಕಾಳಜಿಯನ್ನು, ಹುಡುಗಿಯರು ಮತ್ತು ಮಹಿಳೆಯರ ಜೀವನದುದ್ದಕ್ಕೂ ಪೌಷ್ಟಿಕಾಂಶದ ಸ್ಥಿತಿಯನ್ನು ಸುಧಾರಿಸುವ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ಪರಿಹರಿಸಬಹುದು, ಜತೆಗೆ ಅವರ ಸ್ವಾಯತ್ತತೆಯನ್ನು, ನಿರ್ದಿಷ್ಟವಾಗಿ ಕುಟುಂಬ, ಸಮುದಾಯ, ಕಾವಲುಕೋರ ಸಂಘಟನೆಗಳು ಅಥವಾ ಸರ್ಕಾರದಿಂದ ಬಲವಂತ ಮತ್ತು ಬಲಪ್ರಯೋಗವಿಲ್ಲದೆ, ಮದುವೆ ಮತ್ತು ಮಾತೃತ್ವದ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ವಯಸ್ಕ ಮಹಿಳೆಯರ ಹಕ್ಕನ್ನು ರಕ್ಷಿಸಬಹುದು ಮತ್ತು ಉತ್ತೇಜಿಸಬಹುದು ಎಂದು ಈ ಮನವಿ ಪತ್ರದಲ್ಲಿ ಹೇಳಲಾಗಿದೆ.

"ಉದ್ದೇಶಿತ ತಿದ್ದುಪಡಿಯಿಂದ ಅಂತಿಮವಾಗಿ ಮಹಿಳೆಯ 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ವಿವಾಹಗಳನ್ನು 'ಬಾಲ್ಯವಿವಾಹ' ಎಂದು ಅಪರಾಧೀಕರಿಸುವಂತಾಗುತ್ತದೆ. ಹೀಗಾಗಿ ಅಂತಹ ಪ್ರತಿ ಮಹಿಳೆ ಮತ್ತು ಅಂತಹ ಸನ್ನಿವೇಶದಲ್ಲಿ ಜನಿಸಿದ ಪ್ರತಿ ಮಗುವು ಕಾನೂನು ರಕ್ಷಣೆಗಳನ್ನು ಕಳೆದುಕೊಳ್ಳುತ್ತದೆ ಮತ್ತು ಅವರನ್ನು ಔಪಚಾರಿಕ ಸಂತಾನೋತ್ಪತ್ತಿ ಆರೋಗ್ಯಪಾಲನೆ ವ್ಯವಸ್ಥೆಯಿಂದ ಹೊರಗೆ ತಳ್ಳಲಾಗುತ್ತದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ, ಭಾರತೀಯ ಮಹಿಳಾ ರಾಷ್ಟ್ರೀಯ ಒಕ್ಕೂಟ, ಅಖಿಲ ಭಾರತ ಪ್ರಗತಿಶೀಲ ಮಹಿಳಾ ಸಂಘ, ಪ್ರಗತಿಶೀಲ ಮಹಿಳಾ ಸಂಘಟನೆ, ಮತ್ತು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಈ ಜಂಟಿ ಮನವಿ ಪತ್ರದಲ್ಲಿ ಹೇಳಿವೆ.

ಮಹಿಳೆಯರ ಕನಿಷ್ಠ ವಿವಾಹ ವಯಸ್ಸನ್ನು 18 ರಿಂದ 21 ಕ್ಕೆ ತಿದ್ದುಪಡಿ ಮಾಡುವ ಸಂಪುಟ ಪ್ರಸ್ತಾವನೆಯನ್ನು ಸರ್ಕಾರ ಹಿಂಪಡೆಯಬೇಕು ಎಂದು ಈ ಸಂಘಟನೆಗಳು ಒತ್ತಾಯಿಸಿದೆ. ಅದರ ಬದಲು ಎಲ್ಲಾ ಹೆಣ್ಣುಮಕ್ಕಳು ಮತ್ತು ಮಹಿಳೆಯರಿಗೆ ಪೌಷ್ಟಿಕತೆ, ಆರೋಗ್ಯ ಮತ್ತು ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಐಸಿಡಿಎಸ್, ಶಿಕ್ಷಣದ ಹಕ್ಕು (ಆರ್.ಟಿ.ಇ) ಮತ್ತು ಇತರ ಕಲ್ಯಾಣ ಹಾಗೂ ಶಿಕ್ಷಣ ಕಾರ್ಯಕ್ರಮಗಳನ್ನು ಬಲಪಡಿಸಬೇಕು ಮತ್ತು ವಿಸ್ತರಿಸಬೇಕು," ಎಂದು ಮನವಿ ಪತ್ರದಲ್ಲಿ ಕೇಳಲಾಗಿದೆ. ಮನವಿ ಪತ್ರದಲ್ಲಿ ಈ ಕೆಳಗಿನ ವಿಷಯಗಳನ್ನು ಮುಂದಿಡಲಾಗಿದೆ:

1. ಮಹಿಳೆಯರ ಕನಿಷ್ಠ ವಿವಾಹ ವಯಸ್ಸನ್ನು ಈಗ ನಿಗದಿಪಡಿಸಿರುವ 18 ವರ್ಷದಿಂದ ಪುರುಷರಿಗೆ ನಿಗದಿಪಡಿಸಿರುವ 21ಕ್ಕೆ ಹೆಚ್ಚಿಸುವ ಮೂಲಕ ಲಿಂಗ ಸಮಾನತೆಯನ್ನು ಉತ್ತೇಜಿಸಲಾಗುವುದಿಲ್ಲ, ಮತದಾನದ ವಯಸ್ಸು 18 ಇರುವಾಗ, ದೇಶದ ಭವಿಷ್ಯವನ್ನು ನಿರ್ಧರಿಸುವ ಹಕ್ಕು ಹೊಂದಿರುವವರಿಗೆ ತಮ್ಮ ಭವಿಷ್ಯವನ್ನು ನಿರ್ಧರಿಸಿರುವ ಹಕ್ಕು ಇಲ್ಲ ಎನ್ನಲಾಗದು.
2. ಮಹಿಳೆಯರಿಗೆ ಮದುವೆಯ ವಯಸ್ಸನ್ನು 18 ರಿಂದ 21 ಕ್ಕೆ ಹೆಚ್ಚಿಸುವುದರಿಂದ ಮಾತ್ರವೇ ನವಜಾತ ಮತ್ತು ಚಿಕ್ಕ ಮಕ್ಕಳ ಉತ್ತಮ ಆರೋಗ್ಯಕ್ಕೆ ಉತ್ತೇಜನೆ ಸಿಗಲಾರದು. ಸರಕಾರಕ್ಕೆ ಈ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ, ಅದು ಐಸಿಡಿಎಸ್ ಕಾರ್ಯಕ್ರಮಕ್ಕೆ ತನ್ನ ಪ್ರತಿ ಬಜೆಟಿನಲ್ಲಿಯೂ ಹಣ ನೀಡಿಕೆಯನ್ನು ಕಡಿತಗೊಳಿಸುತ್ತ ಬರುತ್ತಿರುವುದೇಕೆ?
3. ಸಾರ್ವಜನಿಕ ಆರೋಗ್ಯ ಮತ್ತು ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ವಿಸ್ತರಿಸದೆ ಮತ್ತು ಬಲಪಡಿಸದೆ ಮಹಿಳೆಯರ ಉತ್ತಮ ಆರೋಗ್ಯ ಮತ್ತು ಶಿಕ್ಷಣಕ್ಕೆ ಉತ್ತೇಜನೆ ಸಿಗಲಾರದು. ಬಾಲವಿವಾಹವನ್ನು ನಿರುತ್ತೇಜಿತಗೊಳಿಸಬೇಕು, ಮಹಿಳೆಯರ ಶಿಕ್ಷಣಕ್ಕೆ ಬೆಂಬಲ ನೀಡಬೇಕು ಎಂಬುದೇ ಸರಕಾರದ ಕಾಳಜಿಯಾಗಿದ್ದರೆ, ಅದು * ಮಾಧ್ಯಮಿಕ ಶಾಲಾ ಹಂತದಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಡೆಯಲು 18 ವರ್ಷದ ವರೆಗಿನ ಮಕ್ಕಳನ್ನು ಆರ್.ಟಿ.ಇ.ಗೆ ಸೇರಿಸಲಾಗುವಂತೆ ಆರ್.ಟಿ.ಇ. ಕಾಯಿದೆಯನ್ನು ವಿಸ್ತರಿಸಬೇಕು; * ಮಕ್ಕಳು ಮತ್ತು ಮಹಿಳೆಯರಿಗೆ "ಕೆಜಿಯಿಂದ ಪಿಜಿವರೆಗೆ" ಉಚಿತ ಮತ್ತು ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವ ಕ್ರಮಗಳನ್ನು ಕೈಗೊಳ್ಳಬೇಕು; 3) ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹಕಗಳನ್ನು ಹೆಚ್ಚಿಸಲು ಮತ್ತು ಉಚಿತ ಉನ್ನತ ಶಿಕ್ಷಣವನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ 4) ಯಾವುದೇ ವಯಸ್ಸಿನಲ್ಲಿ, ಬೇಡದ ಮದುವೆಗೆ ಪೋಷಕರ ಬಲವಂತಕ್ಕೊಳಗಾಗುವ ಮತ್ತು ಅಂತರ-ಜಾತಿ, ಅಂತರ-ನಂಬಿಕೆಯ ಸಂಬಂಧದಲ್ಲಿರುವ ವ್ಯಕ್ತಿಗಳಿಗೆ ತಕ್ಷಣದ ಕಾನೂನು ಸಹಾಯ ಮತ್ತು ಬೆಂಬಲವನ್ನು ನೀಡುವ ಸರ್ಕಾರಿ ಸಹಾಯವಾಣಿಯನ್ನು ಒದಗಿಸಬೇಕು.
4. ಪ್ರಸ್ತಾವಿತ ತಿದ್ದುಪಡಿಯು ಮಹಿಳೆಯರ ಸಬಲೀಕರಣಕ್ಕೆ ನೆರವಾಗುವುದಿಲ್ಲ. ಬದಲಿಗೆ ಮದುವೆಯ ವಿಷಯದಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಹಿಂಸಾಚಾರವನ್ನು ಸಬಲೀಕರಿಸುತ್ತದೆ
5. ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮುಖ್ಯ. ಮದುವೆ ಮತ್ತು ಮಾತೃತ್ವದ ವಿಷಯಗಳಲ್ಲಿ ಮಹಿಳೆಯರ ಸ್ವಾಯತ್ತತೆಯನ್ನು ಹೆಚ್ಚಿಸುವುದು ಮಹಿಳಾ ಸಬಲೀಕರಣದಲ್ಲಿ ಒಂದು ಮಹತ್ವದ ಅಂಶವಾಗಿದೆ. ಮದುವೆಯ ಕನಿಷ್ಠ ವಯಸ್ಸು 18 ಆಗಿರುವುದರಿಂದ 18 ನೇ ವಯಸ್ಸಿನಲ್ಲಿ ಮಹಿಳೆಯರನ್ನು ಮದುವೆಗೆ ಒತ್ತಾಯಿಸುವ ಹಕ್ಕು ಪೋಷಕರಿಗೆ ಇದೆ ಎಂದರ್ಥವಲ್ಲ. ಮಹಿಳೆಯರು 18 ನೇ

ಪುಟ 7 ಕ್ಕೆ

ಸಂಪಾದಕೀಯ

ಪಠ್ಯ ಪರಿಷ್ಕರಣೆ: ವಿಷವಿಕ್ಕುವ ಹುನ್ನಾರ ಹಿಮ್ಮೆಟ್ಟಿಸಬೇಕು

ಸಂಘಪರಿವಾರದ ಪುಂಡಾಟಿಕೆಗಳಿಗೆ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದ್ದ ಸರಕಾರ ಈಗ ಪಠ್ಯ ಬದಲಾವಣೆಗೆ ನೇರವಾಗಿ ಕೈ ಹಾಕಿದೆ. ಶೈಕ್ಷಣಿಕ ಪಠ್ಯಗಳ ಸಿದ್ಧತೆಗೆ ಇರುವ ಮೂಲ ನಿರ್ದೇಶನಗಳ ತತ್ವವನ್ನು ನಗ್ನವಾಗಿ ಉಲ್ಲಂಘಿಸಿ ಆರ್.ಎಸ್.ಎಸ್.ನ ರಾಜಕೀಯ ಅಜೆಂಡಾಗಳ ಜಾರಿಗೆ ಮಣೆ ಹಾಕಿರುವುದು ಸಮಾಜದ ಸ್ವಾಸ್ತ್ಯ ಬಯಸುವ ಶಿಕ್ಷಣ ಪ್ರೇಮಿಗಳ ಆಕ್ರೋಶಕ್ಕೂ ಕಾರಣವಾಗಿದೆ. ರಾಜಕೀಯ ಪಕ್ಷವೊಂದು ಆಡಳಿತದಲ್ಲಿ ಬದಲಾದ ಕೂಡಲೇ ಪಠ್ಯಕ್ರಮ ಅದರ ವಸ್ತು ಮತ್ತು ತಾತ್ವಿಕತೆಯ ಸೂತ್ರಗಳನ್ನು ಬದಲಾಯಿಸಬಹುದೇ ಎನ್ನುವ ಗಂಭೀರ ಪ್ರಶ್ನೆಯೂ ಮುನ್ನೆಲೆಗೆ ಬಂದಿದೆ.

ಹತ್ತನೆಯ ತರಗತಿಗಳ ಕನ್ನಡ ವಿಷಯದಲ್ಲಿನ ಕೆಲವು ಮಹತ್ವದ ಪಾಠಗಳನ್ನು ಕಿತ್ತು ಹಾಕಿ ಆ ಜಾಗಕ್ಕೆ ತರಲಿಚ್ಚಿಸಿರುವ ಸೂಚಿತ ಪಠ್ಯಗಳು ಸರಕಾರ ವಾದಿಸುತ್ತಿರುವ ನಿಲುವಿಗೆ ಸ್ವಯಂ ವ್ಯತಿರಿಕ್ತವಾಗಿವೆ ಹಾಗೂ ಅಂತರ್ ವೈರುಧ್ಯಗಳಿಂದ ಕೂಡಿದೆ. ಈ ಪರಿಷ್ಕರಣೆಯಲ್ಲಿ ಶಿಕ್ಷಣವನ್ನು ಸುಧಾರಿಸುವ ಯಾವ ಉದ್ದೇಶವೂ ಇಲ್ಲ. ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯ ಪಠ್ಯ ಪರಿಷ್ಕರಣಾ ಸಮಿತಿಯು ಅಳವಡಿಸಿದ್ದ 'ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಾಮಾಜಿಕ ಸಾಮರಸ್ಯ' ಈ ತತ್ವಗಳ ಹಿನ್ನೆಲೆಯಲ್ಲಿ ಸಮಿತಿಯು ಪಠ್ಯಪುಸ್ತಕವನ್ನು ಪರಿಷ್ಕರಿಸಿತ್ತು. ಆದರೆ 'ಭಾಷಾ ಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕ ನ್ಯಾಯ, ಲಿಂಗ ಸಮಾನತೆ, ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತ ಪ್ರಚಾರಕ್ಕೆ ಅವಕಾಶವಾಗಬಾರದು' ಎಂದು ಈಗಿನ ಸಮಿತಿಯು ಹೇಳುತ್ತಿದೆ. ಆದರೆ ರೋಹಿತ್ ಚಕ್ರತೀರ್ಥ ಎನ್ನುವವರ ಅಧ್ಯಕ್ಷತೆಯ ಸಮಿತಿಯ ಮೂಲಕ ಅಳವಡಿಸುತ್ತಿರುವ ಪಠ್ಯಗಳು ಆ ಎಲ್ಲಾ ಮಾನದಂಡಗಳನ್ನು ಸ್ವಯಂ ಉಲ್ಲಂಘಿಸುತ್ತವೆ. ಪ್ರಜಾಸತ್ತಾತ್ಮಕ, ಮತನಿರಪೇಕ್ಷತೆ ಮತ್ತು ಬಹುತ್ವದ ಮೌಲ್ಯಗಳಿಗೆ ಬದಲಿಯಾಗಿ ಸಮಾಜಕ್ಕೆ ಕಂಟಕವಾಗಿರುವ ಏಕ ರೂಪಿ ಫ್ಯಾಶಿಸ್ಟ್ ಮೌಲ್ಯಗಳನ್ನು ಅವು ಭೋಧಿಸುತ್ತವೆ. ಆರ್.ಎಸ್.ಎಸ್. ವ್ಯಾಖ್ಯಾನಿಸುವ ಅದರ ಕಣ್ಣಳತೆಯ ಬುಡಮೇಲು ಕಲ್ಪನೆಗಳನ್ನು ಸಾದರ ಪಡಿಸುತ್ತವೆ. ಮತಸಹಿಷ್ಣುತೆ, ಬಹು ಸಾಂಸ್ಕೃತಿಕತೆ, ವೈವಿಧ್ಯತೆಯಂತಹ ಮೌಲ್ಯಗಳ ಉದಾತ್ತ ಭಾರತದ ಬದಲಿಗೆ ಅನ್ಯ ಮತದ್ವೇಷ, ಅಸಹನೆ, ಕಂದಾಚಾರ, ಅವೈಚಾರಿಕತೆ, ಅಮಾನವೀಯ ಭಾರತವನ್ನಾಗಿ ಬದಲಿಸುವ ಸಂಘಪರಿವಾರದ ಅಜೆಂಡಾದ ಜಾರಿಗೆ ತೋರುತ್ತಿರುವ ಧಾವಂತ ಈ ಪ್ರಯತ್ನದಲ್ಲಿ ಎದ್ದು ಕಾಣುತ್ತದೆ. ಇಡೀ ದೇಶವೊಂದರ ಹಾಗೂ ಮಾನವ ಸಮಾಜದಲ್ಲಿ ಸಕಾರಾತ್ಮಕ ಪಾತ್ರ ವಹಿಸುವ, ವ್ಯಕ್ತಿತ್ವದ ನಿರ್ಮಾಣದಂತಹ ಮಹೋನ್ನತ ಧ್ಯೇಯ ಶಿಕ್ಷಣಕ್ಕಿದೆ. ಇಂತಹ ಶಿಕ್ಷಣ ವ್ಯವಸ್ಥೆಯನ್ನು, ಮಕ್ಕಳ ಭವಿಷ್ಯವನ್ನು ರೂಪಿಸುಂತಹ ಪಠ್ಯ ರಚನೆ ಮತ್ತು ಶಿಕ್ಷಣ ನೀತಿ ನಿರೂಪಣೆ ಹೊಣೆ ಹೊರುವವರ ಅರ್ಹತೆ ಏನಾಗಿರಬೇಕು? ರೋಹಿತ್ ಚಕ್ರತೀರ್ಥ ರವರ ಅರ್ಹತೆ ವಿದ್ವತ್ ಗೆ ಬದಲಾಗಿ ಸಂಘದ ಸೇವಕ ಎನ್ನುವುದಷ್ಟೇ. ಹಾಗೇ ಅವರನ್ನೂ ಒಳಗೊಂಡು ಪರಿಷ್ಕರಣಾ ಸಮಿತಿಯ ಸದಸ್ಯರ 'ಅನುಭವ' ಪರಿಣಿತಿ, ತಜ್ಞರು ಎತ್ತುವ ಪ್ರಶ್ನೆಗಳಿಗೆ ಬೀದಿ ಬದಿಯಲ್ಲಿ ಚೀರಾಡುವ ಬಜರಂಗದಳದಂತೆ ಉತ್ತರಿಸುವ ಚಕ್ರತೀರ್ಥರ ರೀತಿ ಬೆಚ್ಚಿ ಬೀಳಿಸುವಂತಿದೆ. ಅಂತಹುದೇ ಧಾಟಿಯಲ್ಲಿ ಶಿಕ್ಷಣ ಸಚಿವ ನಾಗೇಶ್ ರವರು ಚಕ್ರತೀರ್ಥರ ರಕ್ಷಣೆಗೆ ಧುಮುಕಿದ್ದಾರೆ. ಪರಿಣಿತರ ಸಲಹೆಯಂತೆ ಬದಲಾವಣೆ ಬಯಸುವ ಬದಲು ಸರಕಾರದ ಅಣತಿಯನ್ನು ಸಮಿತಿಯ ಹೆಸರಲ್ಲಿ ಸಿದ್ಧಗೊಳಿಸಿದಂತೆ ಭಾಸವಾಗುತ್ತದೆ. ವಿದ್ವಾಂಸರು, ವಿಷಯ ಪರಿಣಿತರು ಎತ್ತುವ ಯಾವುದೇ ಪ್ರಶ್ನೆಗಳಿಗೆ ಸಮಜಾಯಿಷಿ ನೀಡುವ ಉತ್ತರದಾಯಿತ್ವವನ್ನೇ ಬೊಮ್ಮಾಯಿ ಸರಕಾರ ಕೈ ಬಿಟ್ಟಿದೆ.

ಈಗ ಪರಿಷ್ಕರಣೆಯ ಹೆಸರಿನಲ್ಲಿ ತೆಗೆದು ಹಾಕಿರುವ ಬರಗೂರು ಸಮಿತಿ ಸಿದ್ಧಪಡಿಸಿದ್ದ ಪಠ್ಯಕ್ರಮದಲ್ಲಿ ಐದು ಪಠ್ಯಗಳನ್ನು ಕೈಬಿಡಲಾಗಿದೆ. ಎ.ಎನ್.ಮೂರ್ತಿರಾಯರ 'ವ್ಯಾಘ್ರಗೀತೆ', ಸಾರಾ ಅಬೂಬಕರ್ ಅವರ 'ಯುದ್ಧ', ಡಾ.ಜಿ. ರಾಮಕೃಷ್ಣ ಅವರ 'ಭಗತ್ ಸಿಂಗ್', ಪಿ.ಲಂಕೇಶ್ ಅವರ 'ಮೃಗ ಮತ್ತು ಸುಂದರಿ' ಹಾಗೂ 'ಜನಪದ ಒಗಟುಗಳು'. ಬದಲಾಗಿ ಕೇಶವ ಬಲಿರಾಮ ಹೆಡ್ಗೇವಾರ್ ಅವರ 'ನಿಜವಾದ ಆದರ್ಶ ಪುರುಷ ಯಾರಾಗಬೇಕು?' ಬನ್ನಂಜೆ ಗೋವಿಂದಾಚಾರ್ಯ ಅವರ 'ಶುಕನಾಸನ ಉಪದೇಶ', ಶಿವಾನಂದ ಕಳವೆ ಅವರ 'ಸ್ವದೇಶೀ ಸೂತ್ರದ ಸರಳ ಹಬ್ಬ' ಮತ್ತು ಗೋವಿಂದ ಪೈ ಅವರ 'ನಾನು ಪ್ರಾಸ ಬಿಟ್ಟ ಕತೆ', 'ಸ್ವಾಮಿ ವಿವೇಕಾನಂದರ ಚಿಂತನೆ' ಎಂಬ ಪಠ್ಯ ಬದಲಾಯಿಸಿ, 'ಉದಾತ್ತ ಚಿಂತನೆಗಳು' ಹೆಸರಿನ ಪಠ್ಯ ಸೇರಿಸಲಾಗಿದೆ. ಈ ಬದಲಾವಣೆಗಳು ಮತ್ತು ಪ್ರಶ್ನಿಸಿದವರ ಮೇಲೆ ಹರಿಹಾಯುತ್ತಿರುವ ವಾದ ವೈಖರಿಯನ್ನು ಗಮನಿಸಿದರೆ ಸಾಕು ನಿಜಕ್ಕೂ ಸಂಘಪರಿವಾರ ಹಾಗೂ ಸರಕಾರದ ನಿಜ ಉದ್ದೇಶ ಏನೆಂಬುದು ತಿಳಿಯುತ್ತದೆ. ಇವೆಲ್ಲಾ ಆರೆಸ್ಸೆಸ್ ನ ಸ್ಪಷ್ಟ ನಿರ್ದೇಶನ ಮತ್ತು ಅದೇ ಕೇಶವ ಶಿಲ್ಪದಲ್ಲೇ ತಯಾರಾದ ಪಾಕ ಎಂಬುದೂ ವೇದ್ಯವಾಗುತ್ತದೆ. ಹಿಂದುತ್ವದ ಫ್ಯಾಶಿಸ್ಟ್ ಮನೋಭಾವವನ್ನು ಶಿಕ್ಷಣ ರಂಗದಲ್ಲಿ ಅದರಲ್ಲೂ ಎಳೆಯ ಮಕ್ಕಳ ಮನಗಳಿಗೆ ಉಣಿಸುವುದು ವಿಷ ಇಕ್ಕಿದಂತೆ ಎನ್ನುವುದನ್ನು ಮರೆಯಬಾರದು. ಇಂತಹ ಸಂಗತಿಗಳ ಬಗ್ಗೆ ನಾಗರೀಕರು, ವಿಶೇಷವಾಗಿ ಪಾಲಕರು ಮೌನ ಪ್ರೇಕ್ಷಕರಾಗಿರಬಾರದು.

ಸಂಘಪರಿವಾರದ ಗುಪ್ತ ಅಜೆಂಡಾ ಸರಕಾರದ ಮೂಲಕ ಜಾರಿಗೊಳಿಸುವ ಪ್ರಯತ್ನಗಳ ವಿರುದ್ಧ ನಾಡಿನ ಚಿಂತಕರು ಎತ್ತಿರುವ ದನಿಗೆ ಎಲ್ಲರೂ ದನಿಗೂಡಿಸಬೇಕು. ಮಕ್ಕಳ ಮನಸ್ಸಿಗೆ ವಿಷವಿಕ್ಕುವ ಹುನ್ನಾರಗಳನ್ನು ಹಿಮ್ಮೆಟ್ಟಿಸಿ ಕಾಪಾಡಬೇಕು. ಇಂತಹ ಸಕಾರಣವಾದ ತೀವ್ರ ವಿರೋಧ ಇರುವಾಗಲೂ ಸರಕಾರ ಜಾರಿಯ ಪ್ರಯತ್ನದ ಭಂಡತನ ತೋರಬಾರದು.

ಜನತಾ ಜಲಧಾರೆ: ಜೆಡಿ(ಎಸ್) ನ ಸಂದೇಶವೇನು?

ಎಸ್.ವೈ.ಗುರುಶಾಂತ್

ಈ ವಾರ

ಮೇ 13 ರಂದು ಬೆಂಗಳೂರಿನ ನೆಲಮಂಗಲ ಪ್ರದೇಶದಲ್ಲಿ ಜರುಗಿದ ಜಾತ್ಯಾತೀತ ಜನತಾ ದಳ– ಜೆಡಿ(ಎಸ್) ಪಕ್ಷದ 'ಜನತಾ ಜಲಧಾರೆ' ಸಮಾರೋಪದ ಬೃಹತ್ ರ್‍ಯಾಲಿ ರಾಜ್ಯದ ರಾಜಕೀಯ ರಂಗದಲ್ಲಿ ಒಂದು ಮಹತ್ವದ ಘಟನೆ. ಈ ರ್‍ಯಾಲಿಯಲ್ಲಿ 3.5 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಜನ ಭಾಗವಹಿಸಿದ್ದಾರೆ ಎನ್ನುವ ಅಂದಾಜಿದೆ. ಸ್ವತಃ ಜೆಡಿ(ಎಸ್) ಐದು ಲಕ್ಷ ಜನ ಭಾಗವಹಿಸಲಿದ್ದಾರೆ ಎಂದು ಪ್ರಕಟಿಸಿತ್ತು. ಜೆಡಿ(ಎಸ್) ನ ವರ್ತಮಾನದಲ್ಲಿನ ಹಲವು ಸೋಲುಗಳನ್ನು ಕಂಡಿದ್ದವರು ಆ ಮಾತನ್ನು ಅಷ್ಟು ಸುಲಭದಲ್ಲಿ ನಂಬಲು ಸಾಧ್ಯವಿರಲಿಲ್ಲ. ಈ ರ್‍ಯಾಲಿಗೆ ಹರಿದು ಬಂದ ಜನಸಾಗರ, ತೋರಿದ ಉತ್ಸಾಹ ಸ್ವತಃ ಜೆಡಿ(ಎಸ್) ನಾಯಕರಿಗೇ ಆತ್ಮವಿಶ್ವಾಸ, ಹುಮ್ಮಸ್ಸು ತುಂಬಿದೆ. ಬಹುತೇಕ ಪಕ್ಷಗಳು 2023 ರ ಚುನಾವಣೆಯ ತಯಾರಿಗೆ ಇಳಿದಿರುವಾಗ ಜೆಡಿ(ಎಸ್) ಈ ಸಮಾವೇಶದ ಮೂಲಕ ಚುನಾವಣಾ ಹೋರಾಟಕ್ಕೆ ಸರ್ವ ಸನ್ನದ್ಧತೆಯನ್ನು ಘೋಷಿಸಿದೆ.

ಜೆಡಿ(ಎಸ್) ಪಕ್ಷ ಇತ್ತೀಚಿನ ಬಹುತೇಕ ಎಲ್ಲ ಚುನಾವಣೆಗಳಲ್ಲಿ ದಯನೀಯವಾದ ಸೋಲನ್ನು ಕಂಡಿದೆ. ರಾಜಕೀಯ ಮತ್ತು ಸಂಘಟನಾತ್ಮಕವಾಗಿಯೂ ಹಿನ್ನಡೆಯನ್ನು ಅನುಭವಿಸಿರುವುದು ಕಾಣುತ್ತದೆ. ವಿಶೇಷವಾಗಿ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಭಾರಿ ಹುರುಪಿನಲ್ಲಿ ಒಬ್ಬರಿಗೆ ಮತ್ತೊಬ್ಬರು ಪೈಪೋಟಿ ಎನ್ನುವಂತೆ ಪ್ರಚಾರದ ಸ್ಪರ್ಧೆಗೆ ಇಳಿದಿದ್ದಾರೆ. ಒಬ್ಬರು ಇನ್ನೊಬ್ಬರಿಗೆ ಪರ್ಯಾಯ ಎನ್ನುವಂತೆಯೂ ಚಿತ್ರಣವನ್ನು ಬಿಂಬಿಸುತ್ತಿದ್ದಾರೆ. ಮಾತ್ರವಲ್ಲ, ಜೆಡಿ(ಎಸ್) ನ ಮೇಲೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಸತತ ದಾಳಿಯನ್ನು ನಡೆಸುತ್ತಿವೆ. ಜೆಡಿ(ಎಸ್) ಪಕ್ಷದಲ್ಲಿನ ಹಲವರು ಪಕ್ಷವನ್ನು ತೊರೆದು ಹೋಗುತ್ತಿದ್ದರೆ, ಕೆಲವರು ತೊರೆಯಲು ಸಿದ್ಧರಿದ್ದಾರೆ. ಅಂತಹವರು ಹೋಗುವುದಿದ್ದರೆ ಹೋಗಲಿ ಎಂದು ಜೆಡಿ(ಎಸ್) ನ ನಾಯಕತ್ವವೇ ಬಹಿರಂಗವಾಗಿ ಹೇಳುವುದರ ಮೂಲಕ ವಲಸೆಯ ಸಾಧ್ಯತೆ ಒಪ್ಪಿಕೊಂಡಿದೆ. ಪರಿಷತ್ತಿನ ಸಭಾಧ್ಯಕ್ಷ ಬಸವರಾಜ ಹೊರಟ್ಟಿಯವರು ನಾಯಕರ 'ಸೌಹಾರ್ದ ಸಮ್ಮತಿ' ಪಡೆದು ಬಿಜೆಪಿಗೆ ಕಾಲಿಟ್ಟಿರುವುದು ಇನ್ನೂ ಕೆಲವರು ಅವರಂತೆ ಚಿಂತಿಸುತ್ತಿರುವುದು ನಿತ್ಯದ ಸುದ್ದಿಗಳು.

ಈ 'ಜನತಾ ಜಲಧಾರೆ' ಸಮಾವೇಶಕ್ಕೆ ಪೂರ್ವಭಾವಿಯಾಗಿ ಕಳೆದ ಏಪ್ರಿಲ್ 16 ರಿಂದ ರಾಜ್ಯದಲ್ಲಿ ಸುಮಾರು 15 ಗಂಗಾರಥಗಳು, 180 ವಿಧಾನ ಸಭಾ ಕ್ಷೇತ್ರದಲ್ಲಿ ಸಂಚರಿಸಿವೆ. ಜನತಾ ಜಲಧಾರೆ ಸಮಾವೇಶದಲ್ಲಿ 'ಗಂಗಾ ಪೂಜೆ' ಮತ್ತು 'ಗಂಗಾ ಆರತಿ' ಪ್ರಮುಖವಾಗಿತ್ತು. ತನ್ನ ರಾಜಕೀಯ ಪ್ರಚಾರದಲ್ಲಿ ರಾಜ್ಯದ ನೀರಾವರಿ ಪ್ರಶ್ನೆಯನ್ನು ಬಹುಮುಖ್ಯವಾದ ಕೇಂದ್ರದ ಪ್ರಶ್ನೆಯನ್ನಾಗಿ ಜೆಡಿ(ಎಸ್) ಬಿಂಬಿಸಿದೆ. ವಿಶೇಷವಾಗಿ, ಈ ಸಮಾವೇಶಕ್ಕೆ ಅತಿ ದೊಡ್ಡ ಸಂಖ್ಯೆಯಲ್ಲಿ ದಕ್ಷಿಣ ಕರ್ನಾಟಕದ ಭಾಗದಿಂದ ಜನರನ್ನು ಅಣಿ ನಡೆಸಿದೆ ಎನ್ನುವುದು ಒಂದು ಗಮನಾರ್ಹವಾದ ಅಂಶ. ಜೆಡಿ(ಎಸ್) ತಾನು ಕರ್ನಾಟಕದಲ್ಲಿ ಒಂದು ಪ್ರಾದೇಶಿಕ ಪಕ್ಷ, ರಾಜ್ಯದಾದ್ಯಂತ ನೆಲೆ ಇರುವ ಪಕ್ಷ ಎಂದು ಬಿಂಬಿಸಿ ಕೊಂಡರೂ ಖಚಿತವಾದ ರಾಜಕೀಯ ಬಲ ಮತ್ತು ಶಾಸಕರ ಪ್ರತಿನಿಧಿತ್ವ ಇರುವುದೇ ದಕ್ಷಿಣ ಕರ್ನಾಟಕದಲ್ಲಿ ಎನ್ನುವುದು ನಿರ್ವಿವಾದ. ತನ್ನದೇ ಸಂಕುಚಿತ ರಾಜಕೀಯ ನಿಲುವು, ಕುಟುಂಬ ರಾಜಕಾರಣ, ಅವಕಾಶವಾದಿ ರಾಜಕೀಯ ಚಂಚಲತೆ, ಸಂಘಟನಾತ್ಮಕವಾಗಿ ನಿಷ್ಕ್ರಿಯತೆ, ಅಧಿಕಾರದ ಅತಿ ಕೇಂದ್ರೀಕರಣ ದಂತಹ ಹಲವು ಪ್ರಶ್ನೆಗಳಿಂದ ಅದು ತನ್ನ ನೆಲೆಯನ್ನು ಹಂತಹಂತವಾಗಿ ಕಳೆದುಕೊಳ್ಳುತ್ತಾ ಇದೀಗ ಮತ್ತೆ ದಕ್ಷಿಣ ಕರ್ನಾಟಕಕ್ಕೆ ಅಂದರೆ ಒಕ್ಕಲಿಗರ ನೆಲೆಯ ಪ್ರದೇಶಕ್ಕೆ ಸೀಮಿತವಾಗಿ ಉಳಿದಿರುವುದು ಗುಟ್ಟಿನ ಸಂಗತಿಯೇನಲ್ಲ. ಆದರೆ ಕರ್ನಾಟಕದಲ್ಲಿ ಬಿಜೆಪಿ ಸ್ಪಷ್ಟ ಬಹುಮತವನ್ನು ಪಡೆಯಲು ಸಾಧ್ಯವಾಗದೇ ಇರುವುದಕ್ಕೆ ದಕ್ಷಿಣ ಕರ್ನಾಟಕದಲ್ಲಿ ಜೆಡಿ(ಎಸ್) ಬಲ ಹೊಂದಿರುವುದು ಕೂಡ ಒಂದು ಕಾರಣವಾಗಿರುವ ಅಂಶ. ಇದನ್ನು ಇತ್ತೀಚೆಗೆ ಗೃಹ ಸಚಿವ ಅಮಿತ್ ಶಾ ಈ ಪ್ರದೇಶಕ್ಕೆ ವಿಶೇಷ ಪಕ್ಷಾಂತರದ ಪ್ಯಾಕೇಜ್ ಮತ್ತು ಅಡ್ಡ ಹಾದಿಗಳ ಅಜೆಂಡಾ ನಿಗದಿಪಡಿಸಿ ರಾಜಕೀಯ ಮತ್ತು ಸಂಘಟನಾತ್ಮಕ ಕಾರ್ಯಸೂಚಿಯ ಚುನಾವಣಾ ಶಂಖ ಊದಿ ಹೋಗಿದ್ದಾರೆ! ಜೊತೆಗೆ ಇಲ್ಲಿಯೇ ಆರೆಸ್ಸೆಸ್ ಕೂಡ ಸಾಮಾಜಿಕ ವಾತಾವರಣವನ್ನು ಕಲಕಿ ಕೋಮುವಾದಿ ದ್ವೇಷದ ಕೃತ್ಯಗಳನ್ನು ರೂಢಿಸಲು ಗಮನ ಕೇಂದ್ರೀಕರಿಸಿದೆ. ಪರ್ಯಾಯ ಬಯಸುವ ಉದಾರವಾದಿಗಳನ್ನು, ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಹಿಂದಿರುವ ಸೆಕ್ಯುಲರ್ ಮತದಾರರನ್ನು ಸೆಳೆಯುವ ಕಾರ್ಯ ಯೋಜನೆ ಬಿಜೆಪಿಯದ್ದು. ಪಕ್ಷೇತರವಾಗಿರುವ ಸಂಸದೆ ಸುಮಲತಾ ಅಂಬರೀಶ್ ಮತ್ತವರ ಬೆಂಬಲಿಗರೂ ಆ ಟಾರ್ಗೆಟ್ ನಿಂದ ಹೊರತಿಲ್ಲ. ಹಾಸನ ಜಿಲ್ಲೆಯಲ್ಲಿ ಖಾತೆ ತೆರೆದಿರುವ ಬಿಜೆಪಿ ಅಲ್ಲಿಯೂ ಸುಮ್ಮನೆ ಕುಳಿತಿಲ್ಲ. ಒಕ್ಕಲಿಗರನ್ನು ಗುರಿಯಾಗಿಸಿರುವ ಬಿಜೆಪಿ ಆದಿಚುಂಚನಗಿರಿ ಮಠವನ್ನೂ ತನ್ನ ಕಾರ್ಯತಂತ್ರದಲ್ಲಿ ಇರಿಸಿದೆ. ಇದು ಕಾಂಗ್ರೆಸ್ ನಲ್ಲಿ ಸಹ ಆತಂಕ ಸೃಷ್ಟಿಸಿದೆಯಾದರೂ ಮುಖ್ಯವಾಗಿ, ಜೆಡಿ(ಎಸ್) ಪಕ್ಷ ತನ್ನ ನೆಲೆಯನ್ನು ಉಳಿಸಿಕೊಳ್ಳಲು ಹೆಣಗಬೇಕಾದ ಆತಂಕದ ಸ್ಥಿತಿಯಲ್ಲಿ ಇದೆ. ಈ ಎಲ್ಲ ಸನ್ನಿವೇಶದ ಹಿನ್ನೆಲೆಯಲ್ಲಿ ಜೆಡಿಎಸ್ಸಿನ ಈಗಿನ ಮುತುವರ್ಜಿಗೆ ಬಹುಮುಖ್ಯ ರಾಜಕೀಯ ಆಯಾಮ ಇದೆ.

ಜನತಾ ಜನಧಾರೆ ಬೃಹತ್ ಸಮಾವೇಶದ ಮೂಲಕ ತಾನು ಕನ್ನಡ ನಾಡಿನಲ್ಲಿ ಒಂದು ಗಂಭೀರ ರಾಜಕೀಯ ಶಕ್ತಿಯೆಂದೂ, ಬಿಜೆಪಿ ಹಾಗೂ ಕಾಂಗ್ರೆಸ್ ಒಳಗೊಂಡು ಯಾರೂ ತನ್ನನ್ನು ಹಗುರವಾಗಿ ಪರಿಗಣಿಸಬಾರದೆಂದೂ ಸ್ಪಷ್ಟ ಸಂದೇಶ ನೀಡಿದೆ. ಮುಂದಿನ ಸರಕಾರ ರಚಿಸುವಲ್ಲಿ ಏಕ ಪಕ್ಷವಾಗಿ ತಾನೇ ಬಲ ಹೊಂದುವ ಆಶಯವನ್ನು ಹೊಂದಿದೆ. ಆದಾಗ್ಯೂ ಪ್ರಾಯೋಗಿಕವಾಗಿ ಅತಂತ್ರದ ತೀರ್ಪನ್ನು ಮತದಾರ ನೀಡಿದಲ್ಲಿ ತಾನೇ' ಕಿಂಗ್ ಮೇಕರ್' ನಂತಹ ನಿರ್ಣಾಯಕ ಪಾತ್ರ ವಹಿಸಬೇಕಾಗುತ್ತದೆ ಎಂಬ ಗಟ್ಟಿ ನಂಬಿಕೆಯಲ್ಲಿ ಜೆಡಿ(ಎಸ್) ಇರುವಂತೆ ಕಾಣುತ್ತಿದೆ.

30–40 ಸ್ಥಾನ ಪಡೆಯಬೇಕಾದರೂ ಅದು ಕಣದಲ್ಲಿ ಹಣಾಹಣಿಗೆ ಇಳಿಯಬೇಕು. ಈಗ ಪೂರ್ಣ ಬಹುಮತ ಪಡೆದೇ ಏಕಪಕ್ಷದ ಸರ್ಕಾರ ರಚಿಸುವಂತೆ ಬಲ ನೀಡಲು ಜನರಲ್ಲಿ ಜೆಡಿ(ಎಸ್) ಮನವಿ ಮಾಡಿದೆ. ಆದರೆ ಅಂತಹ ಸಾಧ್ಯತೆಗಳ ಬಗೆಗೆ ಅದರ ಪ್ರಾಯೋಗಿಕ ಮಿತಿಗಳ ಅಂದಾಜು ಅದರ ನಾಯಕರಿಗೆ ಇದ್ದೇ ಇದೆ. ಏಕಾಂಗಿಯಾಗಿ ಚುನಾವಣೆ ಎದುರಿಸುವ ಗುರಿ ಪ್ರಕಟಿಸಿದ್ದರೂ ಸಮಾನ ಮನಸ್ಕರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಮಾತುಗಳನ್ನೂ ನಾಯಕರು ಆಗೀಗ ಆಡುವುದನ್ನು ಮರೆತಿಲ್ಲ. ಈ ಸಮಾನ ಮನಸ್ಕರು ಯಾರು ಎನ್ನುವ ಬಗ್ಗೆ ನಿಖರವಾಗಿ ಅದು ಗುರುತಿಸಿಕೊಂಡಿಲ್ಲ ಅಥವಾ ಬಹಿರಂಗವಾಗಿ ಹೇಳಿಲ್ಲ. ಒಂದು ವೇಳೆ ಅದಕ್ಕೆ ಅಂತಹ ನಿರ್ದಿಷ್ಟತೆ ಇದ್ದರೆ ರಾಜಕೀಯ ಜಂಟಿ ಕಾರ್ಯಾಚರಣೆ, ಪರ್ಯಾಯ ಧೋರಣೆ, ಕಾರ್ಯಕ್ರಮಗಳನ್ನು ಆಧರಿಸಬಹುದು. ಆದರೆ ಜೆಡಿ(ಎಸ್) ಯಾವುದಕ್ಕೂ ಖಚಿತವಾಗಿ ಅಂಟಿಕೊಳ್ಳದೇ ಚುನಾವಣಾ ಸಂದರ್ಭಕ್ಕೆ ಆಯ್ಕೆ ಮಾಡಿಕೊಳ್ಳುವ ಪೂರ್ಣ ಸ್ವಾತಂತ್ರ್ಯವನ್ನು ತೆರೆದಿಟ್ಟುಕೊಂಡಿದೆ. ಎಡ ಪಕ್ಷಗಳೊಂದಿಗೂ ಸ್ಥಾನ ಹೊಂದಾಣಿಕೆಯ ಬಗ್ಗೆ ಖಾಸಗಿಯಾಗಿ ಹೇಳಿಕೊಂಡರೂ 'ಸಮಾನ ದೂರ'ವನ್ನು ಅದು ಕಾಯ್ದುಕೊಳ್ಳುವುದೇ ಎಂಬುದೂ ಗೊತ್ತಿಲ್ಲ. ರಾಜ್ಯದ ಪ್ರಶ್ನೆಗಳನ್ನು ಬಗೆಹರಿಸುವಲ್ಲಿ ರಾಷ್ಟ್ರೀಯ ಪಕ್ಷಗಳು ವಿಫಲವಾಗಿದ್ದು ಪ್ರಾದೇಶಿಕ ಪಕ್ಷವಾಗಿರುವ ತಾನೇ ಒಂದು ಪರಿಹಾರ ಎನ್ನುವುದಕ್ಕೆ ಹಿಂದಿನಂತೆ ಅದು ಒತ್ತು ನೀಡಿದೆ. ಇದಾಗ ಬೇಕಾದರೆ ಪರ್ಯಾಯ ನೀತಿ, ಕಾರ್ಯಕ್ರಮಗಳನ್ನು

ಪುಟ 4 ಕ್ಕೆ

ಸಾಹಿತಿ, ವಿಚಾರವಾದಿ ಡಿ.ಎಸ್. ನಾಗಭೂಷಣ ನಿಧನ



ಕನ್ನಡದ ವಿಮರ್ಶಕ, ಚಿಂತಕ ಡಿ. ಎಸ್. ನಾಗಭೂಷಣ 19 ಮೇ 2022 ರಂದು ನಿಧನ ಹೊಂದಿದ್ದಾರೆ. ಶಿವಮೊಗ್ಗದ ಕಲ್ಲಹಳ್ಳಿಯಲ್ಲಿ ನೆಲೆಸಿದ್ದ ನಾಗಭೂಷಣ ಅವರಿಗೆ 70 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಶಿವಮೊಗ್ಗದ ರೋಟರಿ ಚಿತಾಗಾರದಲ್ಲಿ ನಡೆದಿದೆ. ಅವರಿಗೆ ಪತ್ನಿ, ಕವಯತ್ರಿ ಸವಿತಾ ನಾಗಭೂಷಣ್ ಇದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ತಿಮ್ಮಸಂದ್ರದ ನಾಗಭೂಷಣ ಅವರು ಗಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ 30 ವರ್ಷ ಕಾರ್ಯ ನಿರ್ವಹಿಸಿದ್ದರು. ಸ್ವಯಂ ನಿವೃತ್ತಿ ಪಡೆದ ನಂತರ ಶಿವಮೊಗ್ಗದ ಕಲ್ಲಹಳ್ಳಿಯಲ್ಲಿ ನೆಲೆಸಿದ್ದರು.

ನೇರ ನಡೆ, ನುಡಿ, ನಿಷ್ಠುರ ವ್ಯಕ್ತಿತ್ವದ ಡಿಎಸ್ ನಾಗಭೂಷಣ್ ಸಾರ್ವಜನಿಕ ಬದುಕಿನಲ್ಲಿ ತೋರಬೇಕಾದ ಬದ್ಧತೆ, ಪ್ರಾಮಾಣಿಕತೆಗೆ ಮಾದರಿಯಾಗಿದ್ದರು.

ಸಾಹಿತ್ಯ ವಿಮರ್ಶೆ, ಸಮಾಜವಾದಿ ಚಿಂತನೆ ಅವರ ಆಸಕ್ತಿಯ ಕ್ಷೇತ್ರಗಳು. ಗಮನ, ಅನೇಕ, ಈ ಭೂಮಿಯಿಂದ ಈ ಆಕಾಶದವರೆಗೆ, ಕುವೆಂಪು ಸಾಹಿತ್ಯ ದರ್ಶನ, ಲೋಹಿಯಾ ಸಮಾಜವಾದದ ದರ್ಶನ, ಬೇರು ಬಿಳಿಲು, ಇದು ಭಾರತ ಇದು ಭಾರತ, ಇಲ್ಲಿ ಯಾವುದೂ ಮುಖ್ಯವಲ್ಲ ಕನ್ನಡ–ಕರ್ನಾಟಕದ ಕಥಾ ಸಂಕಲನಗಳು ಅವರ ಪ್ರಮುಖ ಕೃತಿಗಳು.

ಅವರ 'ಗಾಂಧಿ ಕಥನ ಕೃತಿ' ಈಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪುರಸ್ಕೃತವಾಗಿತ್ತು. ಕೆ.ರಾಮದಾಸ್, ಕಡಿದಾಳು ಶಾಮಣ್ಣ ಸೇರಿದಂತೆ ಹಲವರ ಅಭಿನಂದನಾ ಗ್ರಂಥ ಹೊರತಂದಿದ್ದಾರೆ. ರಸಿಕ ರುದ್ರ ತಪಸ್ವಿ ಲೋಹಿಯಾ, ಸಮಾಜವಾದದ ಸಾಲುದೀಪಗಳು ಸೇರಿದಂತೆ ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ.

ಅವರ ಸಂಪಾದಕತ್ವದಲ್ಲಿ ಸಮಾಜವಾದಿ ಮಾಸಿಕ 'ಹೊಸ ಮನುಷ್ಯ' ಪ್ರಕಟಗೊಳ್ಳುತ್ತಿತ್ತು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸಮಾಜವಾದಿ ಚಿಂತನೆಯ ಹಲವು ಕಾರ್ಯಾಗಾರಗಳನ್ನು ಆಯೋಜಿಸಿದ್ದರು. ಅವರಿಗೆ ಪತ್ನಿ, ಕವಯತ್ರಿ ಸವಿತಾ ನಾಗಭೂಷಣ ಇದ್ದಾರೆ.

ಭೂಸುಧಾರಣೆಗಾಗಿ ಅವಿಶ್ರಾಂತವಾಗಿ ಶ್ರಮಿಸಿದ ಎಂ.ಎಚ್. ರೈತರ ಕಣ್ಮಣಿ

ಉಳುವವನೇ ಹೊಲದೊಡೆಯ ಎಂಬ ಕಾನೂನಿಗಾಗಿ ಅವಿಭಜಿತ ಜಿಲ್ಲೆಯಲ್ಲಿ ರೈತಾಪಿ ಜನತೆ ನಡೆಸಿದ ಸಮರಧೀರ ಹೋರಾಟದ ಫಲವಾಗಿ ಬಡವರಿಗೆ ರೈತರಿಗೆ ಭೂಮಿ ಪಡೆಯಲು ಸಾಧ್ಯವಾಯಿತು. ಇಂತಹ ಪ್ರಮುಖ ಹೋರಾಟದ ರುವಾರಿಯಾಗಿ ದುಡಿಯುವ ವರ್ಗದ ಕಣ್ಮಣಿಯಾಗಿ ಮೂಡಿದ ಎಂ.ಎಚ್ ಕ್ರಷ್ಣಪ್ಪರವರ ನಾಯಕತ್ವ ಜಿಲ್ಲೆಗೆ ಮಾದರಿಯಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು ಅಭಿಪ್ರಾಯ ಪಟ್ಟರು.

ಸ್ವಾತಂತ್ರ್ಯ ಹೋರಾಟಗಾರರೂ, ಹಿರಿಯ ಕಮ್ಯುನಿಸ್ಟ್ ನಾಯಕರಾಗಿದ್ದ ಕಾಂ.ಎಂ.ಎಚ್. ಕ್ರಷ್ಣಪ್ಪ ರವರ 11ನೇ ಸಂಸ್ಕರಣಾ ದಿನಾಚರಣೆಯ ಅಂಗವಾಗಿ ನಗರದ ವಿಕಾಸ ಕಚೇರಿಯಲ್ಲಿ ರೈತ ಚಳುವಳಿಯ ಹಿರಿಯ ನೇತಾರ ಎಂ.ಎಚ್. ಎಂಬ ವಿಷಯದ ಬಗ್ಗೆ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ವಿಚಾರ ಮಂಡಿಸುತ್ತಾ ಈ ಮಾತುಗಳನ್ನು ಹೇಳಿದರು.

ಪ್ರಗತಿಪರ ಚಿಂತಕರಾದ ಡಾ. ಕ್ರಷ್ಣಪ್ಪ ಕೊಂಚಾಡಿ, ಕಾರ್ಮಿಕ ಮುಖಂಡರಾದ ಸುಕುಮಾರ್, ಸಮುದಾಯದ ವಾಸುದೇವ ಉಚ್ಚಿಲ್ ರವರು ಪೂರಕ ಮಾತುಗಳನ್ನಾಡುತ್ತಾ, 'ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಲ್ಲಿ ನೌಕಾ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಎಂ.ಎಚ್.ರವರು ಬಳಿಕ ರಾಜೀನಾಮೆ ನೀಡಿ ಜನಸಾಮಾನ್ಯರ ಉತ್ತಮ ಬದುಕಿಗಾಗಿ ತನ್ನ ಸರ್ವಸ್ವವನ್ನೂ ಮೀಸಲಿಟ್ಟು ರೈತ ಕಾರ್ಮಿಕರ ಏಳಿಗೆಗಾಗಿ ಶ್ರಮಿಸಿದರು. ಮೂರ್ತೆದಾರರನ್ನು ಕೂಡ ಸಂಘಟಿಸಿ ಪ್ರಬಲ ಹೋರಾಟಕ್ಕೆ ಮುನ್ನುಡಿ ಬರೆದವರು ಎಂ.ಎಚ್.ರವರ ಇಡೀ ಜೀವನವೇ ಆದರ್ಶಪ್ರಾಯವಾಗಿದೆ' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಅಖಿಲ ಬಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಯಶವಂತ ಮರೋಳಿಯವರು ಮಾತನಾಡುತ್ತಾ, 'ತನ್ನ ಜೀವನದುದ್ದಕ್ಕೂ ಸರಳತೆಯನ್ನು ಮೈಗೂಡಿಸಿಕೊಂಡ ಎಂ.ಎಚ್ ರವರು ತನ್ನ ಕೊನೆಯ ಉಸಿರು ಇರುವವರೆಗೂ ಕಮ್ಯುನಿಸ್ಟರಾಗಿ ಬಾಳಿ ಬದುಕಿದರು ಹಾಗೂ ಎಲ್ಲರನ್ನು ಪ್ರೀತಿಸಿ, ಇಡೀ ಜಗತ್ತೇ ಒಂದು ಕುಟುಂಬ ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿದರು' ಎಂದು ಹೇಳಿದರು.

ವೇದಿಕೆಯಲ್ಲಿ ವಕೀಲರ ಸಂಘಟನೆಯ ನಾಯಕರಾದ ರಾಮಚಂದ್ರ ಬಬ್ಬುಕಟ್ಟೆಯವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸುನಿಲ್ ಕುಮಾರ್ ಬಜಾಲ್ ರವರು ಸ್ವಾಗತಿಸಿದರೆ, ಕೊನೆಯಲ್ಲಿ ಮನೋಜ್ ವಾಮಂಜೂರು ರವರು ವಂದಿಸಿದರು.



ಜನತಾ ಜಲಧಾರೆ........ ಪುಟ 3 ರಿಂದ

ಸಾರ್ವಜನಿಕವಾಗಿ ಖಾತ್ರಿ ಪಡಿಸಬೇಕು. ಬರೀ ಹೇಳುತ್ತಾ ಹೋಗುವುದರಿಂದ ಏನು ಪ್ರಯೋಜನ?

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಮತದಾರರು ನಿರಂತರವಾಗಿ ಒಂದು ಪಕ್ಷಕ್ಕೇ ಎರಡನೆಯ ಮೂರರಷ್ಟು ಅಥವಾ ಪೂರ್ಣ ಬಹುಮತವನ್ನು ಬಹುತೇಕ ನೀಡುತ್ತಿಲ್ಲ. ಕಾಂಗ್ರೆಸ್ ಪಕ್ಷದ ವಿರುದ್ಧ ಜನತಾ ಪಕ್ಷವನ್ನು ಗೆಲ್ಲಿಸುವ ಮೂಲಕ ಒಂದು ಪರ್ಯಾಯವನ್ನು ಕಂಡುಕೊಂಡಿದ್ದ ಸನ್ನಿವೇಶವನ್ನು ಹಂತ ಹಂತವಾಗಿ ಬಿಜೆಪಿ ತಂತ್ರ–ಕುತಂತ್ರಗಳ ಮೂಲಕವಾಗಿ ಕಬಳಿಸುತ್ತಾ ತಾನೆ ಪರ್ಯಾಯ ಎಂದು ನಿಂತಿದೆ. ಇಂದು ಬಿಜೆಪಿಗೆ ಪರ್ಯಾಯ ಏನು ಎನ್ನುವ ಹಂತಕ್ಕೆ ರಾಜಕೀಯ ಬದಲಾಗಿದೆ. ಕಾಂಗ್ರೆಸ್ ತುಲನಾತ್ಮಕವಾಗಿ ವಿಸ್ತಾರ ಹೊಂದಿದ್ದರೂ ಅದರ ಸ್ಥಿತಿಯೂ ದುರ್ಬಲವಾಗಿದೆ. ಕಾಂಗ್ರೆಸ್ ಗೆ ನಿಜ ಪರ್ಯಾಯವಲ್ಲದ ನೀತಿಗಳು, ತಪ್ಪು ರಾಜಕೀಯ ಆರ್ಥಿಕ ಧೋರಣೆಗಳು, ಸಂದರ್ಭಸಾಧಕ ರಾಜಕಾರಣದಿಂದ ಜನತಾ ಪರಿವಾರದ ಬಹುತೇಕ ಬಣಗಳು ಸಂಪೂರ್ಣ ನಾಶವಾಗಿ ಜೆಡಿ(ಎಸ್) ಮಾತ್ರವೇ ಉಳಿದುಕೊಂಡಿದೆ. ಈಗಲೂ ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಗೆ ಮೂರನೆಯ ಪರ್ಯಾಯವನ್ನು ಪ್ರತಿಪಾದಿಸುವ, ಬೆಂಬಲಿಸುವ ಬಹು ದೊಡ್ಡ ನೆಲೆ ಬಲವಾಗಿರುವುದು ಅದಕ್ಕೆ ಬಹು ಮುಖ್ಯ ಕಾರಣ. ಇದು ಜಾತಿ, ರೈತ–ಮಣ್ಣಿನ ಮಕ್ಕಳು ಮುಂತಾದ ಅಸ್ಮಿತತೆಗಳೊಂದಿಗೆ ತಳುಕು ಹಾಕಿರುವುದು ಒಂದು ಸಂಗತಿ ಕೂಡ. ಕರ್ನಾಟಕದಲ್ಲಿ ಪರ್ಯಾಯ ರೂಪಿಸ ಬೇಕೆಂದರೆ ಮೂರನೆಯ ಪರ್ಯಾಯ ಬಯಸುವ ಶಕ್ತಿಗಳನ್ನು ಜನಪರ ಪರ್ಯಾಯ ರಾಜಕಾರಣದ ಮೂಲಕ ಕ್ರೋಢೀಕರಿಸುವುದು ಮತ್ತು ವಿಸ್ತರಿಸುವುದು ಅಗತ್ಯ. ಈ ದೆಸೆಯಲ್ಲಿ ಎಡ ಪಕ್ಷಗಳ ಶಕ್ತಿ ಸೀಮಿತವಿದ್ದರೂ ಹೋರಾಟದ ಕಣದಲ್ಲಿರುವ ಇತರೆ ಸೆಕ್ಯುಲರ್, ಪ್ರಗತಿಪರ ಶಕ್ತಿಗಳೂ ಬಹು ಮುಖ್ಯವಾದ ಪಾತ್ರವನ್ನು ವಹಿಸಬಹುದು. ಚುನಾವಣೆಗೆ ಸಿದ್ಧವಾಗುತ್ತಿರುವ ಜೆಡಿ(ಎಸ್) ಪಕ್ಷ ತನ್ನ ಮಿತ್ರರು ಮತ್ತು ಶತೃಗಳು ಯಾರೆಂಬ ಬಗ್ಗೆ ಇನ್ನಷ್ಟೂ ಸ್ಪಷ್ಟತೆ ಪಡೆಯುವುದು, ಜನರೆದುರು ಪ್ರತಿಪಾದಿಸಿ ಬದ್ಧತೆಯಿಂದ ಧೃಡವಾಗಿ ನಿಲ್ಲುವುದು ಅಗತ್ಯ ಎಂದಷ್ಟೇ ಈ ಹಂತದಲ್ಲಿ ಹೇಳಬಹುದು.

ಬಿಜೆಪಿ ವಾಹನ ಏರಿದ ಹೊರಟ್ಟಿಯವರು

ಬಸವರಾಜ ಹೊರಟ್ಟಿ ಅವರು ಏಳು ಬಾರಿ ವಿಧಾನಪರಿಷತ್ತಿಗೆ ಆಯ್ಕೆಯಾದವರು. ಜೆಡಿ ಎಸ್ ನಾಯಕರಾಗಿ,, ಹಾಲಿ ಸಭಾಪತಿಗಳಾಗಿ ಇದೀಗ ರಾಜಿನಾಮೆ ಕೊಟ್ಟವರು. ಹಿಂದೆ ಸಚಿವರಾಗಿ ಕೆಲಸ ಮಾಡಿದ ಅನುಭವವೂ ಇದೆ. ವಿಶೇಷವಾಗಿ ಶಿಕ್ಷಕರ ಸಂಘಟನೆಯನ್ನು ಕಟ್ಟಿ ಹೋರಾಟಗಳ ಅನುಭವ ಇರುವವರು. ವಿಧಾನಪರಿಷತ್ತಿನ ಸಭಾಪತಿಗಳಾಗಿರುವಾಗಲೇ ಹೊರಟ್ಟಿಯವರು ಬಿಜೆಪಿ ಸೇರಿದರು. ಬಿಜೆಪಿಗೆ ಸೇರಲು ಕಾರಣಗಳೇನು ಅನ್ನುವುದು ವಿವರವಾಗಿ ತಿಳಿಸಿಲ್ಲ. ಮೋದಿ–ಅಮಿತ್ ಶಾ ರವರನ್ನು ಅವರ ದಕ್ಷ ಆಡಳಿತದ, ಸರ್ಕಾರವನ್ನು ಇಲ್ಲವೇ ಸಂಘಪರಿವಾರದ ಶಿಸ್ತನ್ನು ಬಹುವಾಗಿ ಮೆಚ್ಚಿ ದೇಶಪ್ರೇಮದ ಸಲುವಾಗಿ ಬಿಜೆಪಿ ಸೇರುತ್ತಿದ್ದೇನೆ ಎಂದು ಹೇಳಿಕೊಳ್ಳುವವರು ಇದ್ದೇ ಇದ್ದಾರೆ! ಆದರೆ ಹೊರಟ್ಟಿಯವರು ಹಾಗೆ 'ಹಾಡ'ದಿದ್ದರೂ ಅಮಿತ್ ಶಾ ರವರ ಸಮ್ಮುಖದಲ್ಲಿ ಬಿಜೆಪಿಗೆ ಸೇರುವುದನ್ನು ಪ್ರಕಟಿಸಿದರು. ಹೇಗೂ ಮತ್ತೇ ಪರಿಷತ್ತಿನ ಸದಸ್ಯರಾಗಬೇಕು, ತಮ್ಮ ಈ ಭವಿಷ್ಯದಲ್ಲೇ ಮಗನ ರಾಜಕೀಯ ಭವಿಷ್ಯ ಅಡಗಿದೆಯೆಂದು ಚಿಂತಿಸಿದ್ದಾರೆನ್ನುವ ಮಾತುಗಳೂ ಇವೆ. ವಿಚಿತ್ರ ಎಂದರೆ ಸಭಾಧ್ಯಕ್ಷರಾಗಿ ಇರುವಾಗಲೇ ಅಮಿತ್ ಶಾ ರವರನ್ನು ಕಂಡು ಬಿಜೆಪಿಗೆ ಸೇರುವುದರ ನಿರ್ಧಾರವನ್ನು ಪ್ರಕಟಿಸಿರುವುದು! ಸಭಾಧ್ಯಕ್ಷ ಆ ಶಾಸನಸಭೆಯ ಸದಸ್ಯರಾಗಿರುತ್ತಾರೆ ಎನ್ನುವುದು ನಿಜ. ಕೆಲವೊಮ್ಮೆ ಸ್ವತಂತ್ರವಾಗಿಯೂ ಇಲ್ಲವೇ ಪಕ್ಷೇತರ ಅಥವಾ ಒಂದು ಪಕ್ಷದ ಸದಸ್ಯರಾಗಿ ಆಯ್ಕೆಯಾಗುವುದು ಸಂವಿಧಾನಾತ್ಮಕವಾದ ಪದ್ಧತಿ. ಆದರೆ ಸಭಾಧ್ಯಕ್ಷರಾದ ಬಳಿಕ ತಮ್ಮ ಮೂಲ ಪಕ್ಷವನ್ನು ಪ್ರತಿನಿಧಿಸುವುದಿಲ್ಲ, ಬದಲಿಯಾಗಿ ಪಕ್ಷಾತೀತವಾಗಿಯೂ ಇರಬೇಕಾಗುತ್ತದೆ. ಆದರೆ ಈ ನಿಯಮಗಳು ಹೊರಟ್ಟಿಯವರಿಗೆ ಗೊತ್ತಿಲ್ಲವೆಂದಲ್ಲ .ಗೊತ್ತಿದ್ದು ಪ್ರಜ್ಞಾಪೂರ್ವಕವಾಗಿಯೂ ಸಹ ಅಮಿತ್ ಶಾ ರವರನ್ನು ಕಂಡು ಬಿಜೆಪಿಗೆ ಸೇರುವುದನ್ನು ಪ್ರಕಟಿಸಿದ್ದಾರೆ. ಆದರೆ ಬಿಜೆಪಿಯ ಸಂವಿಧಾನ ಉಲ್ಲಂಘನಾ ಸಂಸ್ಕೃತಿಗೆ ಒಗ್ಗಿ ಕೊಂಡಿರುವುದಾಗಿ ಪ್ರಕಟಿಸಿದ್ದಾರೆ. ಸಂವಿಧಾನಾತ್ಮಕ ಕನಿಷ್ಠ ನಿಯಮಗಳನ್ನು ಅದರ ಗೌರವವನ್ನು ಕಾಪಾಡುವಂತಹ ಅವಶ್ಯಕತೆ ಇರುವುದಿಲ್ಲ ಮತ್ತು ಅದಕ್ಕೆ ಸಿದ್ದರು ಎಂಬುದನ್ನು ಹೇಳಿದಂತಿದೆ. ಹೊರಟ್ಟಿಯವರು ಮತ್ತೆ ಅಧಿಕಾರದಲ್ಲಿ ಉಳಿದುಕೊಳ್ಳುವ ಇರಾದೆ ಒಂದನ್ನು ಬಿಟ್ಟರೆ ರಾಷ್ಟ್ರಕ್ಕಾಗಿ ರಾಜ್ಯದಲ್ಲಿ ಒಳಿತು ಬಯಸುವ ಯಾವ ಸೂಚನೆಯೂ ಇಲ್ಲ. ಅಧಿಕಾರ ವಲಯದಲ್ಲಿ ತಾವು ಮುಂದುವರೆಯುವ ಇಂಗಿತವನ್ನು ಸೂಚಿಸಿರುವ ಹೊರಟವರು ಮತ್ತೆ ಪದವೀಧರ ಕ್ಷೇತ್ರದಿಂದ ಗೆದ್ದು ಬರಲು ಸಿದ್ಧವಾಗಿದ್ದಾರೆ ಸಂದರ್ಭ ಸಾಧಕ ತನಕ್ಕೆ ಶಿಕ್ಷಕ ಸಮುದಾಯ ಪದವೀಧರರು ಮಣೆ ಹಾಕುತ್ತಾರೆಯೇ? ಯಾವುದೇ ನೀತಿ–ನಿಯಮ ರಾಜಕೀಯ ನೈತಿಕತೆ ಮತ್ತು ಸಂವಿಧಾನ ಬದ್ಧತೆ ಇಲ್ಲದಿರುವುದೇ ರಾಜಕಾರಣದಲ್ಲಿ ಮುಂದುವರಿಯಲು ಅರ್ಹತೆ ಎಂದು ಬಿಂಬಿಸುತ್ತಾ ಬಂದಿರುವ ಬಿಜೆಪಿಗೆ ಹೊರಟ್ಟಿಯವರು ತಕ್ಕ ಅನುಯಾಯಿ ಆಗಬಹುದು ಏನೋ!?

ಆರ್‌ಎಸ್‌ಎಸ್ ಸಂಸ್ಥಾಪಕ ಹೆಗ್ಡೆವಾರ್ ಭಾಷಣ–ಕೋಮುವಾದಿ ವಿಚಾರ ಸೇರ್ಪಡೆ ವಿರೋಧಿಸಿ ಎಸ್‌ಎಫ್‌ಐ ಪ್ರತಿಭಟನೆ

2022–23ರ ಶೈಕ್ಷಣಿಕ ವರ್ಷದ ಶಾಲಾ ಪಠ್ಯ ಪುಸ್ತಕದಲ್ಲಿ ಸ್ವಾತಂತ್ಯ ಹೋರಾಟಗಾರ ಭಗತ್ ಸಿಂಗ್ ಪಾಠ ಸೇರಿ ಅನೇಕ ಪ್ರಗತಿಪರ ಚಿಂತನೆಯ ಪೂರಕ ಪಾಠಗಳನ್ನು ಕೈ ಬಿಟ್ಟು ಸಂಘಪರಿವಾರದ ಸಂಸ್ಥಾಪಕ ಹೆಗ್ಡೇವಾರ್ ಭಾಷಣ ಸೇರಿದಂತೆ ಸೇರ್ಪಡೆಯೊಂದಿಗೆ ಶಿಕ್ಷಣದ ಕೇಸರೀಕರಣ ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಸಮಿತಿ ಪ್ರತಿಭಟನೆ ನಡೆಸಿತು.

ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಎದುರು ಇಂದು(ಮೆ 17) ಪ್ರತಿಭಟನೆ ನಡೆಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಆರ್. ವಿಶಾಲ್ ಅವರಿಗೆ ಮನವಿ ಸಲ್ಲಿಸಿದರು.

ಎಸ್‌ಎಫ್‌ಐ ಅಖಿಲ ಭಾರತ ಜಂಟಿ ಕಾರ್ಯದರ್ಶಿ ನಿತೀಶ್ ನಾರಾಯಣನ್ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಬಗ್ಗೆ 10ನೇ ತರಗತಿ ಪಠ್ಯದಿಂದ ಕೈ ಬಿಟ್ಟು ಸ್ವಾತಂತ್ರ್ಯ ಚಳುವಳಿಯಿಂದ ದೂರವಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕ ಕೆ.ಬಿ. ಹೆಗ್ಡೇವಾರ್ ಭಾಷಣ ಸೇರಿಸಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ. ಬಿಜೆಪಿ ವಸಾಹತುಶಾಹಿ ಬ್ರಿಟಿಷರ ಜೊತೆಗೆ ರಾಜಿಯಾದ ಸಾವರ್ಕರ್ ಸಂತತಿ ಆದ್ದರಿಂದಲೇ ಅಪ್ಪಟ ದೇಶಪ್ರೇಮಿ ಭಗತ್ ಸಿಂಗ್ ಪಠ್ಯವನ್ನು ತೆಗೆದಿದೆ ಎಂದರು.

ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅಮರೇಶ ಕಡಗದ ಮಾತನಾಡಿ, ಹತ್ತನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ ಹೆಗ್ಡೆವಾರ್ ಅವರ "ನಿಜವಾದ ಆದರ್ಶ ಪುರುಷ ಯಾರಾಗಬೇಕು?" ಎಂಬ ಭಾಷಣವನ್ನು ಸೇರಿಸಲಾಗಿದೆ. ಈ ಪಠ್ಯದಲ್ಲಿ ಆರ್‌ಎಸ್‌ಎಸ್ ಶಾಖೆಯ ಕಾರ್ಯವಿಧಾನ, ಭಗಧ್ವಜ ಗೌರವಿಸಬೇಕು ಎಂದೆಲ್ಲಾ ಹೇಳಲಾಗಿದೆ. ಇದು ರಾಷ್ಟ್ರ ಧ್ವಜ ಮತ್ತು ಸಂವಿಧಾನಕ್ಕೆ ವಿರುದ್ದವಾದದ್ದು. ಇತ್ತೀಚಿಗೆ ಬಿಜೆಪಿಯ ಕೆ.ಎಸ್. ಈಶ್ವರಪ್ಪ ಹೇಳಿದ ಮಾತಿನಂತೆ ಬಿಜೆಪಿ ಕೇಸರಿ ಧ್ವಜವೇ ದೇಶದ ಧ್ವಜ ಎಂದು ಬಿಂಬಿಸುವ ರೀತಿಯಿದೆ ಎಂದರು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಕೆ. ವಾಸುದೇವರೆಡ್ಡಿ ಮಾತನಾಡಿ, ನೂತನ ಶಿಕ್ಷಣ ಪುಟ 12 ಕ್ಕೆ

ಸಾವರ್ಕರ್ ಚಿತ್ರ ಅಳವಡಿಸದಿದ್ದರೆ ಸ್ಮಾರಕ ಗ್ಯಾಲರಿಗೆ ಬೆಂಕಿ ಹಾಕುವುದಾಗಿ ಆರ್‌ಎಸ್‌ಎಸ್ ನಿಂದ ಬೆದರಿಕೆ

ಗುರುರಾಜ ದೇಸಾಯಿ

ಕರ್ನಾಟಕದ ಜಲಿಯನ್ ವಾಲಾ ಬಾಗ್ ಎಂದೇ ಖ್ಯಾತಿ ಪಡೆದ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥ ಪ್ರದೇಶದಲ್ಲಿ ಆರ್‌ಎಸ್‌ಎಸ್‌ನವರ ಉಪಟಳ ಹೆಚ್ಚಾಗಿದೆ. ಸಮಗ್ರ ಸ್ವಾತಂತ್ರ್ಯ ಹೋರಾಟವನ್ನು ಬಿಂಬಿಸುವ ಚಿತ್ರಗಳಿರುವ ಫೋಟೋ ಗ್ಯಾಲರಿಯಲ್ಲಿ ಸಾರ್ವಕರ್ ಚಿತ್ರಗಳನ್ನು ಅಳವಡಿಸಬೇಕು, ಕೋಮುವಾದಕ್ಕೆ ಸಂಬಂಧಿಸಿದ ಚಿತ್ರದಿಂದ ಆರ್‌ಎಸ್‌ಎಸ್ ಹೆಸರು ತೆಗೆಯಬೇಕು ಎಂದು ಬೆದರಿಕೆಯನ್ನು ಹಾಕಲಾಗುತ್ತಿದೆ.

ವಿದುರಾಶ್ವತ್ಥ ಸ್ವಾತಂತ್ರ್ಯ ಚಳುವಳಿಯ ಕೇಂದ್ರವಾಗಿತ್ತು. ಹೋರಾಟದ ಯೋಜನೆಯ ಕುರಿತು ಅಲ್ಲಿ ಚರ್ಚೆ ಸಂವಾದಗಳು ನಡೆಯುತ್ತಿದ್ದವು. 1938 ರಲ್ಲಿ ನಡೆದ ಧ್ವಜ ಸತ್ಯಾಗ್ರಹ ಸಂದರ್ಭದಲ್ಲಿ ಗೋಲಿಬಾರ್ ನಡೆಯಿತು. 96 ಸುತ್ತುಗಳ ಗುಂಡಿನ ದಾಳಿಯಲ್ಲಿ 32ಕ್ಕೂ ಹೆಚ್ಚು ಜನರು ಮೃತಪಟ್ಟರು, ಹಲವರು ಗಾಯಗೊಂಡರು. ಬಲಿದಾನ ಮಾಡಿದವರಲ್ಲಿ 10 ದೇಹಗಳು ಮಾತ್ರ ಪತ್ತೆಯಾದವು. ಈ ಹೋರಾಟವನ್ನು ಕರ್ನಾಟಕ ಜಲಿಯನ್ ವಾಲಾಬಾಗ್ ಎಂದು ಕರೆಯಲಾಗುತ್ತದೆ. ದೊರೆತ 10 ಮೃತ ದೇಹಗಳ ಶರೀರಗಳನ್ನು ವಿದುರಾಶ್ವತ್ಥದ ಸಮೀಪದಲ್ಲಿರುವ ಉದ್ಯಾನವನದಲ್ಲೇ ಹೂತು ಸ್ಮಾರಕವನ್ನು ಸ್ಥಾಪಿಸಲಾಗಿದೆ. ಈ ವೀರರ ಇತಿಹಾಸ ಕುರಿತು ಲಾವಣಿ ಪದವನ್ನು ಬರೆಯಲಾಗಿದೆ. ಹೋರಾಟದ ಚಿತ್ರವಣವನ್ನು ತೆರೆದಿಡುವ ಆ ಲಾವಣಿ ಪದ ಈ ರೀತಿಯಾಗಿದೆ.

ಒಂಭೈನೂರ್ ಮೂವತ್ತೆಂಟನೆ ಏಪ್ರಿಲ್
ತಿಂಗಳ ಇಪ್ಪತ್ತೈದರೊಳು ತುಂಬಿರೆ
ಬಹು ಪ್ರಜೆ ಸಂಭ್ರಮದಿಂದಲಿ
ವಿದುರಾಶ್ವತ್ಥ ಜಾತ್ರೆಯೊಳು,
ಸುತ್ತಮುತ್ತಲು ಲಾಠಿ ಹೊಡೆತಗಳ
ಮತ್ತೆ ಗುಂಡಿನ ಏಟುಗಳ್ ಸತ್ತ
ಹೆಣಗಳ
ಲೆಕ್ಕವಿಲ್ಲವು ಹೊತ್ತರೆಷ್ಟೋ
ಗುಪ್ಪದೊಳ್".

ಈ ಹೋರಾಟದಲ್ಲಿ ಮೃತಪಟ್ಟವರ ಸ್ಮರಣಾರ್ಥ 1973ರಲ್ಲಿ ಸ್ಮಾರಕ ಶಿಲೆ, 2004ರಲ್ಲಿ ಸ್ತೂಪ ಮತ್ತು ವೀರಸೌಧವನ್ನು ನಿರ್ಮಿಸಲಾಗಿದೆ. 2009 ರಲ್ಲಿ ಸಮಗ್ರ ಭಾರತ ಸ್ವಾತಂತ್ರ್ಯ ಹೋರಾಟವನ್ನು ಬಿಂಬಿಸುವ ಒಂದು ಬೃಹತ್ ಫೋಟೋ ಗ್ಯಾಲರಿಯನ್ನು ನಿರ್ಮಾಣ ಮಾಡಲಾಯಿತು. ಈ ಸ್ಮಾರಕದಲ್ಲಿ ಜಾತಿ, ವರ್ಗ, ಧರ್ಮ ಭೇದವಿಲ್ಲದೆ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದ ಸಮಸ್ತ ಭಾರತೀಯರ ಕೊಡುಗೆಯನ್ನು ವಿಶಾಲ ತಳಹದಿಯ ಮೇಲೆ ಬಿಂಬಿಸುವ ಪ್ರಯತ್ನವನ್ನು ಮಾಡಲಾಗಿದೆ. ಎಡಪಂಥೀಯ ಮತ್ತು ಬಲಪಂಥೀಯ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಇಲ್ಲಿ ಅಳವಡಿಸಲಾಗಿದೆ. ನಿರ್ಮಾಣವಾದಾಗಿನಿಂದ ಇಲ್ಲಿಯವರೆಗೆ ಸಾವಿರಾರು ಮಂದಿ ಈ ಸ್ಮಾರಕಕ್ಕೆ ಭೇಟಿ ನೀಡಿದ್ದಾರೆ. ಶಾಲಾ? ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು, ಮುಖ್ಯಮಂತ್ರಿಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಚಿವರುಗಳು, ರಾಜ್ಯಪಾಲರು, ಸರ್ಕಾರದ ಉನ್ನತ ಅಧಿಕಾರಿಗಳು, ವಿವಿಗಳ ಉಪಕುಲಪತಿಗಳು, ಸಾರ್ವಜನಿಕರು ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರೆ.

ಆರ್‌ಎಸ್‌ಎಸ್ ನಿಂದ ಒತ್ತಡ:

ರಾಜ್ಯದಲ್ಲಿ ಇತ್ತೀಚೆಗೆ ಆರಂಭವಾಗಿರುವ ಧರ್ಮ ದಂಗಲ್ ಕರಿ ನೆರಳು ಈ ಸ್ಮಾರಕದ ಮೇಲೂ ಬಿದ್ದಿದೆ. ಹಿಂದೂ ಧರ್ಮವನ್ನು ಅವಹೇಳನ ಮಾಡುವ ಮತ್ತು ತಮ್ಮ ಸಿದ್ದಾಂತಕ್ಕೆ ಒಪ್ಪಿಗೆಯಾಗದ ಚಿತ್ರಗಳನ್ನು ಗ್ಯಾಲರಿಯಿಂದ ತೆಗೆಯಬೇಕು. ಅಲ್ಲಿ ಸಾರ್ವಕರ್ ರವರ ಚಿತ್ರವನ್ನು ಅಳವಡಿಸಬೇಕು ಎಂದು ಆರ್‌ಎಸ್‌ಎಸ್, ಬಜರಂಗದಳದವರು ಪಟ್ಟು ಹಿಡಿದಿದ್ದಾರೆ. ತಮ್ಮ ಸಲಹೆಯನ್ನು ಜಾರಿ ಮಾಡದ ಇದ್ದರೆ ಗ್ಯಾಲರಿಯನ್ನು ಧ್ವಂಸ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಇಲ್ಲಿವರೆಗೆ 15 ಜನರಂತೆ ನಾಲ್ಕು ತಂಡಗಳು ಐದಾರು ಬಾರಿ ಭೇಟಿ ನೀಡಿ ಒತ್ತಡವನ್ನು ಹಾಕಿದ್ದಾರೆ. ಬಂದವರೆಲ್ಲ ಅದೇ ವಿಚಾರಗಳನ್ನು ಒತ್ತಿ ಒತ್ತಿ ಹೇಳುವ ಮೂಲಕ ಒತ್ತಡವನ್ನು ಸೃಷ್ಟಿಸುತ್ತಿದ್ದಾರೆ.

ಗ್ಯಾಲರಿಯಲ್ಲಿ ಇರುವುದೇನು?

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಎಲ್ಲಾ ಧರ್ಮದ ನಾಯಕರುಗಳ ಫೋಟೊವನ್ನು ಹಾಕಲಾಗಿದೆ. ಎಡಪಂಥೀಯ, ಬಲಪಂಥೀಯ ಹೋರಾಟಗಾರರ ಚಿತ್ರವನ್ನು ಹಾಕಲಾಗಿದೆ. ಇದರಲ್ಲಿ ಹಿಂದೂ ಮೂಲಭೂತವಾದಿ ಹಾಗೂ ಮುಸ್ಲಿಂ ಮೂಲಭೂತವಾದಿಗಳ ಚಿತ್ರಗಳನ್ನು ಹಾಕಲಾಗಿದೆ. ಗಾಂಧೀಜಿ ಕುರಿತಾದ ಜೀವನ



ವಿವರಣೆ, ಗಾಂಧೀಜಿಯನ್ನು ಕೊಂದ ಗೋಡ್ಸೆಯ ಚಿತ್ರ ಹಾಕಲಾಗಿದೆ. ಅದಕ್ಕೆ ಆರ್‌ಎಸ್‌ಎಸ್ ಮತ್ತು ಹಿಂದು ಕೋಮುವಾದಿ ಸಿದ್ದಾಂತದಲ್ಲಿ ಗುರುತಿಸಿಕೊಂಡ ಗೋಡ್ಸೆಯಿಂದ ಗಾಂಧೀ ಹತ್ಯೆ ಎಂದು ಬರೆಯಲಾಗಿದೆ. ಬಲಗಡೆ ಹಿಂದು ಕೋಮುವಾದಿಗಳು, ಮಧ್ಯದಲ್ಲಿ ಗಾಂಧಿ, ಎಡಗಡೆ ಮುಸ್ಲಿಮ್ ಕೋಮುವಾದಿಗಳ ಚಿತ್ರಗಳನ್ನು ಹಾಕಲಾಗಿದೆ. ಆದಿವಾಸಿ ಹೋರಾಟಗಳನ್ನು ಬಿಂಬಿಸಲು ಬುಡಕಟ್ಟು ಸಮುದಾಯದ ನಾಯಕ, ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾರವರ ಭಾವಚಿತ್ರವನ್ನು ಅಳವಡಿಸಲಾಗಿದೆ. ಒಟ್ಟಾರೆ ಆರೋಗ್ಯ ಪೂರ್ಣವಾದ ಗ್ಯಾಲರಿಯನ್ನು ಇಲ್ಲಿ ನಿರ್ಮಾಣ ಮಾಡಲಾಗಿದೆ.

ಈ ಎಲ್ಲಾ ಚಿತ್ರಗಳನ್ನು ಗಮನಿಸಿರುವ ಆರ್‌ಎಸ್‌ಎಸ್‌ನವರು, ಈ ಗ್ಯಾಲರಿಯಲ್ಲಿ "ಸ್ವಾತಂತ್ರ್ಯ ಹೋರಾಟಕ್ಕೂ ಮುಸ್ಲಿಮರಿಗೂ ಸಂಬಂಧವಿಲ್ಲ. ಅವರ ಫೋಟೊಗಳನ್ನು ಯಾಕೆ ಇಲ್ಲಿ ಹಾಕಿದ್ದೀರಿ ಅದನ್ನು ತೆಗೆಯಿರಿ, ಗಾಂಧೀ ಫೋಟಗಳಿಗೆ ಯಾಕೆ ಇಷ್ಟೊಂದು ಮಹತ್ವ ನೀಡಿದ್ದೀರಿ, ಹಿಂದು ಕೋಮುವಾದಿಗಳು ಎಂಬ ಪದವನ್ನು ತೆಗಯಬೇಕು. ಸಾರ್ವಕರ್ ರವರ ಫೋಟವನ್ನು ಅಳವಡಿಸಬೇಕು ಎಂದು ಬೆದರಿಸಿದ್ದಾರೆ. ಇಲ್ಲಿ ಪ್ರಶ್ನೆ ಇರುವುದು ಏನೆಂದರೆ" ಆರೋಗ್ಯ ಪೂರ್ಣ ಗ್ಯಾಲರಿ, ಜ್ಞಾನವನ್ನು ನೀಡುವ ತಾಣಕ್ಕೆ" ಧರ್ಮದ ಲೇಪನವನ್ನು ಹಚ್ಚಲು ಆರ್‌ಎಸ್‌ಎಸ್ ಪ್ರಯತ್ನ ನಡೆಸುತ್ತಿರುವುದು ಆತಂಕದ ವಿಚಾರವಾಗಿದೆ.

ವಿದುರಾಶ್ವತ ಫ್ರೀಡಂ ಮೆಮೋರಿಯಲ್ ಮ್ಯೂಜಿಯಂ ಸಂಸ್ಥೆಯ ಸ್ಥಾಪಕರಲ್ಲೊಬ್ಬರಾದ ಪ್ರೊ. ಬಿ. ಗಂಗಾಧರ ಮೂರ್ತಿ ಅವರು ಜನಶಕ್ತಿ ಮೀಡಿಯಾ ಜೊತೆಗೆ ಪ್ರತಿಕ್ರಿಯೆ ನೀಡಿದ್ದು, ಆ ಗ್ಯಾಲರಿಯಲ್ಲಿರುವ ವ್ಯಕ್ತಿಗಳ ಬಗ್ಗೆ ತಕರಾರು ಇದ್ದರೆ ಚರ್ಚೆ, ಸಂವಾದಗಳನ್ನು ನಡೆಸಲಿ. ಆದರೆ ಅವರು ಈ ರೀತಿಯ ಚರ್ಚೆಗಳಿಗೆ ಒಪ್ಪುವವರಲ್ಲ. ವಾಸ್ತವ ಇತಿಹಾಸವನ್ನು ಅರಗಿಸಿಕೊಳ್ಳುವ ಶಕ್ತಿ, ಕೇಳುವ ತಾಳ್ಮೆ ಅವರಿಗೆ ಇಲ್ಲ. ಅವರು ಕೊಟ್ಟ ಸಲಹೆಗಳನ್ನು ಕೇಳದೆ ಹೋದಲ್ಲಿ ಗ್ಯಾಲರಿಗೆ ಬೆಂಕಿ ಹಾಕುವ ಬೆದರಿಕೆ ಹಾಕಿದ್ದಾರೆ. ನಾನಂತೂ ಸಮಾಜಕ್ಕೆ ಉತ್ತಮವಾದ ಗ್ಯಾಲರಿ ಕೊಡುಗೆಯನ್ನು ನೀಡಿದ್ದೇನೆ. ಅದನ್ನು ಉಳಿಸಿ ಕೊಳ್ಳಲು ಈ ನಾಡಿನ ಶಾಂತಿಪ್ರಿಯರು ಮುಂದಾಗುತ್ತಾರೆ ಎಂಬ ಭರವಸೆ ಇದೆ ಎಂದು ತಿಳಿಸಿದ್ದಾರೆ.

ದಯಾ ಭಿಕ್ಷೆಗೆ ಹಲವಾರು ಪತ್ರಗಳನ್ನು ಬರೆದು ತನ್ನನ್ನು ಜೈಲಿನಿಂದ ಬಿಡುಗಡೆ ಮಾಡಿದರೆ ತಾನೂ ಹಾಗೂ ತನ್ನ ಅನುಯಾಯಿಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದಿಲ್ಲ, ಮಾತ್ರವಲ್ಲ ಮುಂದಿನ ದಿನಗಳಲ್ಲಿ ಬ್ರಿಟಿಷರ ಜತೆ ಎಲ್ಲಾ ರೀತಿಯಲ್ಲೂ ಸಹಕರಿಸುವುದಾಗಿ ಹೇಳಿ, ಜೈಲಿನಿಂದ ಬಿಡುಗಡೆ ಪಡೆದ ಸಾವರ್ಕರ್ ಅವರನ್ನು ದೇಶಪ್ರೇಮಿ ಎಂದು ಕರೆಯಲು ಸಾಧ್ಯವೇ? ಬಿಡುಗಡೆಯಾದ ನಂತರವೂ ಸ್ವಾತಂತ್ರ್ಯ ಚಳುವಳಿಗೆ ವಿರುದ್ಧವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಜತೆ ಸಹಕರಿಸಿರುವ ಸಾವರ್ಕರ್ ಹೆಸರನ್ನು, ವಿದುರಾಶ್ವತ್ಥದ ಸ್ವಾತಂತ್ರ್ಯ ಚಳುವಳಿಗಾರರ ಹೆಸರುಗಳ ಪಟ್ಟಿಯಲ್ಲಿ ಸೇರಿಸಬೇಕೆನ್ನುವ ಸಂಘ ಪರಿವಾರದ ಒತ್ತಾಯವನ್ನು ಎಲ್ಲಾ ದೇಶಪ್ರೇಮಿಗಳೂ ಅತ್ಯುಗ್ರವಾಗಿ ಖಂಡಿಸಬೇಕು ಎಂದು ಸಮುದಾಯ ಸಂಘಟನೆಯ ಟಿ.ಸುರೇಂದ್ರರಾವ್ ಆಗ್ರಹಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಪೂರ್ಣ ಚಿತ್ರ ನೀಡುವ ಈ ಗ್ಯಾಲರಿಯನ್ನು ಉಳಿಸಿ ಕೊಳ್ಳಬೇಕಿದೆ. ತಮ್ಮ ವಿಚಾರಗಳನ್ನು ಜಾರಿ ಮಾಡಬೇಕು ಎಂದು ಪಟ್ಟು ಹಿಡಿದಿರುವ, ಜಾರಿ ಮಾಡದೇ ಹೋದಲ್ಲಿ ಗ್ಯಾಲರಿಗೆ ಬೆಂಕಿ ಹಾಕುವ ಬೆದರಿಕೆ ಒಡ್ಡಿರುವ ಆರ್‌ಎಸ್‌ಎಸ್, ಬಜರಂಗದಳದ ಕಾರ್ಯಕರ್ತರ ಮೇಲೆ ಅಲ್ಲಿನ ಜಿಲ್ಲಾಡಳಿತ ಸ್ವಯಂ ದೂರು ದಾಖಲಿಸಿಕೊಳ್ಳಬೇಕಿದೆ. ರಾಜ್ಯ ಸರಕಾರ ಸಂಘಪರಿವಾರದವರ ಉಪಟಳಕ್ಕೆ ಬ್ರೇಕ್ ಹಾಕಬೇಕಿದೆ.

ಪಠ್ಯ ಪುಸ್ತಕ ಮರು ಪರಿಷ್ಕರಣೆ- ಬಹಿರಂಗ ಪತ್ರ

ಶಿಕ್ಷಣ ಇಲಾಖೆಯು 1ನೇ ತರಗತಿಯಿಂದ 10ನೇ ತರಗತಿಯ ವರೆಗಿನ ಸಮಾಜ ವಿಜ್ಞಾನ, ಭಾಷೆ ಮತ್ತು ಪರಿಸರ ವಿಜ್ಞಾನ ವಿಷಯಗಳ ರಾಜ್ಯ ಪಠ್ಯ ಪುಸ್ತಕಗಳಲ್ಲಿ ತಮಗೆ ಅನಿಸಿರುವ ಗೊಂದಲಕ್ಕೆ ಎಡೆ ಮಾಡಿಕೊಡುವಂಥಹವು ಎಂದು ತಮಗೆ ತೋರಿದ ವಿಷಯಗಳನ್ನು ಪರಿಶೀಲಿಸಲು 15 ಸದಸ್ಯರ ಸಮಿತಿಯನ್ನು ನೇಮಕ ಮಾಡಿತ್ತು.

ಈ ಹಿಂದೆ ಡಾ.ಬರಗೂರು ರಾಮಚಂದ್ರಪ್ಪರವರ ನೇತೃತ್ವದ ಪರಿಷ್ಕರಣ ಸಮಿತಿಯು ಮಾಡಿದ ಶಿಫಾರಸುಗಳನ್ನು ಪರಿಷ್ಕರಿಸಲು ನೇಮಿಸಿದ ಈ ಸಮಿತಿಯ ಅಧ್ಯಕ್ಷರಾಗಿ ರೋಹಿತ್ ಚಕ್ರತೀರ್ಥರವರನ್ನು ನೇಮಕ ಮಾಡಲಾಗಿದೆ. ಶಿಕ್ಷಣ ತಜ್ಞರಲ್ಲದ, ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬಗೆಯಲ್ಲಿ ಸಕ್ರಿಯವಾಗಿ ಸಂಶೋಧನೆ ಮಾಡಿಲ್ಲದ ಚಕ್ರತೀರ್ಥ ಅವರನ್ನು ಯಾವ ಮಾನದಂಡದಲ್ಲಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ? ಈ ಮುಖ್ಯ ಪ್ರಶ್ನೆಗೆ ಸಂಬಂಧಪಟ್ಟವರಿಂದ ಉತ್ತರವಿಲ್ಲ.

ಇವರ ಅಧ್ಯಕ್ಷತೆಯ ಈ ಸಮಿತಿಯು ಆರಂಭದಲ್ಲಿಯೇ ಆರನೇ ತರಗತಿಯ ಸಮಾಜ ವಿಜ್ಞಾನದ ಹೊಸ ಧರ್ಮಗಳ ಉದಯ ಎನ್ನುವ ಪಠ್ಯದಲ್ಲಿ ಜೈನ, ಬುದ್ಧದಮ್ಮಗಳ ಉದಯವಾದದ್ದು ಯಾಕೆ ಎಂದು ವಿವರಿಸುವ ಪಠ್ಯ ಭಾಗಗಳನ್ನು ತೆಗೆಯಬೇಕೆಂದು ಸೂಚನೆ ಮಾಡಿತ್ತು. ಮತ್ತು ಈ ಹೊಸ ಪರಿಷ್ಕರಣ ಸಮಿತಿಯ ಜವಾಬ್ದಾರಿ ಇದರಾಚೆಗೆ ಎಲ್ಲ ಪಠ್ಯ ಪುಸ್ತಕಗಳನ್ನು ಪರಿಶೀಲಿಸುವುದು ಎಂದೂ ಸಹ ವರದಿಯಾಗಿದೆ. ಅದರ ಮುಂದುವರೆದ ಭಾಗವಾಗಿ ಯಾವ ಮುನ್ಸೂಚನೆಯೂ ಇಲ್ಲದೇ , ಶಿಕ್ಷಣದ ಭಾಗೀದಾರರೊಂದಿಗೆ, ಶಿಕ್ಷಣ ತಜ್ಞರೊಂದಿಗೆ ಸಮಾಲೋಚನೆ ನಡೆಸದೇ ಏಕಪಕ್ಷೀಯವಾಗಿ 10 ನೇ ತರಗತಿಯ ಪಠ್ಯಗಳಲ್ಲಿ ಅನೇಕ ಬದಲಾವಣೆ ಮಾಡಿದೆ. ಪಿ.ಲಂಕೇಶ್ ರ ಮೃಗ ಮತ್ತು ಸುಂದರಿ ಡಾ.ಜಿ.ರಾಮಕೃಷ್ಣರ ಭಗತಸಿಂಗ್, ಸಾರಾ ಅಬೂಬಕರ್ ರವರ ಯುದ್ಧ ಎ.ಎನ್ ಮೂರ್ತಿರಾಯರ ವ್ಯಾಘ್ರ ಕಥೆ, ಶಿವ ಕೋಟ್ಯಾಚಾರ್ಯರ ಸುಕುಮಾರ ಸ್ವಾಮಿ ಕಥೆ ಈ ಪಠ್ಯಗಳನ್ನು ಕೈ ಬಿಡಲಾಗಿದೆ. ನಂತರ ಪತ್ರಿಕೆಗಳಲ್ಲಿ ಭಗತ್ ಸಿಂಗ್ ಪಠ್ಯವನ್ನು ಕೈಬಿಟ್ಟಿಲ್ಲವೆಂದು ಹೇಳಿಕೆಗಳನ್ನು ನೀಡಲಾಗಿದೆ.

ಹಾಗೆಯೇ ನಾರಾಯಣ ಗುರು, ಪೆರಿಯಾರ್ ರವರುಗಳ ಕುರಿತ ಪಠ್ಯವನ್ನೂ ಕೈ ಬಿಡಲಾಗಿದೆ, ಅಲ್ಲದೇ ಡಾ.ಅರವಿಂದ ಮಾಲಗತ್ತಿ ಯವರ ಮರಳಿ ಮನೆಗೆ ಕೈಬಿಟ್ಟು ಎಸ್.ವಿ.ಪರಮೇಶ್ವರ ಭಟ್ಟರ ಹೇಮಂತ ಎಲ್.ಬಸವರಾಜು ರವರ ಊರುಭಂಗ ಕೈ ಬಿಟ್ಟು ಗಜಾನನ ಶರ್ಮಾರವರ ಚನ್ನ ಭೈರಾದೇವಿ ಗೋರೂರು ರಾಮಸ್ವಾಮಿ ಐಯ್ಯಂಗಾರ್ ಕನ್ನಡ ಮೌಲ್ವಿ ಕೈ ಬಿಟ್ಟು ಎನ್.ರಂಗನಾಥ ಶರ್ಮಾರವರ ರಾಮರಾಜ್ಯ ಧರ್ಮ ಸಮದೃಷ್ಟಿ-ವಿಜಯ ನಗರ ಶಾಸನ ಪಾಠ ತೆಗೆದು ಎಸ್.ಎಲ್.ಭೈರಪ್ಪನವರ ನಾನು ಕಂಡಂತೆ ಡಾ.ಬಿ.ಜಿ.ಎಲ್ ಸ್ವಾಮಿ ಕೆ.ನೀಲಾರವರ ಕೋಮು ಸಾಮರಸ್ಯದ ಪಠ್ಯ ರಂಜಾನ್ ಸುರಕುಂಬ ತೆಗೆದು ಸುಶ್ರುತ ದೊಡ್ಡೇರಿಯವರ ಹೊಳೆ ಬಾಗಿಲು ಸೇರಿಸಲಾಗಿದೆ. ಬಿ.ಟಿ.ಲಲಿತಾ ನಾಯಕ್ ರವರ ಪಠ್ಯಗಳನ್ನು ಕೈ ಬಿಡಲಾಗಿದೆ. ವಿವಾದ ಎದ್ದರೆ ತೋರಿಸಲೆಂಬಂತೆ ಕೆಲವು ಪ್ರಗತಿಪರರ ಪಠ್ಯಗಳನ್ನು ಇಟ್ಟುಕೊಂಡರೂ, ಕೈ ಬಿಟ್ಟ ಪಠ್ಯ ಮತ್ತು ಸೇರ್ಪಡೆ ಮಾಡಿದ ಪಠ್ಯಗಳನ್ನು ನೋಡಿದರೆ, ಸಮಾಜದ ಪುರೋಗಾಮಿ ಅಭಿವೃದ್ಧಿಗೆ ಪೂರಕವಲ್ಲದ, ಸನಾತನವಾದವನ್ನು ಎತ್ತಿ ಹಿಡಿಯುವ, ಆರ್.ಎಸ್.ಎಸ್ ಸಿದ್ಧಾಂತಕ್ಕೆ ಬದ್ಧವಾದ ಎಲ್ಲ ಅಂಶಗಳೂ ಸ್ಪಷ್ಟವಾಗಿ ಕಾಣುತ್ತಿವೆ. ಶಿಕ್ಷಣ ಸಚಿವರು ಇನ್ನೂ ಪಠ್ಯ ಪುಸ್ತಕಗಳ ಮುದ್ರಣವೇ ಆಗಿಲ್ಲ ಇವೆಲ್ಲ ವದಂತಿ ಎಂದು ನಿರಾಕರಿಸಿದ್ದರೆಂದೂ ವರದಿಗಳಿವೆ. ನಿಯಮದಂತೆ ಮೇ 25 ರೊಳಗೆ ಪಠ್ಯ ಪುಸ್ತಕ ಪೂರೈಕೆ ಆಗಬೇಕು, ಆದರೆ ಇನ್ನೂ ವಿವಾದವನ್ನೇ ಇಟ್ಟುಕೊಂಡಿರುವ ಸರಕಾರ ಪುಸ್ತಕ ಪೂರೈಸಬಹುದೇ ಎಂಬ ಪ್ರಶ್ನೆಯೂ ಇದೆ.

ಕನ್ನಡ ನಾಡಿನ ಅಸ್ಮಿತೆ, ಕನ್ನಡ ಭಾಷೆಯ ಘನತೆಗಳನ್ನು ಗಾಳಿಗೆ ತೂರುವ ರೋಹಿತ್ ಚಕ್ರತೀರ್ಥರವರ ಸಮಿತಿ ಅದಕ್ಕೆ ಬದಲಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪಕರಲ್ಲೊಬ್ಬರಾದ ಹೆಡಗೇವಾರ್ ರವರ ನಿಜವಾದ ಆದರ್ಶ ಪುರುಷ ಯಾರಾಗಬೇಕು, ಬನ್ನಂಜೆ ಗೋವಿಂದಾಚಾರ್ಯರವರ ಶುಕನಾಸನ ಉಪದೇಶ ಶತಾವಧಾನಿ ಗಣೇಶ್ ರವರ ಶ್ರೇಷ್ಠ ಭಾರತೀಯ ಚಿಂತನೆಗಳು, ಶಿವಾನಂದ ಕಳವೆಯವರ ಸ್ವದೇಶಿ ಸೂತ್ರದ ಸರಳ ಹಬ್ಬ ಪಠ್ಯಗಳನ್ನು ಸೇರಿಸಲಾಗಿದೆ. ಯಾವ ಕಾರಣಕ್ಕೆ ಕನ್ನಡದ ಪ್ರಮುಖ ಲೇಖಕ, ಲೇಖಕಿಯರ ಪಠ್ಯಗಳನ್ನು ಕೈ ಬಿಟ್ಟಿದ್ದಾರೆ ಎನ್ನುವುದಕ್ಕೆ ಯಾವುದೇ ಕಾರಣಗಳನ್ನು ಕೊಟ್ಟಿಲ್ಲ. ಹಾಗೆಯೇ ಹೆಡಗೇವಾರ್ ಅವರ ಭಾಷಣವನ್ನು ಸೇರಿಸುವುದರ ಕಾರಣ ಮಾತ್ರ ಹೇಳದೇ ಹೋದರೂ ಅರ್ಥವಾಗುತ್ತದೆ. ಒಟ್ಟಾರೆಯಾಗಿ ಇಲ್ಲಿ ಯಾವುದೇ ರೀತಿಯ ಪಾರದರ್ಶಕತೆ ಕಂಡು ಬರುತ್ತಿಲ್ಲ.

ಪಠ್ಯ ಪುಸ್ತಕ ರಚನೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ಮೌಲ್ಯಗಳು ನೀತಿಗಳು ಪ್ರಜಾತಾಂತ್ರಿಕತೆಗೆ ಪೂರಕವಾಗಿರಬೇಕು.

1. ಸರಕಾರಗಳು ಬದಲಾದಂತೆ ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ಬದಲಾಯಿಸುವ ಈ ಪರಿಪಾಠ ಸರಿಯಲ್ಲ.
2. ಪಠ್ಯ ಪುಸ್ತಕಗಳ ರಚನೆ ಮತ್ತು ಪರಿಷ್ಕರಣೆಯು ಸಂಪೂರ್ಣವಾಗಿ ಶಿಕ್ಷನ ತಜ್ಞರ ಮೂಲಕ ಮಾತ್ರ ನಡೆಯಬೇಕು ಎನ್ನುವುದು ಇಲ್ಲಿನ ಪ್ರಜ್ಞಾವಂತರ ಆಶಯವಾಗಿದೆ. ಭಾರತದ ಚುನಾವಣಾ

ಪುಟ 6 ಕ್ಕೆ



ಕೊಡಗಿನ ಪೊನ್ನಂಪೇಟೆಯ ಶಾಲೆಯೊಂದರ ಆವರಣದಲ್ಲಿ ಶಿಬಿರವೊಂದರಲ್ಲಿ ಯುವಕರಿಗೆ ಶಸ್ತ್ರಾಸ್ತಗಳ ಅಭ್ಯಾಸದ ತರಬೇತಿ ಕೊಡಲಾಯಿತು. ಬಿಡಿಯಾಗಿ ನೋಡಬಹುದಾದ ವಿದ್ಯಮಾನವಿದಾಗಿಲ್ಲ. ಕರ್ನಾಟಕದ ರಾಜಕೀಯವು ಇಂಥ ಅಧೋಗತಿಗೆ ಎಂದೂ ತಲುಪಿರಲಿಲ್ಲ. 'ಕ್ರಿಯೆಗೆ ಪ್ರತಿಕ್ರಿಯೆ' ಎನ್ನುವ ತಮ್ಮ ಧ್ಯೇಯವಾಕ್ಯದಿಂದ ರಾಜ್ಯದ ಅಸಂವಿಧಾನಾತ್ಮಕ ಬಲಪಂಥೀಯ ಸಂಸ್ಥೆಗಳಿಗೆ ರಾಜ್ಯದ ಮುಖ್ಯಮಂತ್ರಿಗಳು ಪ್ರಬಲವಾದ ಸೂಚನೆಯನ್ನು ನೀಡಿದರು. ಅಂದಿನಿಂದ ಪ್ರತಿದಿನವೂ ರಾಜ್ಯದಲ್ಲಿ ವಿವಾದಗಳು, ಹಿಂಸೆಗಳು, ಬೆದರಿಕೆಗಳು ಆಗುತ್ತಲೇ ಇವೆ. ಇವುಗಳನ್ನು ತಡೆಯುವ ಇರಾದೆ ತನಗಿಲ್ಲವೆಂದು ಸರಕಾರವು ಬಹಳ ಸ್ಪಷ್ಟವಾದ ಸೂಚನೆ ನೀಡಿದೆ. ಕರ್ನಾಟಕವೆಂದರೆ ಕೋಮುವಾದಿ ರಾಜ್ಯವೆಂದು ದೇಶ ಮಾತ್ರವಲ್ಲ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿಯೂ ಹೇಳಲಾಗುತ್ತಿದೆ. ಒಂದು ಕಾಲದಲ್ಲಿ ಪ್ರಗತಿಪರ, ಲಿಬರಲ್ ರಾಜ್ಯವೆಂದು ಹೆಸರು ಮಾಡಿದ ಕರ್ನಾಟಕವು ಇಂದು ದಕ್ಷಿಣ ಭಾರತದ ಉತ್ತರ ಪ್ರದೇಶವೆಂದು ಖ್ಯಾತಿ ಪಡೆಯುತ್ತಿದೆ. ದಕ್ಷಿಣ ಭಾರತದ ಯಾವ ರಾಜ್ಯವೂ ಇಂಥ ಅರಾಜಕತೆ ಹಾಗೂ ದುಷ್ಟ ರಾಜಕೀಯಕ್ಕೆ ವೇದಿಕೆಯಾಗಿಲ್ಲ.

ಕರ್ನಾಟಕ ದಕ್ಷಿಣದ ಉತ್ತರ ಪ್ರದೇಶವಾಗುತ್ತಿದೆಯೇ?

ಪ್ರೊ. ರಾಜೇಂದ್ರ ಚೆನ್ನಿ

ಒಂದೆರಡು ದಿನಗಳಿಂದ ಆತಂಕ ಹುಟ್ಟಿಸುವ ಕೆಲವು ವಿಡಿಯೋಗಳು, ಚಿತ್ರಗಳು ಅನೇಕ ತಾಣಗಳಲ್ಲಿ ಹರಿದಾಡುತ್ತಿವೆ. ಕೊಡಗಿನ ಪೊನ್ನಂಪೇಟೆಯ ಶಾಲೆಯೊಂದರ ಆವರಣದಲ್ಲಿ ಶಿಬಿರವೊಂದರಲ್ಲಿ ಯುವಕರಿಗೆ ಶಸ್ತ್ರಾಸ್ತಗಳ ಅಭ್ಯಾಸದ ತರಬೇತಿ ಕೊಡಲಾಯಿತು. ಅವರ ಕೈಗೆ ಕೊಟ್ಟಿದ್ದು ಕೇವಲ ಏರ್‌ಗನ್‌ಗಳು, ಶಸ್ತ್ರಗಳಲ್ಲ. ಇನ್ನೊಂದು ಚಿತ್ರದಲ್ಲಿ ದೀಕ್ಷೆ ಕೊಡಲು ಬಳಸಲಾದ ತ್ರಿಶೂಲಗಳು ಶಸ್ತ್ರಗಳಲ್ಲ ಎಂದು ಶಿಬಿರದ ಆಯೋಜಕರು ಹೇಳುತ್ತಿದ್ದಾರೆ. ಆ ಶಿಬಿರಕ್ಕೆ ಭೇಟಿಯಿತ್ತಿದ್ದ ರಾಜಕಾರಣಿಗಳು ಈ ಲೇಖನ ಬರೆಯುವ ಹೊತ್ತಿಗೆ ಹೇಳಿಕೆ ಕೊಟ್ಟಿಲ್ಲ. ತೀವ್ರ ಧ್ರುವೀಕರಣ, ಸಾಮೂಹಿಕ ದ್ವೇಷ ಹಾಗೂ ಸಾರ್ವಜನಿಕ ಹಿಂಸೆಗಳ ನಿರಂತರವಾದ ಕ್ರಿಯೆಗಳನ್ನು ನೋಡುತ್ತ ಬಂದ ನಮಗೆ ಇವರುಗಳು ಕೊಡಬಹುದಾದ ವಿವರಣೆಗಳು ಹೊಸದಾಗಿರುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಹೇಳುವಂತೆ 'ಅವು predictable and therefore false' ಆಗಿರುತ್ತವೆ.

ಮೂರು ಬಗೆಯ ಪ್ರತಿಕ್ರಿಯೆಗಳನ್ನು ನಮ್ಮ ನಾಗರಿಕ ಸಮಾಜದಿಂದ ನಿರೀಕ್ಷಿಸಬಹುದು. ಒಂದು, ಅದರಲ್ಲಿ ತಪ್ಪೇನು? ಪುರುಷತ್ವ, ಗಂಡಸುತನ ಇವು ಧರ್ಮಕ್ಕೆ ಅವಶ್ಯವಾಗಿರುವುದರಿಂದ ಮತ್ತು ಇವುಗಳ ಸಂಕೇತಗಳು ಆಯುಧಗಳೇ ಆಗಿರುವುದರಿಂದ ಈ ತರಬೇತಿಯಲ್ಲಿ ತಪ್ಪೇನಿದೆ? ಎರಡು, ಈ ತರಬೇತಿ ಯಾರ ವಿರುದ್ಧವೂ ಅಲ್ಲ, ಸ್ವರಕ್ಷಣೆಗೆ. ಮೂರು, ಇದನ್ನು ನೇರವಾಗಿ ಹೇಳಲಾಗುವುದಿಲ್ಲ. ಆದರೆ ಅದು ಹೆಮ್ಮೆಯದಾಗಿರುತ್ತದೆ. "ಆ ಇತರರು ಹೇಳಿದಂತೆ ಬಿದ್ದೊಂಡಿರದಿದ್ದರೆ ಬಳಸಲು ಬೇಕಾಗುತ್ತದೆ" ಇತ್ಯಾದಿ.

ಒಂದು ಶಾಲೆಯ ಆವರಣದಲ್ಲಿ ಯುವಕರಿಗೆ ಇಂಥ ತರಬೇತಿ? ಬಿಡಿಯಾಗಿ ನೋಡಬಹುದಾದ ವಿದ್ಯಮಾನವಿದಾಗಿಲ್ಲ. ಇತ್ತೀಚೆಗೆ ರಂಜಾನ್ ಹಬ್ಬದ ಸಮಯದಲ್ಲಿ ಹಿಂದೂ ದೇವರುಗಳ ಹುಟ್ಟು ಹಬ್ಬ ಇತ್ಯಾದಿ ಆಚರಣೆಗಾಗಿ ಮೆರವಣಿಗೆ ಮಾಡಿದಾಗ ಇಂಥದೇ ಯುವಜನರು ಇನ್ನೊಂದು ಸಮುದಾಯವನ್ನು ಅವಮಾನಿಸುವ ಹಾಡುಗಳನ್ನು ಹೇಳಿದರು. ಘೋಷಣೆಗಳನ್ನು ಕೂಗಿದರು. ಕೆಲವು ಕಡೆ ಡಿಜೆ ಸಂಗೀತದ ಜೊತೆಗೆ ಇಂಥ ಹಾಡುಗಳನ್ನು ಹೇಳಿ ಕುಣಿಯಲಾಯಿತು. ಅನೇಕ ಕಡೆಗೆ ಯುವಕರ ಕೈಯಲ್ಲಿ ತಲವಾರುಗಳು ಇದ್ದವು (ಗಾಬರಿ ಬೇಡ, ಅವು ಶಸ್ತ್ರಗಳಲ್ಲ, ಕುತ್ತಿಗೆಗೇ ನಡೆದುಕೊಂಡು ಹೋಗಿ ಇರಿದುಕೊಂಡರೆ ಅವುಗಳ ತಪ್ಪಲ್ಲ!). ಇಂಥ ಮೆರವಣಿಗೆಗಳನ್ನು ಪೊಲೀಸರು ತಮ್ಮ ರಕ್ಷಣೆ ನೀಡಿ ಬೆಂಬಲಿಸಿದರು. ಒಂದು ನ್ಯಾಯಾಲಯವೇ ಹೇಳಿದ ಹಾಗೆ ಪೊಲೀಸರು ಈ ಕಾರ್ಯಕ್ರಮಗಳಿಗೆ 'ಸಾಥ್' ನೀಡಿದರು. ಈ ಮೆರವಣಿಗೆಗಳಲ್ಲಿ ಹಲವಾರು ಪರಸ್ಪರ ಹಿಂಸೆಯಲ್ಲಿ ಮುಗಿದವು. ಭಾರತದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಸರಕಾರಗಳು ಅತ್ಯಂತ ತ್ವರಿತವಾಗಿ ಯಾವ ವಿಚಾರಣೆಯೂ ಇಲ್ಲದ ಶಿಕ್ಷೆಯನ್ನು ಘೋಷಿಸಿ ಗಲಭೆಕೋರರ ಅಂಗಡಿಗಳನ್ನು, ಮನೆಗಳನ್ನು ಬುಲ್‌ಡೋಜರ್ ಮೂಲಕ ಕೆಡವಿದವು. ಪೊನ್ನಂಪೇಟೆಯ ಶಿಬಿರದಲ್ಲಿ ನೀಡಲಾದ ತರಬೇತಿ ಅಂತಿಮವಾಗಿ ಈ ಬಗೆಯ ವಿದ್ಯಮಾನಗಳಿಗೆ ಸಹಾಯವಾಗುತ್ತದೆ.

ಕರ್ನಾಟಕದ ರಾಜಕೀಯವು ಇಂಥ ಅಧೋಗತಿಗೆ ಎಂದೂ ತಲುಪಿರಲಿಲ್ಲ. 'ಕ್ರಿಯೆಗೆ ಪ್ರತಿಕ್ರಿಯೆ' ಎನ್ನುವ ತಮ್ಮ ಧ್ಯೇಯವಾಕ್ಯದಿಂದ ರಾಜ್ಯದ ಅಸಂವಿಧಾನಾತ್ಮಕ ಬಲಪಂಥೀಯ ಸಂಸ್ಥೆಗಳಿಗೆ ರಾಜ್ಯದ ಮುಖ್ಯಮಂತ್ರಿಗಳು ಪ್ರಬಲವಾದ ಸೂಚನೆಯನ್ನು ನೀಡಿದರು. ಏಕೆಂದರೆ ಸಮಾಜವನ್ನು ಧ್ರುವೀಕರಣ ಮಾಡಿ ಚುನಾವಣೆ ಗೆಲ್ಲಬೇಕೆಂದು ಅವರಿಗೆ ಸೂಚನೆ ನೀಡಲಾಗಿತ್ತು. ಅಂದಿನಿಂದ ಪ್ರತಿದಿನವೂ ರಾಜ್ಯದಲ್ಲಿ ವಿವಾದಗಳು, ಹಿಂಸೆಗಳು, ಬೆದರಿಕೆಗಳು ಆಗುತ್ತಲೇ ಇವೆ. ಇವುಗಳನ್ನು ತಡೆಯುವ ಇರಾದೆ ತನಗಿಲ್ಲವೆಂದು ಸರಕಾರವು ಬಹಳ ಸ್ಪಷ್ಟವಾದ ಸೂಚನೆ ನೀಡಿದೆ. ಅಷ್ಟು ಮಾತ್ರವಲ್ಲ ಆಳುವ ಪಕ್ಷದ ಅನೇಕರು ಸಾರ್ವಜನಿಕವಾಗಿಯೇ ಹಿಂಸಾಪರ ಸಂಘಟನೆಗಳಿಗೆ ಸಮರ್ಥನೆ ನೀಡಿದ್ದಾರೆ. ಕರ್ನಾಟಕವೆಂದರೆ ಕೋಮುವಾದಿ ರಾಜ್ಯವೆಂದು ದೇಶ ಮಾತ್ರವಲ್ಲ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿಯೂ ಹೇಳಲಾಗುತ್ತಿದೆ. ಹುಂಬ ಸ್ವಸಮರ್ಥನೆ, ಅಸಹ್ಯ ಭಾಷೆಯ ಬಳಕೆಯಿಂದಾಗಿ ತಾನು ಮಾಡಿದ ತಪ್ಪುಗಳನ್ನು ಮುಚ್ಚಿಡಬಹುದೆನ್ನುವ ತಪ್ಪು ತಿಳುವಳಿಕೆ ಸರಕಾರಕ್ಕಿದೆ. ಆದರೆ ಮಾಹಿತಿ ಯುಗದ ಈ ಕಾಲದಲ್ಲಿ ಇದು ಅಸಾಧ್ಯ. ಈ ಕಾಲದಲ್ಲಿ ವಾಸ್ತವಗಳು ಎಷ್ಟು ಮುಖ್ಯವೋ


ಕೃಪೆ: ಪಿ ಮಹಮ್ಮದ್, ವಾರ್ತಾಭಾರತಿ

ಪ್ರತಿನಿಧೀಕರಣವೂ ಅಷ್ಟೇ ಮುಖ್ಯ. ಒಂದು ಕಾಲದಲ್ಲಿ ಪ್ರಗತಿಪರ, ಲಿಬರಲ್ ರಾಜ್ಯವೆಂದು ಹೆಸರು ಮಾಡಿದ ಕರ್ನಾಟಕವು ಇಂದು ದಕ್ಷಿಣ ಭಾರತದ ಉತ್ತರ ಪ್ರದೇಶವೆಂದು ಖ್ಯಾತಿ ಪಡೆಯುತ್ತಿದೆ. ಒಬ್ಬ ವ್ಯಕ್ತಿಯ ರಾಜಕೀಯ ಅಧಿಕಾರದ ಲಾಲಸೆಯಿಂದ ಒಂದು ರಾಜ್ಯದ ಸಾರ್ವಜನಿಕ ಇಮೇಜ್ ನಾಶವಾಗಿ ಹೋಗಿದೆ. ದಕ್ಷಿಣ ಭಾರತದ ಯಾವ ರಾಜ್ಯವೂ ಇಂಥ ಅರಾಜಕತೆ ಹಾಗೂ ದುಷ್ಟ ರಾಜಕೀಯಕ್ಕೆ ವೇದಿಕೆಯಾಗಿಲ್ಲ.

ಅಲ್ಲದೆ ಭ್ರಷ್ಟಾಚಾರವು ಮನೆ ಮಾತಾಗಿದೆ. 40% ಎನ್ನುವುದು ಕರ್ನಾಟಕದ ಸಂಕೇತವಾಗಿದೆ. ನಾವು ಕಾಣುತ್ತಿರುವುದು ಕೇವಲ ಮೇಲ್‌ಸ್ತರದ ತುಣುಕುಗಳು ಮಾತ್ರ. ಪಿ.ಎಸ್.ಐ ಪರೀಕ್ಷೆಯ ಹಗರಣಗಳ ಪ್ರಮಾಣ ಹಾಗೂ ದುಡ್ಡಿನ ಪ್ರಮಾಣ ನೋಡಿದರೆ ಈ ಹಗರಣಗಳಲ್ಲಿ ಸರಕಾರವು, ಮಂತ್ರಿಗಳು ಭಾಗಿಯಾಗಿರುವುದರ ಬಗ್ಗೆ ಯಾವುದೇ ಸಂಶಯವೂ ಇಲ್ಲ. ಆಧಾರ ಕೊಡಿ, ಸಾಕ್ಷಿಕೊಡಿ ಎಂದು ಸರಕಾರವು ಹೇಳುವುದರ ಅರ್ಥವೆಂದರೆ ಸಾಕ್ಷಿ ಉಳಿಯದಂತೆ ಮಾಡಬಾರದ್ದನ್ನು ಮಾಡಿದ್ದೇವೆ ಎಂದು. ಅಥವಾ ಎಲ್ಲಾ ಮಂತ್ರಿಗಳಿಗೆ ಅದೊಂದು ಹಿತೋಪದೇಶವೂ ಆಗಿರಬಹುದು. ಏನಾದರೂ ಮಾಡಿ, ಸಾಕ್ಷಿ ಇಲ್ಲದಂತೆ ಮಾಡಿ ಎನ್ನುವ ಹಿತವಚನ.

ಇದೆಲ್ಲಕ್ಕಿಂತ ಭೀಕರವಾದುದೆಂದರೆ ಯುವಜನರಿಗೆ ಆಯುಧ ಶಸ್ತ್ರಗಳ ತರಬೇತಿ ನೀಡುವುದು. ಆಶ್ಚರ್ಯವೆಂದರೆ ಇದನ್ನು ಆ ಯುವಕರ ತಂದೆತಾಯಿಗಳು ಒಪ್ಪಿಕೊಂಡಿರುವುದು. ನಾನೇ ಸ್ವತಃ ನೋಡಿದ ಹಾಗೆ ಅಪರಾಧಿಗಳ ತಂದೆ ತಾಯಿಗಳು ತಮ್ಮ ಮಕ್ಕಳ ಕೆಲಸಗಳನ್ನು ಸಮರ್ಥಿಸುವುದಿಲ್ಲ. ಮಧ್ಯಮ ವರ್ಗದ ಶಿಕ್ಷಿತ ಪೋಷಕರು ತಮ್ಮ ಮಕ್ಕಳನ್ನು ಹಿಂಸೆಯ ತರಬೇತಿಗೆ ಹೇಗೆ ಒಪ್ಪಿಸುತ್ತಾರೆ? ಅಥವಾ ಅವರು ರಾಷ್ಟ್ರಕ್ಕಾಗಿ ತಮ್ಮ ಮಕ್ಕಳನ್ನು ತ್ಯಾಗ ಮಾಡಿದ್ದಾರೆಯೆ? ಎಂಥ ಭವಿಷ್ಯವನ್ನು ತಮ್ಮ ಮುಂದಿನ ಪೀಳಿಗೆಗೆ ಅವರು ಕೊಡಬಯಸುತ್ತಾರೆ. ಹಿಂಸೆಗೆ ಒಲಿದವರು ಹಿಂಸೆಯಿಂದಲೇ ಸಾಯುತ್ತಾರೆ. ಇದನ್ನು ಈ ತಂದೆ ತಾಯಿಯರು ತಮ್ಮ ಮಕ್ಕಳಿಗೆ ಬಯಸುತ್ತಾರೆಯೆ? ಇದು ನಮಗೆ ಆತಂಕ ಹುಟ್ಟಿಸುವ ಸಂಗತಿಯಾಗಬೇಕು. ಅಂಥ ಭಕ್ತರಾಗಿರುವ ಈ ಪೋಷಕರಿಗೆ ಗೊತ್ತಿರಲಿ. ವಿಶ್ವವು ಭಾರತವನ್ನು ಗಮನಿಸುತ್ತಿದೆ. ವಿಶ್ವಗುರು ಎಂದಲ್ಲ, ಪ್ರಜಾಪ್ರಭುತ್ವ, ಸಮಾನತೆ, ಶಾಂತಿ ಇದಾವುದೂ ಇಲ್ಲದ ದೇಶವಾಗುತ್ತಿದೆಯೆಂದು. ಇದು ಹೀಗೇ ಮುಂದುವರೆದರೆ ಜಾಗತೀಕರಣದಿಂದ ತೆರೆದುಕೊಂಡಿದ್ದ ಅವಕಾಶಗಳು ಇಲ್ಲವಾಗುತ್ತವೆ. ಆಗ ಏರ್ ಗನ್ ತರಬೇತಿಯಿಂದ ಜೀವನ ಸಾಗಿಸಬೇಕಾಗುತ್ತದೆ.

ಪಠ್ಯ ಪುಸ್ತಕ ಮರು ಪರಿಷ್ಕರಣೆ..... ಪುಟ 5 ರಿಂದ

ಆಯೋಗದ ರೀತಿಯಲ್ಲಿ ಈ ಪಠ್ಯ ಪುಸ್ತಕಗಳ ರಚನೆ ಮತ್ತು ಪರಿಶೀಲನೆಗೆ ಒಂದು ಸ್ವಾಯತ್ತ ಆಯೋಗ ರಚಿಸಬೇಕು ಮತ್ತು ಇದು ಸರಕಾರದ ನಿಯಂತ್ರಣದಲ್ಲಿ ಇರಬಾರದು ಎಂದು ಶಿಕ್ಷಣ ತಜ್ಞರು ಅಭಿಪ್ರಾಯ ಪಡುತ್ತಾರೆ.

3. ಯಾವುದೇ ಪೂರ್ವಾಲೋಚನೆ ಇಲ್ಲದೇ ಶಿಕ್ಷಣ ತಜ್ಞರು,ವಿಷಯ ತಜ್ಞರುಗಳ ಜೊತೆ, ಹಿಂದಿನ ಪರಿಷ್ಕರಣಾ ಸಮಿತಿಯ ಅಧ್ಯಕ್ಷರ ಜೊತೆ ಸಮಾಲೋಚಿಸದೇ, ತನ್ನ ಹಿಂದುತ್ವ ಸಿದ್ಧಾಂತಕ್ಕೆ ಬದ್ಧರಾಗಿರುವವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅವರ ಮೂಲಕ ಪಠ್ಯಪುಸ್ತಕಗಳ ಬದಲಾವಣೆಗೆ ಮುಂದಾಗಿರುವುದು ನಮ್ಮ ಆತಂಕಕ್ಕೆ ಕಾರಣ.
4. ಪಠ್ಯ ಪುಸ್ತಕ ರಚನಾ ಸಮಿತಿ, ಪರಿಷ್ಕರಣಾ ಸಮಿತಿಗಳಿಗೆ ಅದರದೇ ಆದ ಮಾನದಂಡಗಳಿರುತ್ತವೆ. ಅದರ ಅಧ್ಯಕ್ಷರು ಮತ್ತು ಸದಸ್ಯರು ಶಿಕ್ಷಣ ತಜ್ಞರಾಗಿರಬೇಕು. ಸಮಿತಿಯ ರಚನೆಯಲ್ಲಿ ಸಾಮಾಜಿಕ ನ್ಯಾಯವನ್ನು ಪಾಲಿಸಬೇಕು. ಮುಖ್ಯವಾಗಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಅದು ಕನ್ನಡದ ಅಸ್ಮಿತೆಗೆ ಪೂರಕವಾಗಿದ್ದು, ಇಲ್ಲಿನ ಬಹು ಸಂಸ್ಕೃತಿಯ ಆಶಯಗಳನ್ನು ಪ್ರತಿನಿಧಿಸುವಂತಿರಬೇಕು. ವೈಜ್ಞಾನಿಕ ಮನೋಧರ್ಮ, ವೈಚಾರಿಕತೆ,ಆಧುನಿಕ ಪ್ರಜ್ಞೆ,ಜಾತ್ಯಾತೀತ ತತ್ವಗಳಿಗೆ ಬದ್ಧವಾಗಿರಬೇಕು.ಸಾಮಾಜಿಕ ಸಾಮರಸ್ಯ, ನೈತಿಕತೆ,ವ್ಯಕ್ತಿತ್ವ ವಿಕಸನಕ್ಕೆ ಅನುವಾಗುವಂತೆ ಪಠ್ಯಪುಸ್ತಕಗಳನ್ನು ರೂಪಿಸಬೇಕು.
5. ಸಂವಿಧಾನದ ಆಶಯಗಳ ಅನುಸಾರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ರೂಪಿಸಿದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪಠ್ಯಕ್ರಮ ರೂಪಿಸಬೇಕು.
6. ಪಠ್ಯಗಳನ್ನು ಆಯ್ಕೆ ಮಾಡುವಾಗ ಲಿಂಗತ್ವ ಅಸಮಾನತೆ, ಪ್ರಾದೇಶಿಕ ಅಸಮಾನತೆಯನ್ನು ತಪ್ಪಿಸಬೇಕು. ಸಾಮಾಜಿಕ ನ್ಯಾಯದ ತತ್ವ ಪಾಲನೆಯಾಗಬೇಕು.
7. ತರಗತಿಗಳ ಮಕ್ಕಳ ವಯೋಮಾನವನ್ನು ಆಧರಿಸಿ ಪಠ್ಯಗಳನ್ನು ಆಯ್ಕೆ ಮಾಡಬೇಕು.
8. ಪಠ್ಯಕ್ರಮವು ಕನ್ನಡ ಭಾಷೆಯ ಎಲ್ಲಾ ಸಾಹಿತ್ಯ ಪರಂಪರೆಯನ್ನು ಪ್ರತಿನಿಧಿಸಬೇಕು.
9. ಮುಖ್ಯವಾಗಿ ಮಕ್ಕಳ ನಡುವೆ ದ್ವೇಷವನ್ನು ಬಿತ್ತುವಂತಹ, ದೇಶ, ಸಂವಿಧಾನ, ರಾಷ್ಟ್ರದ ಬಾವುಟಕ್ಕೆ ಅವಮಾನ ಮಾಡುವ ಪಠ್ಯಗಳನ್ನು ಯಾವುದೇ ಕಾರಣಕ್ಕೂ ಆಯ್ಕೆ ಮಾಡಬಾರದು. ಜಾತೀಯತೆಯನ್ನು ಪೋಷಿಸುವಂತಹ ಪಠ್ಯಗಳನ್ನು ಆಯ್ಕೆ ಮಾಡಬಾರದು.
10. ಪಠ್ಯ ಪುಸ್ತಕಗಳ ಪರಿಷ್ಕರಣೆಯು ಪ್ರಜಾಸತ್ತಾತ್ಮಕವಾಗಿರಬಹುದು.
11. ಮಕ್ಕಳ ಮೇಲೆ ಯಾವುದೇ ರಾಜಕೀಯ, ಧಾರ್ಮಿಕ ಸಿದ್ಧಾಂತಗಳನ್ನು ಹೇರುವ ಪಠ್ಯಗಳನ್ನು ಆಯ್ಕೆ ಮಾಡಬಾರದು.

ಆದರೆ ರೋಹಿತ್ ಚಕ್ರತೀರ್ಥರ ಅಧ್ಯಕ್ಷತೆಯ ಈ ಪಠ್ಯಪುಸ್ತಕ ಪರಿಷ್ಕರಣೆಯ ಸಮಿತಿಯು ಈ ಮೇಲಿನ ಯಾವುದೇ ಮೌಲ್ಯಗಳನ್ನು , ನೀತಿ ನಿಯಮಗಳನ್ನು ಪಾಲನೆ ಮಾಡಿಲ್ಲ.

ಹಲವು ಪಠ್ಯಗಳನ್ನು ಕೈ ಬಿಟ್ಟಿದ್ದೇಕೆ ಎಂದು ಕೇಳಿದಾಗ ಶಿಕ್ಷಣ ಸಚಿವರಿಂದ ಉತ್ತರವೇ ಇಲ್ಲ. ಹಾಗಾಗಿ ಅದು ಪೂರ್ವಗ್ರಹಪೀಡಿತವಾಗಿದೆ ಎಂದು ಹೇಳಬೇಕಿದೆ. ಆರ್.ಎಸ್.ಎಸ್ ನ ಹಿಂದುತ್ವ ಸಿದ್ಧಾಂತವನ್ನು ರೂಪಿಸಿದ ಹೆಡಗೇವಾರ್ ಅವರ ಭಾಷಣವನ್ನು ಸೇರಿಸುವ ಔಚಿತ್ಯವೇನು ಎಂಬುದಕ್ಕೆ ಯಾವುದೇ ಸ್ಪಷ್ಟೀಕರಣವಿಲ್ಲ. ಬದಲಿಗೆ ಹೆಡಗೇವಾರ್ ಭಾಷಣ ಸೇರಿಸಿರುವುದನ್ನು ಸಮರ್ಥಿಸಿಕೊಂಡಿದ್ದಾರೆ. ಒಬ್ಬ ಜವಾಬ್ದಾರಿಯುತ ಸಚಿವರಾಗಿ ಈ ವಿಷಯದಲ್ಲಿ ಸಂವಿಧಾನಕ್ಕೆ ಬದ್ಧರಾಗಿ ನಡೆದುಕೊಂಡಿಲ್ಲದಿರುವುದು ಪ್ರಶ್ನಾರ್ಹವಾಗಿದೆ. ಇದೇ ಪದ್ಧತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಗೋಡ್ಸೆ ಕುರಿತಾದ ಅಧ್ಯಾಯವನ್ನು ಸೇರಿಸುವ ದಿನಗಳು ದೂರವಿಲ್ಲ. ಇದು ನಮ್ಮ ಆತಂಕಕ್ಕೆ ಕಾರಣವಾಗಿರುವ ವಿದ್ಯಮಾನ. ಈ ಬದಲಾವಣೆ ಕುರಿತು ಸ್ಪಷ್ಟೀಕರಣ ಕೇಳಿದಾಗ ಆರ್.ಎಸ್.ಎಸ್ ಸಿದ್ಧಾಂತದಲ್ಲಿ ನಂಬಿಕೆ, ಗೌರವವಿದೆ ಎಂದು ಹೇಳಿಕೊಳ್ಳುತ್ತಿರುವ ರೋಹಿತ್ ಚಕ್ರತೀರ್ಥರವರು ಉಡಾಫೆಯಲ್ಲಿ ಮಾತನಾಡಿದ್ದಾರೆ. ಈ ರೀತಿಯ ಹೇಳಿಕೆಗಳು ಅನಪೇಕ್ಷಣೀಯ. ಯಾವುದೇ ಕಾರಣಕ್ಕೂ ಈ ಬದಲಾವಣೆಯನ್ನೂ ಜಾರಿಗೊಳಿಸಬಾರದು. ಶಿಕ್ಷಣ ತಜ್ಞರು ಹಾಗೂ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸುವ ಕ್ರಮ ಅಳವಡಿಕೆಯಾಗಬೇಕು.

ಕನ್ನಡದ ಅಸ್ಮಿತೆಯ, ಘನತೆ ಹಾಗೂ ಪ್ರಾದೇಶಿಕ ಆಶೋತ್ತರಗಳಿಗೆ ಕುಂದು ತರಬಾರದು ಎಂಬ ನಮ್ಮ ಆಗ್ರಹವನ್ನು ಸಾರ್ವಜನಿಕರ ಮುಂದಿಡುತ್ತಿದ್ದೇವೆ. ಹಾಗೆಯೇ ಶಿಕ್ಷಣ ಕ್ಷೇತ್ರದಲ್ಲಿರುವ ಶಿಕ್ಷಕರು, ತಜ್ಞರು ಇನ್ನಷ್ಟು ಹೆಚ್ಚು ಮಾತನಾಡುವ ಮೂಲಕ ಶಿಕ್ಷಣವೆಂಬುದು ಮಕ್ಕಳ ಮನೋವಿಕಾಸದ ದಾರಿಯಾಗುವಂತೆ ಗಮನ ಕೊಡಲಿ ಎಂದೂ ನಿರೀಕ್ಷಿಸುತ್ತೇವೆ., ಸರ್ಕಾರದ ಈ ಪಕ್ಷಪಾತಪೂರಿತ ಬದಲಾವಣೆಗಳನ್ನು ವಿರೋಧಿಸಿ ಶಿಕ್ಷಣದ ಧ್ಯೇಯವನ್ನು ಜನಮುಖಿಗೊಳಿಸಬೇಕೆಂಬ ನಿಲುವಿಗೆ ನಾವು ದನಿಗೂಡಿಸುತ್ತಿದ್ದೇವೆ.

ಡಾ.ಕೆ. ಮರುಳಸಿದ್ದಪ್ಪ, ಡಾ. ವಿಜಯಾ, ಡಾ. ರಾಜೇಂದ್ರ ಚೆನ್ನಿ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಡಾ. ಗಣೇಶ್ ದೇವಿ, ಡಾ. ಬಂಜಗೆರೆ ಜಯಪ್ರಕಾಶ್, ಡಾ. ಟಿ.ಆರ್. ಚಂದ್ರಶೇಖರ್, ರುದ್ರಪ್ಪ ಹನಗವಾಡಿ, ಡಾ. ಹಿ.ಶಿ. ರಾಮಚಂದ್ರೇಗೌಡ, ವಿ.ಪಿ. ನಿರಂಜನಾರಾಧ್ಯ, ಕಾಳೇಗೌಡ ನಾಗವಾರ, ಬಿ.ಟಿ.ಲಲಿತಾ ನಾಯಕ್, ಕುಂ.ವೀರಭದ್ರಪ್ಪ, ಡಾ.ರಹಮತ್ ತರೀಕೆರೆ ಒಟ್ಟು 83 ಸಾಹಿತಿಗಳು ಆಗ್ರಹಿಸಿದ್ದಾರೆ.

– ಕೆ.ಎಸ್. ವಿಮಲಾ

ಹಣದುಬ್ಬರ: ದುಡಿಯುವ ಜನರ ಮೇಲಿನ ಕ್ರೂರ ಪ್ರಹಾರ

ಹಣದುಬ್ಬರದಿಂದ ಸಾಮಾನ್ಯವಾಗಿ ಬಡವರ ಆದಾಯವು ಶ್ರೀಮಂತರಿಗೆ ವರ್ಗಾವಣೆಯಾಗುವಂತೆ ಮಾಡುತ್ತದೆ. ಶ್ರೀಮಂತರಿಗೆ ಇರುವಂತೆ, ತಮ್ಮ ನಷ್ಟವನ್ನು ಸರಿದೂಗಿಸಲು/ಭರ್ತಿ ಮಾಡಿಕೊಳ್ಳಲು ಬಡವರಿಗೆ ಬೇರೆ ಯಾವುದೇ ಮಾರ್ಗ ಇರುವುದಿಲ್ಲ. ಮಾರುಕಟ್ಟೆ ಮೇಲೆ ನಿಯಂತ್ರಣ ಹೊಂದಿರುವವರು ಉತ್ಪಾದನೆಯ ಹೆಚ್ಚುವರಿ ವೆಚ್ಚವನ್ನು ಗ್ರಾಹಕರ ಮೇಲೆ ವರ್ಗಾಯಿಸುತ್ತಾರೆ. ತಮ್ಮ ಲಾಭವನ್ನು ಉಳಿಸಿಕೋಂಡೇ ಅವರು ಹಾಗೆ ಮಾಡುತ್ತಾರೆ.

ಪ್ರಕಾಶ್ ಕಾರಟ್

ಜನರು ಬಳಸುವ ಎಲ್ಲ ಅಗತ್ಯ ಸಾಮಗ್ರಿಗಳ ಬೆಲೆಗಳು ಗಗನಕ್ಕೇರುವುದರೊಂದಿಗೆ ಭಾರತ ದೇಶ ಹಣದುಬ್ಬರದ ಸುಳಿಗೆ ಸಿಲುಕಿದೆ. ಬೆಲೆಗಳ ತೀವ್ರ ಏರಿಕೆಯಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡವರ ಗೋಳು ಹೇಳತೀರದಾಗಿದೆ.


ಮೇ ತಿಂಗಳ ಹಣದುಬ್ಬರ ಶೇಕಡ 7.8 ಆಗಿದೆ. ಇದು ಕಳೆದ ಎಂಟು ವರ್ಷಗಳಲ್ಲೇ ಅತಿ ಹೆಚ್ಚಿನ ಹಣದುಬ್ಬರ ಪ್ರಮಾಣ. ಆಹಾರ ದರಗಳ ಉಬ್ಬರ ಶೇಕಡ 8.38ಕ್ಕೆ ಜಿಗಿದಿದೆ. ಇದು ಕಳೆದ 17 ತಿಂಗಳಲ್ಲೇ ಅತಿ ಹೆಚ್ಚಿನ ಆಹಾರ ಹಣದುಬ್ಬರವಾಗಿದೆ. ಸಗಟು ಬೆಲೆ ಸೂಚ್ಯಂಕ ಏಪ್ರಿಲ್‌ನಲ್ಲಿ 15.08%ಕ್ಕೆ ಏರಿದ್ದು ಪ್ರಸಕ್ತ ಚಾಲ್ತಿಯ 2011–12ರ ಸರಣಿಯಲ್ಲೇ ಅತ್ಯಧಿಕವಾಗಿದೆ.

ಈ ಒಣ ಅಂಕಿಸಂಖ್ಯೆಗಳಿಂದ ಜನಸಾಮಾನ್ಯರು, ಅದರಲ್ಲೂ ಬಡವರಿಗೇನು ಪ್ರಯೋಜನ?. ವಾಸ್ತವದಲ್ಲಿ ಈ ಎಲ್ಲವು ಆಟಾ, ತರಕಾರಿ, ಖಾದ್ಯ ತೈಲ ಮತ್ತು ಅಡುಗೆ ಅನಿಲಗಳ ಬೆಲೆಗಳ ಏರಿಕೆಯನ್ನು ಪ್ರತಿಬಿಂಬಿಸುತ್ತದೆ. ಬಡವರು ಮತ್ತು ಮಧ್ಯಮ ವರ್ಗದ ಜನರ ಊಟ–ತಿಂಡಿ ಖೋತಾ ಆಗುತ್ತದೆ. ಮಕ್ಕಳಿಗೆ ಪೌಷ್ಟಿಕತೆಯಲ್ಲಿ ಕಡಿತವಾಗುತ್ತದೆ ಎಂದರ್ಥ. ಕನಿಷ್ಠ ಜೀವನ ಮಟ್ಟ ನಡೆಸಲು ಬೇಕಾದ ಖರೀದಿ ಮಾಡುವ ಸಾಮರ್ಥ್ಯವನ್ನೂ ಜನರು ಕಳೆದುಕೊಳ್ಳುತ್ತಾರೆ ಎಂಬುದು ಇದರ ಅರ್ಥವಾಗಿದೆ.

ಉತ್ತರ ಭಾರತದಲ್ಲಿ ಅತ್ಯಗತ್ಯ ಆಹಾರವಾದ ಆಟಾದ ಬೆಲೆ 2021ರ ಮೇ ತಿಂಗಳಿಂದ 2022 ಮೇ ನಡುವೆ, ಅಂದರೆ ಒಂದು ವರ್ಷದಲ್ಲಿ ಶೇಕಡ 13ರಷ್ಟು ಏರಿಕೆಯಾಗಿದೆ. ಒಂದು ಲೀಟರ್ ಹಾಲಿನ ಬೆಲೆ 50 ರೂಪಾಯಿ ಆಗಿದೆ. ಅಡುಗೆ ಎಣ್ಣೆ ಬೆಲೆಗಳು ಲೀಟರ್ ಒಂದರ 200 ರೂಪಾಯಿ ದಾಟಿದೆ. ತರಕಾರಿಗಳ ಬೆಲೆಗಳೂ ಗಗನ ಮುಟ್ಟಿವೆ.

ಹಣದುಬ್ಬರವೆಂದರೆ ಲಕ್ಷಾಂತರ ಜನರ ಜೀವನೋಪಾಯ ನಷ್ಟವೆಂದರ್ಥ. ಬೀದಿ ಬದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರ ವಹಿವಾಟು ಮಾಡುವವರು ಸಂಕಷ್ಟಕ್ಕೆ ಸಿಲುಕುತ್ತಾರೆ. ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೂ ಏಟು ಬೀಳುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್ ಸಹಿತವಾದ ಇಂಧನಗಳ ಬೆಲೆಗಳ ಏರಿಕೆಯೇ ಈ ಹಣದುಬ್ಬರ ಸುಳಿಯ ಪ್ರಮುಖ ಭಾಗವಾಗಿದೆ. ಪೆಟ್ರೋಲ್, ಡೀಸೆಲ್ ಮತ್ತು ದ್ರವೀಕೃತ ಅನಿಲದ (ಎಲ್‌ಪಿಜಿ) ಮೇಲಿನ ಕೇಂದ್ರೀಯ ತೆರಿಗೆಗಳ ಹೆಚ್ಚಳದ ಕೇಂದ್ರ ಸರ್ಕಾರದ ನೀತಿಯಿಂದಾಗಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಗಳಲ್ಲಿ ಅಭೂತಪೂರ್ವ ಏರಿಕೆಯಾಗಿದೆ. ರಷ್ಯಾ ಮತ್ತು ಯೂಕ್ರೇನ್ ಯುದ್ಧ ಆರಂಭವಾಗುವ ಮೊದಲೇ ಈ ಪ್ರವೃತ್ತಿ ಆರಂಭವಾಗಿತ್ತು. ಸಮರವು ಪರಿಸ್ಥಿತಿಯನ್ನು ಬಿಗಡಾಯಿಸಿದೆ ಅಷ್ಟೇ. ಇಂಧನವು ಜಾಗತಿಕ ಮಧ್ಯವರ್ತಿಯಾಗಿರುವುದರಿಂದ ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಯೇರಿಕೆಯು ಎಲ್ಲ ವಸ್ತುಗಳ ಬೆಲೆಗಳ ಮೇಲೆ ಅಗಾಧ ಪರಿಣಾಮ ಬೀರುತ್ತದೆ.



ಪೆಟ್ರೋಲ್‌ನ ಕೇಂದ್ರೀಯ ಅಬಕಾರಿ ಸುಂಕಗಳಲ್ಲಿ ಶೇಕಡ 96ರಷ್ಟು ಸೆಸ್‌ಗಳು ಹಾಗೂ ಸರ್ಚಾರ್ಜ್ ಮತ್ತು ಡೀಸೆಲ್‌ನ ಸುಂಕದಲ್ಲಿ ಶೇಕಡ 94 ಇರುತ್ತದೆ ಎನ್ನುವುದನ್ನು ಗಮನಿಸಬೇಕು. ಅಡುಗೆ ಅನಿಲದ ಬೆಲೆಗಳ ಏರಿಕೆಯು ಅತ್ಯಂತ ಕ್ರೂರ ಏರಿಕೆಯಾಗಿದೆ. ಒಂದು ವರ್ಷದಲ್ಲಿ 14.2 ಕೆ.ಜಿ. ಸಿಲಿಂಡರ್ ಬೆಲೆಯಲ್ಲಿ 431.50 ರೂಪಾಯಿ, ಅಂದರೆ ಶೇಕಡ 76 ಏರಿಕೆಯಾಗಿದೆ. 19 ಕೆಜಿಯ ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಈಗ 2,367 ರೂಪಾಯಿ ಆಗಿದ್ದು ಶೇಕಡ 126 ಏರಿಕೆಯಾಗಿದೆ.

ಹಣದುಬ್ಬರದ ಈ ಘೋರ ಅಪಾಯಕಾರಿ ಸನ್ನಿವೇಶದ ಬಗೆಗಿನ ಮೋದಿ ಸರ್ಕಾರದ ಧೋರಣೆ ಆಘಾತಕಾರಿಯಾಗಿದೆ. ಪ್ರತಿದಿನವೂ ಏಪ್ರಿಲ್ ತಿಂಗಳ ಚಿಲ್ಲರೆ ಹಣದುಬ್ಬರದ ಅಂಕಿಸಂಖ್ಯೆಯನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೂ ಶ್ರೀಮಂತರಿಗೆ ಹೋಲಿಸಿದರೆ ಬೆಲೆಯೇರಿಕೆಯಿಂದ ಬಡವರಿಗೆ ಆಗುವ ನಷ್ಟ ಕಡಿಮೆಯೇ ಎಂದು ಹಣಕಾಸು ಸಚಿವಾಲಯ ಚಿತ್ರಿಸುತ್ತಿದೆ.

‘ಬಳಕೆಯ ಪ್ರವೃತ್ತಿಯ ಪುರಾವೆಗಳನ್ನು ಗಮನಿಸಿದರೆ ಭಾರತದಲ್ಲಿ ಹಣದುಬ್ಬರದ ಪರಿಣಾಮವು ಹೆಚ್ಚು ಆದಾಯ ಇರುವ ಜನರ ಮೇಲಿನ ಪರಿಣಾಮಕ್ಕಿಂತ ಬಡಜನರ ಮೇಲಿನ ಪರಿಣಾಮ ಕಡಿಮೆಯಾಗಿದೆ’ ಎಂದು ಏಪ್ರಿಲ್ ತಿಂಗಳ ಮಾಸಿಕ ಆರ್ಥಿಕ ಸಮೀಕ್ಷೆ ಹೇಳಿದೆ. ಅಗ್ರ ಶೇಕಡ 20, ಶೇಕಡ 60 ಮಧ್ಯಮ ವರ್ಗ ಹಾಗೂ ತಳ ಮಟ್ಟದ 20% ಜನರು ಬಳಕೆ ವೆಚ್ಚಕ್ಕೆ ಅನುಗುಣವಾಗಿ ಚಿಲ್ಲರೆ ಬೆಲೆ ಸೂಚ್ಯಂಕದ ಪರಿಣಾಮ ಎದುರಿಸುತ್ತಾರೆ ಎನ್ನುವುದು ಈ ವರದಿಯ ನಿರ್ಣಯವಾಗಿದೆ.

ಈ ನಿರ್ಣಯದ ಅಪಾಯಕಾರಿತನವನ್ನು ವಿಶ್ಲೇಷಣೆಯ ಒಂದು ಅಂಶದಿಂದಲೇ ಸಾಬೀತು ಮಾಡಬಹುದು. ಮಾಸಿಕ ಆರ್ಥಿಕ ವರದಿಯು ಗ್ರಾಮೀಣ ಮತ್ತು ನಗರ ಪ್ರದೇಶಗಳ ವಿವಿಧ ಜನವಿಭಾಗಗಳ ಬಳಕೆಯ ಹಣದುಬ್ಬರ ದರವನ್ನು ಅತಿ ಬುದ್ಧಿವಂತಿಕೆಯಿಂದ ಎತ್ತಿತೋರಿಸುತ್ತದೆ. ಹಣದುಬ್ಬರವು ಬೆಲೆಗಳಲ್ಲಿನ ಬದಲಾವಣೆಯನ್ನು ಸೂಚಿಸುತ್ತದೆ. ಒಂದು ವರ್ಷ ಗ್ರಾಮೀಣ ಬಡವರಿಗೆ ಹಣದುಬ್ಬರ ದರ ಹೆಚ್ಚಾದರೆ ಮರು ವರ್ಷ ಅದು ತುಲನಾತ್ಮಕವಾಗಿ ಕಡಿಮೆಯಿರುತ್ತದೆ. ಆಗ, ವಾಸ್ತವ ಹಣದುಬ್ಬರ ದರ ಕಡಿಮೆಯಾದರೂ ಬೆಲೆಗಳ ಲೆಕ್ಕಾಚಾರದಲ್ಲಿ ಸಂಯೋಜಿತ ಪರಿಣಾಮವು ಹೆಚ್ಚಾಗಿರುತ್ತದೆ. ಉದಾಹರಣೆಗೆ, ನಗರ ಬಡವರ ಆರಂಭಿಕ ದರವು ಶೇಕಡ 6.8 ಏರಿಕೆಯೊಂದಿಗೆ 100 ಆಗಿದ್ದರೆ ಮುಂದಿನ ವರ್ಷ ಅದು 106.8 ಆಗುತ್ತದೆ. ಆಗ, ವಾಸ್ತವ ಹಣದುಬ್ಬರ ದರವು ಸರ್ಕಾರದ ವರದಿ ಹೇಳುವಂತೆ ಶೇಕಡ 5.7ಕ್ಕೆ ಇಳಿದರೆ ಮೂರನೇ ವರ್ಷದ ಅಂತ್ಯದಲ್ಲಿ ವಾಸ್ತವ ದರ 112.89 (106.8ರ ಮೇಲೆ ಶೇಕಡ 5.7) ಆಗುತ್ತದೆ.

ಹೀಗಾಗಿ, ಮೊದಲ ವರ್ಷದಲ್ಲಿ ದರವು 100 ಆಗಿದ್ದು ಮೂರು ವರ್ಷಗಳಲ್ಲಿ ಅದು 112.89 ಆಗುತ್ತದೆ. ಇದು ಎಲ್ಲ ಬಳಕೆದಾರ ವಿಭಾಗಗಳಲ್ಲಿ ಹೆಚ್ಚಿನ ಏರಿಕೆಯಾಗುತ್ತದೆ. ಅದನ್ನು ವರದಿಯಲ್ಲಿ ವಂಚನೆಯಿಂದ ಅಡಗಿಸಲಾಗಿದೆ. ಇತರ ವಿಭಾಗಗಳಿಗೆ ಸಂಯೋಜಿತ ಪರಿಣಾಮವು; ಎಲ್ಲ ಗುಂಪುಗಳು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳಿಗೆ ದರವನ್ನು ಏರಿಸಿದರೂ, ತುಲನಾತ್ಮಕವಾಗಿ ಕಡಿಮೆಯಿರುತ್ತದೆ. ಆದ್ದರಿಂದ, ವಾಸ್ತವ ಹಣದುಬ್ಬರ ದರ ಶೇ. 6.8ರಿಂದ ಶೇ. 5.7ಕ್ಕೆ ಇಳಿದರೂ ಹೆಚ್ಚು ಹೊಡೆತ ಬೀಳುವುದು ನಗರ ಪ್ರದೇಶಗಳ ಬಡವರಿಗೇ ಆಗಿದೆ.

ಹಣದುಬ್ಬರದಿಂದ ಶ್ರೀಮಂತರಿಗೇ ಹೆಚ್ಚು ತೊಂದರೆಯಾಗುತ್ತದೆ ಎಂಬ ಪರಿಕಲ್ಪನೆಯ ಬಣ್ಣವನ್ನು ಬಯಲು ಮಾಡಬೇಕು. ಕೂಲಿಯಿಂದ ಆದಾಯ ಸಂಪಾದಿಸುವವರು ಹಾಗೂ ಕಡಿಮೆ ಉಳಿತಾಯ ಹೊಂದಿರುವವರು ನಿಜವಾಗಿ ಕಷ್ಟ ಅನುಭವಿಸಬೇಕಾಗುತ್ತದೆ. ಅದರಲ್ಲೂ ಆಹಾರದ ಒಟ್ಟಾರೆ ಖರೀದಿದಾರರಾಗಿರುವವರನ್ನು ಆಹಾರ ಹಣದುಬ್ಬರ ನೇರವಾಗಿ ಕಾಡುತ್ತದೆ. ಸಿರಿವಂತರು ಹಾಗೂ ಮೇಲ್‌ಮಧ್ಯಮ ವರ್ಗದ ಜನರು ಆರ್ಥಿಕ ಸಾಧನ ಹಾಗೂ ಷೇರು ಮಾರುಕಟ್ಟೆ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಯಾಕೆಂದರೆ ಅಲ್ಲಿ ಬೆಲೆಗಳು ಹಣದುಬ್ಬರ ದರಕ್ಕೆ ಅನುಗುಣವಾಗಿ ಚಲಿಸುತ್ತದೆ. ಹೀಗಾಗಿ ಅವರ ಆದಾಯವನ್ನು ಬಹುವಾಗಿ ರಕ್ಷಿಸುತ್ತದೆ.

ಹಣದುಬ್ಬರದಿಂದ ಸಾಮಾನ್ಯವಾಗಿ ಬಡವರ ಆದಾಯವು ಶ್ರೀಮಂತರಿಗೆ ವರ್ಗಾವಣೆಯಾಗುವಂತೆ ಮಾಡುತ್ತದೆ. ಶ್ರೀಮಂತರಿಗೆ ಇರುವಂತೆ, ತಮ್ಮ ನಷ್ಟವನ್ನು ಸರಿದೂಗಿಸಲು/ಭರ್ತಿ ಮಾಡಿಕೊಳ್ಳಲು ಬಡವರಿಗೆ ಬೇರೆ ಯಾವುದೇ ಮಾರ್ಗ ಇರುವುದಿಲ್ಲ. ಮಾರುಕಟ್ಟೆ ಮೇಲೆ ನಿಯಂತ್ರಣ ಹೊಂದಿರುವವರು ಉತ್ಪಾದನೆಯ ಹೆಚ್ಚುವರಿ ವೆಚ್ಚವನ್ನು ಗ್ರಾಹಕರ ಮೇಲೆ ವರ್ಗಾಯಿಸುತ್ತಾರೆ. ತಮ್ಮ ಲಾಭವನ್ನು ಉಳಿಸಿಕೋಂಡೇ ಅವರು ಹಾಗೆ ಮಾಡುತ್ತಾರೆ.

ಹಣದುಬ್ಬರದಿಂದಾಗಿ ಉಳಿತಾಯಗಾರರ ನಿಜವಾದ ಬಡ್ಡಿ ಆದಾಯವು ಕಡಿಮೆಯಾಗುತ್ತದೆ. ಆದರೆ ಸಾಲಗಾರರು ಕಡಿಮೆ ವಾಸ್ತವ ಬಡ್ಡಿಯನ್ನು ಪಾವತಿಸಿದರೆ ಸಾಕಾಗುತ್ತದೆ. ದುಡಿಯುವ ಜನರೇ ದೊಡ್ಡ ಪ್ರಮಾಣದಲ್ಲಿ ಉಳಿತಾಯ ಮಾಡುವವರಾಗಿದ್ದಾರೆ ಹಾಗಿದ್ದು ಬಂಡವಾಳಗಾರರೇ ದೊಡ್ಡ ಪ್ರಮಾಣದಲ್ಲಿ ಸಾಲ ಪಡೆಯುವವರಾಗಿದ್ದಾರೆ. ಆದ್ದರಿಂದ ಇಲ್ಲಿಯೂ ಹೆಚ್ಚು ಸಂಕಷ್ಟ ಅನುಭವಿಸುವವರು ದುಡಿಯುವ ವರ್ಗದವರೇ ಆಗಿದ್ದಾರೆ.

ಬೆಲೆಯೇರಿಕೆ ವಿರುದ್ಧ ಹೋರಾಡುವ ಭಾಗವಾಗಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಲ್ಲ ಸರ್ಚಾರ್ಜ್‌ಗಳನ್ನು ತೆಗೆದು ಹಾಕಬೇಕೆಂದು ಎಡ ಪಕ್ಷಗಳು ಆಗ್ರಹಿಸಿವೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ನಿಯಂತ್ರಣದಲ್ಲಿಡಲು ಇರುವ ಮಾರ್ಗ ಅದೊಂದೇ ಆಗಿದೆ. ಎಲ್ಲ ಅವಶ್ಯ ಸಾಮಾಗ್ರಿಗಳನ್ನು, ಅದರಲ್ಲೂ ವಿಶೇಷವಾಗಿ ಅಡುಗೆ ಎಣ್ಣೆ ಮತ್ತು ದವಸಧಾನ್ಯಗಳನ್ನು ಪೂರೈಸುವ ಮೂಲಕ ಸಾರ್ವಜನಿಕ ವಿತರಣೆ (ಪಡಿತರ) ವ್ಯವಸ್ಥೆಯನ್ನು ಬಲಪಡಿಸುವಂತೆಯೂ ಅವು ಒತ್ತಾಯಿಸಿವೆ. ಕೋವಿಡ್‌ನ ಎರಡು ವರ್ಷದ ಅವಧಿಯಲ್ಲಿ ಆದಾಯ ಮತ್ತು ಜೀವನೋಪಾಯ ವ್ಯಾಪಕ ರೀತಿಯಲ್ಲಿ ನಷ್ಟವಾಗಿರುವುದರಿಂದ ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲ ಕುಟುಂಬಗಳಿಗೆ ಪ್ರತಿ ತಿಂಗಳು 7,500 ರೂಪಾಯಿಗಳನ್ನು ವರ್ಗಾಯಿಸಬೇಕೆಂದೂ ಎಡಪಕ್ಷಗಳು ಒತ್ತಾಯಿಸಿವೆ.

ಬೆಲೆಯೇರಿಕೆಗೆ ಕಡಿವಾಣ ಹಾಕಲು ಈ ಬೇಡಿಕೆಗಳನ್ನು ಮಂಡಿಸಲಾಗಿದೆ. ಅದರ ಜೊತೆಜೊತೆಯಲ್ಲೇ ನಿರುದ್ಯೋಗ ಸಮಸ್ಯೆ ಪರಿಹರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಿದೆ. ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಇದು ಆದ್ಯತೆಯ ಅಜೆಂಡಾ ಆಗಬೇಕು.

ಈ ಬೇಡಿಕೆಗಳ ಆಧಾರದಲ್ಲಿ ಮೇ25–31ರ ನಡುವೆ ರಾಷ್ಟ್ರವ್ಯಾಪಿ ಚಳವಳಿಗೆ ಎಡ ಪಕ್ಷಗಳು ಕರೆ ನೀಡಿವೆ. ಬೆಲೆಯೇರಿಕೆ ಮತ್ತು ನಿರುದ್ಯೋಗದ ವಿರುದ್ಧ ಇಂಥ ಹೋರಾಟ ಮತ್ತು ಆಂದೋಲನಗಳನ್ನು ದೇಶದಾದ್ಯಂತ ವಿಸ್ತರಿಸಬೇಕು ಹಾಗೂ ತೀವ್ರಗೊಳಿಸಬೇಕು.

ಅನು: ವಿಶ್ವ

ವಿವಾಹ ವಯಸ್ಸಿನ ಪ್ರಸ್ತಾವಿತ ತಿದ್ದುಪಡಿ.... ಪುಟ 2 ರಿಂದ

ವಯಸ್ಸಿನಲ್ಲಿ ಮದುವೆಯಾಗಲು ನಿರ್ಧರಿಸಿದರೆ, ಅವರು ತಕ್ಷಣವೇ ಗರ್ಭಿಣಿಯಾಗಬೇಕು ಎಂದೂ ಅರ್ಥವಲ್ಲ.

ಭಾರತದಲ್ಲಿ ಹದಿಹರೆಯದ ವಿವಾಹಗಳು 2000 ದ ನಂತರ 51% ದಷ್ಟು ಕಡಿಮೆಯಾಗಿದೆ ಎಂದು ಕೆಲವು ವರದಿಗಳು ಹೇಳುತ್ತವೆ; ಇದು ನಿಜವಾಗಿದ್ದರೆ, ಮಹಿಳೆಯ ಕನಿಷ್ಠ ವಿವಾಹದ ವಯಸ್ಸನ್ನು ಕಾನೂನುಬದ್ಧವಾಗಿ ಜಾರಿಗೊಳಿಸದೆಯೇ ಇದನ್ನು ಸಾಧಿಸಲಾಗಿದೆ. ಮದುವೆಯ ಸರಾಸರಿ ವಯಸ್ಸು ಈಗಾಗಲೇ 22.1 ಕ್ಕೆ ಹೆಚ್ಚಾಗಿದೆ (ಅಂಕಿಅಂಶಗಳ ಮಂತ್ರಾಲಯ, 2019ರ ವರದಿ). ಪ್ರಪಂಚದ ಅನೇಕ ದೇಶಗಳಲ್ಲಿ ಮದುವೆಯ ವಯಸ್ಸು 18 ವರ್ಷಗಳು. ಇದು ಭಾರತಕ್ಕೆ ಭಿನ್ನವಾಗಿರಬೇಕಾಗಿಲ್ಲ.

ಸಂಬಂಧಿತ ಮಹಿಳೆಯರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯು ಬಾಲ್ಯ ವಿವಾಹವನ್ನು ತಡೆಯುವಲ್ಲಿ ನಿರ್ಣಾಯಕ ಅಂಶವಾಗಿದೆ. ಅನೇಕ ರಾಜ್ಯಗಳಲ್ಲಿ ಬಾಲ್ಯವಿವಾಹದ ನಿರಂತರತೆಯ ಬಗ್ಗೆ ಮತ್ತು ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಸರ್ಕಾರವು ನಿಜವಾಗಿಯೂ ಕಾಳಜಿ ವಹಿಸುತ್ತಿದ್ದರೆ, ಅದರ ಆದ್ಯತೆಯು ಬಡತನ ನಿರ್ಮೂಲನೆ ಜೊತೆಗೆ ಪೌಷ್ಟಿಕಾಂಶ, ಶೈಕ್ಷಣಿಕ ಮತ್ತು ಆರೋಗ್ಯ ಸೇವೆಗಳನ್ನು ಸುಧಾರಿಸುವುದು ಮತ್ತು ಇವಕ್ಕೆ ಬಜೆಟ್ ನಲ್ಲಿ ಹಣ ಒದಗಿಸುವುದು ಆಗಿರಬೇಕು.

ಆದ್ದರಿಂದ ಈ ಮಸೂದೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ತಾವು ಒತ್ತಾಯಿಸುತ್ತಿರುವುದಾಗಿ ಈ ಸಂಘಟನೆಗಳು ಹೇಳಿವೆ. ■

ಪಕ್ಕದಲ್ಲೇ ಪ್ರತಿ ದಿನವೂ ಕೋಟಿ, ಕೋಟಿ ಬಾಚಿಕೊಳ್ಳುವ ಬೃಹತ್ ಫ್ಯಾಕ್ಟರಿ. ಆದರೆ ಹಸಿದ ಹೊಟ್ಟೆಗೆ ತುತ್ತು ಹುಡುಕುವ ತತ್ವಾರ ನೆಲದ ಮಕ್ಕಳಿಗೆ. ಜಿಂದಾಲ್ ಉಕ್ಕಿನ ಫಾಕ್ಟರಿ ಉಗುಳಿದ ಬೂದಿಯಲ್ಲಿ ಕಬ್ಬಿಣದ ತುಂಡು ಹೆಕ್ಕಿ ಬದುಕು ಕಟ್ಟಿಕೊಳ್ಳಲು ಹೋದವರು ಜೀವ ಕಳೆದುಕೊಂಡು ಹೆಣವಾದ ದುರಂತ ಕಥೆಯಿದು.

ಬೂದಿಯಲ್ಲಿ ಬೂದಿಯಾದ ಬಡವರು

ಪಿ.ಆರ್. ವೆಂಕಟೇಶ್





ತುಮಟಿಯ ರಾಮಾಂಜನಿ

ಇತ್ತೀಚಿಗೆ ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ರಾಜಾಪುರ ಮತ್ತು ತುಮಟಿ ಗ್ರಾಮದ ಬಡ ಕೂಲಿಕಾರರು ಜಿಂದಾಲ್ ಕಾರ್ಖಾನೆಯ ಬೂದಿ ಯಾರ್ಡ್ ನಲ್ಲಿ ತುತ್ತಿನ ಚೀಲ ತುಂಬಿಕೊಳ್ಳಲು ಹೆಣಗಿ ಬದುಕಿನ ಉಸಿರನ್ನೇ ಕಳೆದುಕೊಂಡು ಹೆಣವಾದ ದಾರುಣ ಘಟನೆ ಜರುಗಿದೆ. ಈ ಘಟನೆಯಲ್ಲಿ ರಾಜಾಪುರದ ಹೊನ್ನೂರ ಸ್ವಾಮಿ (25) ಹಾಗೂ ತುಮಟಿಯ ರಾಮಾಂಜನಿ (55) ಎಂಬ ಕೃಷಿಕೂಲಿಕಾರರು ಮೃತಪಟ್ಟಿದ್ದಾರೆ.

ಘಟನೆ ನಡೆದದ್ದು ಹೀಗೆ:

ಸಂಡೂರು ತಾಲೂಕಿನ ತೋರಣಗಲ್ ಗ್ರಾಮದಲ್ಲಿರುವ ಜಿಂದಾಲ್ ಉಕ್ಕಿನ ಕಾರ್ಖಾನೆ ತನ್ನಲ್ಲಿ ಸಂಗ್ರಹಗೊಳ್ಳುವ ವೇಸ್ಟ್ ಬೂದಿಯನ್ನು ಸುಲ್ತಾನಾಪುರ ಗ್ರಾಮದ ಹತ್ತಿರದ ಹೊರ ವಲಯದಲ್ಲಿ ಟ್ರಿಪ್ಪರ್ ಮೂಲಕ ವಿಲೇವಾರಿ ಮಾಡುತ್ತದೆ. ಹೀಗೆ ವಿಲೇವಾರಿಗೊಂಡ ಬೂದಿ ಅಂದಾಜು 80 ರಿಂದ 100 ಅಡಿ ಎತ್ತರ ಬೆಟ್ಟದಂತೆ ಬೆಳೆದಿದೆ. ಈ ಬೂದಿಯಲ್ಲಿ ಸಣ್ಣಪುಟ್ಟ ಕಬ್ಬಿಣದ ತುಂಡುಗಳಿರುತ್ತವೆ. ಬಡ ಕೂಲಿಕಾರರು ಹೊಟ್ಟೆ ಪಾಡಿಗೆ ಬೂದಿಯಲ್ಲಿ ಹುದುಗಿರುವ ಕಬ್ಬಿಣವನ್ನು ಹೆಕ್ಕಿ ತೆಗೆದು ಅವುಗಳನ್ನು ಮಾರಿ ಬಂದ ಹಣದಿಂದ ಕುಟುಂಬ ಸಲಹುತ್ತಾರೆ. ಹೀಗೆ ಈ ಎರಡು ಗ್ರಾಮದ ಕೂಲಿಕಾರರು ತುಂಡುಗಳನ್ನು ಆಯುವಾಗ ಬೂದಿ ಗುಡ್ಡ ಕುಸಿದು ಬಿದ್ದಿದೆ. ಬಿದ್ದ ಬೂದಿಯಲ್ಲಿ ಸಿಲುಕಿದ ಕೂಲಿಕಾರರು ಉಸುರುಗಟ್ಟಿ ಬೂದಿಯಲ್ಲೇ ಪ್ರಾಣಬಿಟ್ಟಿದ್ದಾರೆ. ಮೃತ ದೇಹಗಳನ್ನು ಜೆಸಿಬಿ ಮೂಲಕ ಹೊರತೆಗೆಯಲಾಗಿದೆ.

ಈ ಅನಿವಾರ್ಯತೆ ಏಕೆ?

ಈ ಗ್ರಾಮಗಳ ಕೂಲಿಕಾರರು ಕಾರ್ಖಾನೆಯ ಬೂದಿಯಲ್ಲಿ ಬದುಕು ಕಂಡುಕೊಳ್ಳುವ ಅನಿವಾರ್ಯತೆ ಉಂಟಾಗಿದ್ದು ಹೇಗೆ.?

ಇವರ ಬದುಕಿಗೆ ಪರ್ಯಾಯ ಮಾರ್ಗ ಇರಲಿಲ್ಲವೆ?

ಈ ಪ್ರಶ್ನೆಗಳಿಗೆ ಎರಡೂ ಗ್ರಾಮಗಳ ದುರಂತ ಕಥೆಯೇ ಉತ್ತರವಾಗಿವೆ.

ಭಾರತದಲ್ಲಿರುವಂತೆ ಮೂವತ್ತು ವರ್ಷಗಳ ಹಿಂದೆ ಈ ಎರಡೂ ಗ್ರಾಮದಲ್ಲಿ ಕೃಷಿ ಚಟುವಟಿಕೆ ಭರದಿಂದ ಸಾಗಿತ್ತು. ಗ್ರಾಮದ ಜನರಿಗೆ ಕೃಷಿಯೇ ಬೆನ್ನೆಲುಬಾಗಿತ್ತು. ಇದರೊಂದಿಗೆ ಪಶು ಹಾಗೂ ಕುರಿ ಸಾಕಾಣಿಕೆಯೂ ಸಾಗಿತ್ತು. ಆಗ ಶೇಂಗಾ, ಜೋಳ ಮತ್ತು ಹತ್ತಿ ಬೆಳೆಗೆ ಈ ಗ್ರಾಮಗಳು ಪ್ರಸಿದ್ದಿ ಪಡೆದಿದ್ದವು. ಸಕಾಲಕ್ಕೆ ಮಳೆ ಉತ್ತಮ ಬೆಳೆ ಕಂಡ ರೈತರ ಬದುಕು ತಕ್ಕಷ್ಟು ಹಸನಾಗಿತ್ತು. ಕೃಷಿ ಕೂಲಿಕಾರರಿಗೂ ಎರಡು ಹೊತ್ತಿನ ಗಂಜಿಗೆ ಬರವಿರಲಿಲ್ಲ.

ಆಗ ಹೊಸಪೇಟೆಯಲ್ಲಿದ್ದ ಕೆ.ಓ.ಎಫ್ (ಅಡಿಗೆ ಎಣ್ಣೆ ಉತ್ಪಾದನಾ ಘಟಕ)ಗೆ ಎಣ್ಣೆಕಾಳು, ಬಾಂಬೆ, ಬಳ್ಳಾರಿ, ಆಂಧ್ರ ಪ್ರದೇಶದ ನಗರಗಳ ಜಿನ್ನಿಂಗ್ ಘಟಕಗಳಿಗೆ ಹತ್ತಿ, ಬಳ್ಳಾರಿ .ರಾ. ಹಾಲು ಉತ್ಪಾದನಾ ಘಟಕಕ್ಕೆ ಹಾಲು ಈ ಗ್ರಾಮಗಳಿಂದ ಹೇರಳವಾಗಿ ಸರಬರಾಜಾಗುತ್ತಿತ್ತು.

ಸರಕಾರ ಜಾಗತೀಕರಣದ ಪೆಡಂಭೂತಕ್ಕೆ ಮಣೆ ಹಾಕಿದ ನಂತರ ಈ ಗ್ರಾಮದಲ್ಲಿನ ಆರ್ಥಿಕತೆ ನಿಧಾನವಾಗಿ ಕುಸಿಯಲು ಪ್ರಾರಂಭಿಸಿತು. ಇದರೊಂದಿಗೆ ಸತತ ಬರ ಗಾಯದ ಮೇಲೆ ಬರೆ ಎಳೆಯಿತು. ಆಗಿನ ಸರಕಾರ ಬರದ ಸಂಕಟ ಎದುರಿಸಲು ಅಗತ್ಯವಾಗಿ ಕೈಗೊಳ್ಳಬೇಕಾದ ನೀರಾವರಿ ಯೋಜನೆಗಳನ್ನು ನಿರ್ಲಕ್ಷಿಸಿತು. ಪರಿಣಾಮ, ಬೇಸಾಯದಿಂದ ಬದುಕು ದುಸ್ತರ ಎಂಬ ಭಾವನೆ ರೈತರಲ್ಲಿ ಮನೆ ಮಾಡಿತು. ಕೆಲಸ ವಿಲ್ಲದೆ ಕೂಲಿಕಾರರು ಕೈಕೈ ಹಿಚುಕಿಕೊಂಡರು.

ಇದರ ಬೆನ್ನಲ್ಲೇ ಸರಕಾರ ಅಭಿವೃದ್ಧಿಯ ನೆಪದಲ್ಲಿ ನಾನಾ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಲು ಮುಂದಾಯಿತು. ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಖಾಸಗಿವಲಯಕ್ಕೆ ಉತ್ತೇಜನ ನೀಡಿತು. ಇದರನ್ವಯ ಕೈಗಾರಿಕಾ ಅಭಿವೃದ್ಧಿ ಮಂಡಳಿ ಪರಿಹಾರದ ಆಶೆಯ ಬಲೆ ಬೀಸಿ ಕುಡಿತಿನಿ, ತೋರಣಗಲ್ ಮತ್ತಿತರೆ ಗ್ರಾಮದಲ್ಲಿ ಸಹಸ್ರಾರು ಹೆಕ್ಟರ್ ಜಮೀನನ್ನು ರೈತರಿಂದ ವಶಪಡಿಸಿಕೊಂಡು ಖಾಸಗಿ ಕಂಪನಿಗಳಿಗೆ ನೀಡಿತು. ಆಗ ಈ ಗ್ರಾಮದ ಜಮೀನುಗಳಲ್ಲಿ ಹಸಿರು ನಕ್ಕು ಜನರಿಗೆ ತಂಪು ನೀಡಿದ್ದರೆ ಈಗ ಈ ಜಮೀನಿನಲ್ಲಿ ಕಾರ್ಖಾನೆಯ ಹೊಗೆ ಬೆಳೆದು ಜನರಿಗೆ ರೋಗದ ರುಜಿನಗಳ ಸಂಕಟ ನೀಡಿವೆ. ಇದರ ಬೆನ್ನಲ್ಲೆ ರಾಜಾಪುರ ಹಾಗು ತುಮಟಿ ಗ್ರಾಮದಲ್ಲಿ ಖಾಸಗಿ ಸೋಲಾರ್ ವಿದ್ಯುತ್ ಘಟಕ ಅಗ್ಗದರದ ಲೀಜ್ ನಲ್ಲಿ ರೈತರಿಂದ ಅಂದಾಜು ಎರಡುವರೆ ಸಾವಿರ ಎಕರೆ ಜಮೀನನ್ನು ಪಡೆದಿದೆ. ಆದರೆ ರೈತರಿಗೆ ಯಾವುದೇ ಉದ್ಯೋಗ ನೀಡಿಲ್ಲ.

ಈ ನೀತಿಯ ದುಷ್ಪರಿಣಾಮ ಕೃಷಿ ಕೂಲಿಕಾರರ ಬದುಕನ್ನು ಸಂಕಷ್ಟಕ್ಕೆ ದೂಡಿತು. ಒಂದೆಡೆ ಕೃಷಿ ಚಟುವಟಿಕೆ ಇಲ್ಲವಾಗಿ ಇನ್ನೊಂದೆಡೆ ಕಾರ್ಖಾನೆಯಲ್ಲೂ ಕೆಲಸ ಸಿಗದೆ ಮತ್ತೊಂದೆಡೆ ವಲಸೆ ಹೋಗಿ ಹೊಟ್ಟೆಗೆ ಹಿಟ್ಟು ದಕ್ಕಿಸಿಕೊಳ್ಳಬೇಕೆಂದರೆ ಕೋವಿಡ್ ಮಹಾ ಸೋಂಕು ಅಪ್ಪಳಿಸಿ ಎಲ್ಲಿಯೂ ದಾರಿ ಕಾಣದಂತಾಗಿದ್ದಾರೆ.

ಇಂಥಹ ಸಂಧರ್ಭದಲ್ಲಿ ಸರಕಾರದ ಮ.ಗಾ. ಉದ್ಯೋಗ ಖಾತರಿ ಯೋಜನೆ ಕೂಲಿಕಾರರಿಗೆ

ಪುಟ 10 ಕ್ಕೆ







ಮೃತ ಕೂಲಿಕಾರ ರಾಜಾಪುರದ ಹೊನ್ನೂರ ಸ್ವಾಮಿ

ನನ್ನೂರ ಕಿಟ್ಟ

ನನ್ನೂರ ಕಿಟ್ಟ ಪುಟ್ಟನೇನಲ್ಲ
ಜಗಕ್ಕೆ ಪ್ರಸಿದ್ಧ
ಅಲ್ಲಿ ಹುಟ್ಟಿ ಇಲ್ಲಿ ಬೆಳೆದು
ಬೆಟ್ಟದಾಕಾರ ಪಡೆದ.
ಕಲ್ಲಿನಷ್ಟೇ ಗಟ್ಟಿ ಗಾಳಿಯಂತೆ ಹಗುರ
ಮೈತಂಪು ಒಳಗೆ ಭಗ್ ಎನ್ನುವ ಬೆಂಕಿ
ಬೆರಳಿಟ್ಟರೆ ಹಾವಿನಷ್ಟೆ ಜಾರು ನುಣುಪು.

ಹಸಿರ ನುಂಗಿ ಬಸಿರಾಗಿ
ಉಸಿರುಗಳ ಹೀರಿ
ಸೂರ್ಯನನ್ನೇ ಸುಟ್ಟು ಈ ಕಿಟ್ಟ
ಕಾರ್ಖಾನೆ ಕೊಳವೆ ಹೇತ ಕರಕು ಹುಡಿ.
ಗಾಳಿ ಎಂದರೆ ಪ್ರೀತಿ
ಬೀಸಿದರೆ ಬಿಗಿದಪ್ಪಿ ರಕ್ಕಸದಾಕಾರ ಪಡೆದು
ಮನೆಗೆ ಮೈಗೆ ಹಾದಿ ಬೀದಿಯ ಗಿಡ ಮರಕೆ
ಊರ ಜೀವಕೆ ಸುಂಟರು ಸುತ್ತುವ
ಧಾಳಿಖೋರ.

ತೊಳೆಯ ಬಹುದು ಮೈಮನೆ ಎಲ್ಲ
ಮನದೊಳಗಿನ ಲಗ್ಗೆಗೆ ತೊಳೆಯಲೆಲ್ಲಿದೆ ಜಲ
ಸಾವುಗಳ ಸವಾರನಿಗೆ ಸಾವೆಂಬುದೆಲ್ಲಿ.
ಇವಗೆ ಮೂಗುದಾರ ಎಂದರೆ
ಕೊಳವೆ ಮಾಲಕರು ತೋರುತ್ತಾರೆ
ಗಾಳಿಗೆ ಕಟ್ಟಿದ ಕಾಂಪೌಂಡ್ ತಡೆಗೋಡೆ.

ಕೊಳವೆ ಕಕ್ಕಿದಷ್ಟು ಬೆಳೆದು
ಊರನೆಲ್ಲ ತನ್ನ ಅಪ್ಪುಗೆಯಲಿ ಹಿಡಿದಿಟ್ಟು
ಉಣ ಬಡಿಸಿದ ಕ್ಯಾನ್ಸರ್ ಕೆಮ್ಮು ದಮ್ಮು
ಸಂಕಟದ ಯಾತನೆಗಳ ಬಾನ.
ಇದಕ್ಕೂ ಇವೆ
ಲಾಭದ ಜೊಲ್ಲು ಸುರಿಸುವ
ಸೀಳುನಾಯಿಗಳ ಗುಂಪು
ಕಿಟ್ಟದೊಳಗೂ ಕೋಟಿಗಳ ಕೋಟೆ ಕಟ್ಟಿ
ಮೆರೆವ ಮಾಯಗಾರರ ಸಂಪು.

ಹಸಿರ ಉಸಿರು ಕಳಕೊಂಡ
ಗುಡಿಸಲೊಳಗಿನ ಹಸಿವು
ಬೆದಕಿವೆ ಕಿಟ್ಟದ ಮೈಯ
ಕಣ್ಣಲ್ಲಿ ಆಸೆ ಮಿಂಚನು ತುಂಬಿ
ಸುಟ್ಟ ಸೂರ್ಯನ ತುಂಡು ದಕ್ಕಿದರೆ ಸಾಕು
ತೀಡಿ ಹಚ್ಚಬಹುದು ಬದುಕ ಬೆಳಕ.
ಬೆದಕಿದಷ್ಟೂ ಬೆಂಕಿಯ ಆಳ
ಬೆವರು ಆವಿಗೊಂಡರೂ
ನುಗ್ಗಿವೆ ಹಸಿದ ಹೊಟ್ಟೆಗಳು
ದಕ್ಕಿದ್ದಾದರೂ ಏನು ರೊಟ್ಟಿಯ ತುಂಡೇ
ಅಲ್ಲಲ್ಲ
ಕಿಟ್ಟ ಬಿಗಿದಪ್ಪಿದ ಸಾವು !

ಪಿ.ಆರ್. ವೆಂಕಟೇಶ್

ಮಹಿಳಾ ಕೃಷಿ ಕೂಲಿಕಾರರ ಬದುಕು–ಬವಣೆಗಳು



ಪುರುಷ ಕೃಷಿ ಕೂಲಿಕಾರರಿಗಿಂತಲೂ ಹೆಚ್ಚು ಶೋಷಣೆ ಅನುಭವಿಸುತ್ತಿರುವ ಮಹಿಳಾ ಕೃಷಿ ಕೂಲಿಕಾರರನ್ನು ಸಂಘಟಿಸಲು ಹೆಚ್ಚು ಗಮನ ನೀಡಬೇಕು. ಕೂಲಿಕಾರ ಮಹಿಳೆಯರು ಮಹಿಳೆಯರಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು, ಅವರಲ್ಲಿ ನಾಯಕತ್ವದ ಗುಣಗಳನ್ನು ಪ್ರೋತ್ಸಾಹಿಸಿ ಬೆಳೆಸಬೇಕಿದೆ.

— ನಿತ್ಯಾನಂದಸ್ವಾಮಿ —

ಬಿಸಿಲು, ಮಳೆ, ಚಳಿಯ ಗೊಡವೆಯಿಲ್ಲದೆ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವವರೇ ಮಹಿಳಾ ಕೃಷಿ ಕೂಲಿಕಾರರು. ಮುಸುರೆ ತಿಕ್ಕುವುದರಿಂದ ಹಿಡಿದು ಮಣ್ಣು ಹೊರುವವರೆಗೂ, ಭತ್ತ ಬಡಿಯುವುದರಿಂದ ಹಿಡಿದು ಅದನ್ನು ಅಕ್ಕಿ ಮಾಡುವವರೆಗೂ ಮನೆಯ ಒಳಗೂ ಮನೆಯ ಹೊರಗೂ ಬೆವರು ಸುರಿಸಿ ಮೈ ಬಗ್ಗಿ ದುಡಿಯುವವರೇ ಕೂಲಿಕಾರ ಮಹಿಳೆಯರು. ಕೃಷಿ ಕೂಲಿಕಾರರ ಬದುಕು ಬವಣೆಗಳ ಮೂಟೆ ಎಂದರೆ ತಪ್ಪಾಗದು. ಸ್ವಂತದ್ದೆಂಬ ತುಂಡು ಜಮೀನು ಇದ್ದವರು ಅವರಲ್ಲಿ ಅಪರೂಪ. ಶ್ರೀಮಂತರ ಮನೆಗೆಲಸಕ್ಕೆ ಹೋಗುವುದು ಅವರಿಗೆ ಅನಿವಾರ್ಯ. ಇನ್ನು ಕೆಲವರಂತೂ ಅಂದು ದುಡಿದು ತಂದ ಆದಾಯದಲ್ಲೇ ಅಂದಿನ ಆಹಾರ ತಂದು ತಿನ್ನಬೇಕಾದ ಪರಿಸ್ಥಿತಿ.

ಊರುವಲು ಕಟ್ಟಿಗೆ ಸಮಗ್ರಹಿಸುವುದು, ಕೆರೆ ಬಾವಿಯಿಂದ ನೀರು ಹೊತ್ತು ತರುವುದು, ಮನೆಯವರಿಗೆ ಉಟೋಪಚಾರ ಒದಗಿಸುವುದು ಮುಂತಾದ ಎಲ್ಲ ಕೆಲಸಗಳನ್ನು ಅವಳೇ ಮಾಡಬೇಕು. ಕೆಲವು ಕುಟುಂಬಗಳಲ್ಲಿ ಪತಿ ಅನಾರೋಗ್ಯ ಪೀಡಿತನಾಗಿರುತ್ತಾನೆ. ಮಕ್ಕಳು ಚಿಕ್ಕವರಿರುತ್ತಾರೆ. ಆಗ ಎಲ್ಲ ಕೆಲಸವನ್ನು ಮಹಿಳೆಯೇ ಮಾಡಬೇಕಾಗುತ್ತಿರುತ್ತದೆ.

ಗ್ರಾಮೀಣ ಕೆಲಸಗಾರರಲ್ಲಿ ಮಹಿಳಾ ಕೂಲಿಕಾರರ ಸಂಖ್ಯೆ ಹೆಚ್ಚುತ್ತಲೇ ಇದೆ. ಕೂಲಿಕಾರ ಕುಟುಂಬಗಳ ಆದಾಯ ಇಳಿಮುಖವಾಗುತ್ತಿರುವುದರಿಂದ, ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವುದರಿಂದ, ಸಮರ್ಪಕವಾದ ರೇಷನ್ ಪದ್ಧತಿ ಜಾರಿಯಲ್ಲಿ ಇಲ್ಲದಿರುವುದರಿಂದ, ಮಕ್ಕಳ ಶಿಕ್ಷಣ, ಆರೋಗ್ಯ ವೆಚ್ಚಗಳು ದುಬಾರಿಯಾಗುತ್ತಿರುವುದರಿಂದ, ಮನೆಗಳಲ್ಲಿ ಪುರುಷರ ಸಂಪಾದನೆಯಿಂದ ಕುಟುಂಬ ನಿರ್ವಹಣೆ ಅಸಾಧ್ಯವಾಗುತ್ತಿರುದರಿಂದ ಮಹಿಳೆಯರು ಮನೆಯೊಳಗಿನ ಕೆಲಸ ಮುಗಿಸಿ ಕೂಲಿ ಕೆಲಸಕ್ಕೆ ಹೊಗುವುದು ಅನಿವಾರ್ಯವಾಗುತ್ತಿದೆ.

ಮಹಿಳೆಯರನ್ನು ಹೆಚ್ಚು ಸಮಯ ದುಡಿಸಬಹುದು, ಅವರಿಗೆ ಕಡಿಮೆ ಕೂಲಿ ಕೊಟ್ಟು ದುಡಿಸಬಹುದು. ಪುಕ್ಕಟೆ ಕೆಲಸಕ್ಕೂ ಅವರನ್ನು ಬಲವಂತ ಪಡಿಸಬಹುದು, ಅವರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳಬಹುದು, ಅಷ್ಟೇ ಸುಲಭವಾಗಿ ಅವರನ್ನು ಕೆಲಸದಿಂದ ವಜಾ ಮಾಡಬಹುದು ಮೊದಲಾದ ಕಾರಣಗಳಿಗಾಗಿ ಮಹಿಳಾ ಕೆಲಸಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ!

ಅಧಿಕ ಶ್ರಮಭಾರ:

ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು, ಗೊಬ್ಬರ ಹೊರುವುದು, ಗೊಬ್ಬರ ಹಾಕುವುದು, ಕೊಯ್ಯುವುದು, ಒಕ್ಕುವುದು, ತೂರುವುದು, ಕಾಳು ಒಣಗಿಸುವುದು, ಬಣವೆ ಕಟ್ಟುವುದು, ಕಬ್ಬು ಕಡಿಯುವುದು, ಹತ್ತಿ ಬಿಡಿಸುವುದು, ಮೆಣಸಿನಕಾಯಿ ಹರಿಯುವುದು, ಶೇಂಗಾ ಕೀಳುವುದು, ಅಡಿಕೆ ಸುಲಿಯುವುದು ಮೊದಲಾದ ಎಲ್ಲಾ ಕೆಲಸಗಳಲ್ಲಿ ಹೆಚ್ಚಿನ ಪಾಲನ್ನು ಮಹಿಳಾ ಕೃಷಿ ಕೂಲಿಕಾರರಿಂದಲೇ ಮಾಡಿಸಲಾಗುತ್ತದೆ.

ಹೊರಗೆ ಕೂಲಿ ಕೆಲಸಕ್ಕೆ ಹೋಗುವ ಕೂಲಿಕಾರ ಮಹಿಳೆಗೆ ಮನೆಯೊಳಗಿನ ಕೆಲಸಗಳಿಂದ ವಿನಾಯಿತಿ ಇರುವುದಿಲ್ಲ. ಹೀಗಾಗಿ ಕೂಲಿಕಾರ ಮಹಿಳೆಯ ಕೆಲಸದ ದಿನಚರಿ, ಬೆಳಿಗ್ಗೆ 4 ಅಥವಾ 5ರಿಂದಲೇ ಆರಂಭವಾಗುತ್ತದೆ. ದನಕರುಗಳ ಹೆಂಡಿ ಕಸ ತೆಗೆಯುವುದು, ಹಾಲು ಹೈನ ಮಾಡುವುದು, ನೀರು ತರುವುದು, ಬಟ್ಟೆ ಒಗೆಯುವುದು, ಉರುವಲು ಸಂಗ್ರಹಿಸಿ ತರುವುದು, ಅಡಿಗೆ ಮಾಡುವುದು, ದನಕರುಗಳಿಗೆ ಮೇವು ಹಾಕುವುದು ಅಲ್ಲದೆ, ಮಕ್ಕಳ, ಮುದುಕರ ಆರೈಕೆ ಮಾಡುವುದು ಮುಂತಾದ ಎಲ್ಲ ಕೆಲಸಗಳನ್ನು ಅವಳೇ ಮಾಡುತ್ತಿರುತ್ತಾಳೆ. ಈ ಕೆಲಸಗಳಿಗೆ ಯಾವುದೇ ದಾಖಲೆ ಇಲ್ಲ, ಯಾವುದೇ ಪುರಸ್ಕಾರವಿಲ್ಲ. ಹೀಗೆ ಕೃಷಿ ಕೂಲಿಕಾರ ಮಹಿಳೆ ಅಧಿಕ ಶ್ರಮ ಭಾರದ ಅಡಿಯಲ್ಲಿ ನರಳುತ್ತಿರುತ್ತಾಳೆ.

ಸಮಾನ ಕೆಲಸಕ್ಕಿಲ್ಲ ಸಮಾನ ಕೂಲಿ:

ಮಹಿಳೆಯರನ್ನು ಪುರುಷರಿಗಿಂತ ಕೀಳಾಗಿ ಕಾಣುವ ಪ್ರವೃತ್ತಿ ಇನ್ನೂ ಜೀವಂತವಾಗಿದೆ. ಮಹಿಳೆ ಪುರುಷನಿಗೆ ಸಮಾನಳಾಗಿ ಒಂದೇ ರೀತಿಯ ಕೆಲಸವನ್ನು ಒಂದೇ ಪ್ರಮಾಣದಲ್ಲಿ ಮಾಡಿದರೂ ಮಹಿಳಾ ಕೂಲಿಕಾರಳಿಗೆ ಪುರುಷರಿಗಿಂತ ಕಡಿಮೆ ಕೂಲಿ ನೀಡಿ ತಾರತಮ್ಯ ಮಾಡಲಾಗುತ್ತದೆ.

ಮಹಿಳಾ ಕೂಲಿಕಾರರನ್ನು ಬೆದರಿಸಿ ಹೆಚ್ಚು ಕೆಲಸಮಾಡಿಸಿಕೊಳ್ಳುವುದು, ಕೆಲವು ಕೆಲಸಗಳನ್ನು ಪುಕ್ಕಟೆಯಾಗಿ ಮಾಡುವಂತೆ ಒತ್ತಾಯಿಸುವುದು ಸಹ ಕಂಡು ಬರುತ್ತದೆ. ಸರ್ಕಾರ ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸುತ್ತಿದ್ದರೂ ಅದು ಜಾರಿಯಾಗುವುದಿಲ್ಲ, ಜಾರಿಗೊಳಿಸುವ ಇಲಾಖೆಯೂ ಸಮರ್ಪಕವಾಗಿ ಕೆಲಸ ನಿರ್ವಹಿಸುವುದಿಲ್ಲ. ಸಾಮೂಹಿಕ ಚೌಕಾಸಿಯ ಕೊರತೆಯಿಂದಾಗಿ ಕೂಲಿಕಾರ 'ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬುದು ಕೇವಲ ಮರೀಚಿಕೆಯಾಗಿ ಉಳಿದಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶಗಳಿಗೂ ಬೆಲೆ ಇಲ್ಲದಂತಾಗಿದೆ. ಅವಿದ್ಯಾವಂತ ಮಹಿಳೆಯರಿಗೆ ಕನಿಷ್ಟ ವೇತನದ ಮಾಹಿತಿ ಸಹ ಇರುವುದಿಲ್ಲ.

ಸರ್ಕಾರದಿಂದ ದುಡಿಯುವ ಮಹಿಳೆಯರ ಶೋಷಣೆ:

ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ದುಡಿಯುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ಮಹಿಳಾ ನೌಕರರಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡದೆ ಸರ್ಕಾರ ಶೋಷಣೆ ಮಾಡುತ್ತಿರುತ್ತದೆ. ಗುತ್ತಿಗೆದಾರರು ನೌಕರರ ಸಂಬಳದಿಂದ ಆಕ್ರಮ ಕಡಿತ ಮಾಡಿ ಗೋಳಾಡಿಸುತ್ತಿರುತ್ತಾರೆ. ಅಂಗನವಾಡಿ, ಅಕ್ಷರ ದಾಸೋಹ, ಅಶಾ ಮೊದಲಾದ ಸ್ಕೀಮುಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ ಸೇರಿಸದೆ ಶೋಷಣೆ ಮಾಡುತ್ತಾರೆ. ಇವರೆಲ್ಲರೂ ಬಹುತೇಕ ಕೂಲಿಕಾರ ಕುಟುಂಬಗಳಿಂದ ಬಂದವರು ಇರುತ್ತಾರೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕೂಲಿಕಾರರಿಗೆ ಕಾನೂನು ಬದ್ಧ ಕನಿಷ್ಟ ವೇತನವೂ ಸಿಗುವುದಿಲ್ಲ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಭ್ರಷ್ಟಾಚಾರಕ್ಕೆ ಬಲಿಯಾಗಿರುವ ಈ ಯೋಜನೆಯನ್ನು ಮಹಿಳಾ ಕೂಲಿಕಾರರೂ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದರೂ ಸರ್ಕಾರದ ನಿರ್ಲಕ್ಷದಿಂದ ಯೋಜನೆ ಕೂಲಿಕಾರರ ವಿಶ್ವಾಸ ಕಳೆದುಕೊಳ್ಳುತ್ತಿದೆ. ನಿಗದಿತ ಗುತ್ತಿಗೆ ಕೆಲಸವನ್ನು ಮಾಡಿ ಮುಗಿಸಿದ ನಂತರ ಮನೆಗೆ ಹಿಂತಿರುಗಲು ಇದ್ದ ಅವಕಾಶವನ್ನು ಹಿಂಪಡೆಯಲಾಗಿದೆ. ಬೆಲೆ ಏರಿಕೆಗೆ ಅನುಗುಣವಾಗಿ ವೇತನ ಪರಿಷ್ಕರಣೆ ಆಗುತ್ತಿಲ್ಲ. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳಾಗಲಿ ತುಟ್ಟಿಭತ್ಯೆ, ವಾರದ ರಜೆ, ಹೆರಿಗೆ ಭತ್ಯೆ ನೀಡಲಾಗುತ್ತಿಲ್ಲ. ಸರ್ಕಾರದ ಅನುದಾನ ವರ್ಷದಿಂದ ವರ್ಷಕ್ಕೆ ಹೆಚ್ಚಿಸುವ ಬದಲು ಕಡಿತ ಮಾಡಲಾಗುತ್ತದೆ. ನಗರ ಪ್ರದೇಶಗಳಿಗೆ ಅನ್ವಯಿಸುವ ಯೋಜನೆಯನ್ನು ಜಾರಿಗೆ ತರಲಾಗುತ್ತಿಲ್ಲ.

ಕೆಲಸದ ಸ್ಥಳದಲ್ಲಿ ಕಿರುಕುಳ:

ಕೃಷಿ ಕೂಲಿಕಾರ ಮಹಿಳೆಯರ ಅಸಹಾಯಕತೆಯನ್ನು ವ್ಯವಸ್ಥಿತವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತದೆ. ಕಾಫಿ ತೋಟಗಳಲ್ಲಿ ಕೆಲಸಕ್ಕೆಂದು ಹೋಗುವ ಕೃಷಿ ಕೂಲಿಕಾರ ಯುವತಿಯರು ಮತ್ತು ಮಹಿಳೆಯರು ತೋಟದ ಮಾಲೀಕರಿಂದ, ಅವನ ಸಿಬ್ಬಂದಿಯವರಿಂದ ಲೈಂಗಿಕ ಕಿರುಕುಳ ಮತ್ತು ಅತ್ಯಾಚಾರಗಳಿಗೆ ಒಳಗಾಗುತ್ತಿರುತ್ತಾರೆ. ದೊಡ್ಡ ಶ್ರೀಮಂತ ರೈತರ ಹೊಲಗದ್ದೆಗಳಲ್ಲಿ ಕೆಲಸಕ್ಕೆ ಹೋಗುವ ಮಹಿಳೆಯರ ಮೇಲೆ ಇದೇ ರೀತಿ ಅತ್ಯಾಚಾರಗಳು ನಡೆಯುತ್ತವೆ. ಪ್ರತಿಭಟಿಸಿದರೆ ಕೊಲೆಗಳೂ ಸಹ ಆಗುತ್ತವೆ.



ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವ ಮಹಿಳಾ ಕೃಷಿ ಕೂಲಿಕಾರರ ಪಾಡು ಶೋಚನೀಯವಾಗಿದೆ. ನಗರಗಳಿಗೆ ವಲಸೆ ಬರುವ ಕೂಲಿಕಾರರು ಸಹಜವಾಗಿ ಕೊಳಚೆ ಪ್ರದೇಶಗಳಲ್ಲಿ ಯಾವುದೇ ಭದ್ರತೆ ಇಲ್ಲದ ಗುಡಿಸಲುಗಳಲ್ಲಿ ವಾಸಮಾಡುತ್ತಿರುತ್ತಾರೆ. ಸ್ನಾನದ ಮನೆಯಾಗಲಿ, ಶೌಚಾಲಯದ ಸೌಲಭ್ಯವಾಗಲಿ ಇರುವುದಿಲ್ಲ. ಹೀಗಾಗಿ ಅವರು ಬಹು ಸುಲಭವಾಗಿ ದೈಹಿಕ ಕಿರುಕುಳಕ್ಕೆ ಒಳಗಾಗುತ್ತಾರೆ. ತಮಗೆ ಕೆಲಸ ನೀಡಿರುವ ಯಜಮಾನ ಅಥವ ಗುತ್ತಿಗೆದಾರನಿಂದ ಮಾತ್ರವಲ್ಲ ತಮ್ಮೊಂದಿಗೆ ಕೆಲಸ ಮಾಡುತ್ತಿರುವ ಪುರುಷ ಕೆಲಸಗಾರರಿಂದಲೂ ಕೂಲಿಕಾರ ಮಹಿಳೆಯರು ಕಿರುಕುಳವನ್ನು ಅನುಭವಿಸುತ್ತಿರುತ್ತಾರೆ.

ಆರೋಗ್ಯದ ಮೇಲೆ ದುಷ್ಪರಿಣಾಮಗಳು:

ಮಹಿಳಾ ಕೃಷಿ ಕೂಲಿಕಾರರು ಮಾಡುತ್ತಿರುವ ಕೆಲಸಗಳು ಅವರ ಆರೋಗ್ಯದ ಮೇಲೆ ಅನೇಕ ರೀತಿಯ ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿರುತ್ತವೆ. ಉದಾಹರಣೆಗೆ ನಾಟಿ ಮಾಡುವ ಹಾಗೂ ಭತ್ತದ ಕಳೆ ಕೀಳುವ ಸಂದರ್ಭದಲ್ಲಿ ಅವರು ಇಡೀ ದಿನ ಕೆಸರಿನಲ್ಲಿ ಕೆಲಸ ಮಾಡಬೇಕಾಗುವುದರಿಂದ ಅವರ ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮಗಳು ಆಗುತ್ತಿರುತ್ತವೆ. ಅದೇ ರೀತಿಯಲ್ಲಿ ವಿಷಕಾರಿ ಕ್ರಿಮಿನಾಶಕಗಳನ್ನು ಸಿಂಪಡಿಸುವಾಗ, ಅಥವ ಕ್ರಿಮಿನಾಶಕ ಸಿಂಪಡಿಸಿದ ಪೈರನ್ನು ಕೊಯ್ಯುವಾಗ ಅದರ ಪರಿಣಾಮ ಅವರ ದೇಹದ ಮೇಲೆ ಆಗುತ್ತಿರುತ್ತದೆ. ಇಡೀ ದಿನ ಬಿಸಿಲಲ್ಲಿ ಕೆಲಸ ಮಾಡುವುದು ಸಹ ಅನಾರೋಗ್ಯಕ್ಕೆ ಕಾರಣವಾಗುತ್ತಿರುತ್ತದೆ. ಅವರು ಗರ್ಭಿಣಿಯರಾಗಿದ್ದರೆ ಅಕಾಲಿಕ ಹೆರಿಗೆ ಅಥವ ಮೃತ ಶಿಶು ಜನನದಂತಹ ಸಮಸ್ಯೆಗಳು ಎದುರಾಗಬಹುದು.

ಹೆಣ್ಣು ಮಕ್ಕಳ ನಿರ್ಲಕ್ಷ್ಯ:

ಹೆಣ್ಣು ಮಕ್ಕಳನ್ನು ನಿರ್ಲಕ್ಷಿಸುವ ಪ್ರವೃತ್ತಿ ನಮ್ಮ ಕೂಲಿಕಾರ ಕುಟುಂಬಗಳಲ್ಲಿಯೂ ಉಳಿದುಕೊಂಡು ಬಂದಿದೆ. ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಗ್ರಾಮೀಣ ಪ್ರದೇಶಗಳಲ್ಲಿಯೂ ವರದಿಯಾಗುತ್ತಿವೆ. ಹೆಣ್ಣು ಮಕ್ಕಳ ಮಾರಾಟ, ಮನೆಗಳಲ್ಲಿ ಹೆಣ್ಣು ಮಕ್ಕಳ ವಿಷಯದಲ್ಲಿ, ಅವರಿಗೆ ಆಹಾರ, ಬಟ್ಟೆ ಬರೆ, ಶಿಕ್ಷಣ ಒದಗಿಸುವ ವಿಷಯದಲ್ಲಿ ತಾರತಮ್ಯ ಮಾಡುವುದು ಇನ್ನೂ ಜೀವಂತವಾಗಿದೆ.

ವರದಕ್ಷಿಣೆ ಪಿಡುಗು:

ಎಲ್ಲ ಜಾತಿ, ಜನಾಂಗಗಳ ಕೂಲಿಕಾರ ಕುಟುಂಬಗಳಲ್ಲಿ ಇಂದು ವರದಕ್ಷಿಣೆಯ ಪಿಡುಗು ಪಸರಿಸಿದೆ. ವರದಕ್ಷಿಣೆಗಾಗಿ ಕೊಲೆಗಳು, ಆತ್ಮಹತ್ಯೆಗಳು ಇಂದು ಹೆಚ್ಚೆಚ್ಚಾಗಿ ವರದಿಯಾಗುತ್ತಿವೆ. ವರದಕ್ಷಿಣೆಗಾಗಿ ಹಣ ಸಂಗ್ರಹಿಸಲು ಕೂಲಿಕಾರರ ಕುಟುಂಬಗಳ ಯುವತಿಯರು ವಲಸೆ ಹೋಗಿ ಹಣ ಸಂಪಾದನೆ ಮಾಡಬೇಕಾದ ದುಸ್ಥಿತಿ ವ್ಯಾಪಕವಾಗಿದೆ.

ಕೌಟುಂಬಿಕ ಹಿಂಸೆ:

ಇತರ ಮಹಿಳೆಯರಂತೆ, ಕೃಷಿ ಕೂಲಿಕಾರ ಮಹಿಳೆಯೂ ಸಹ ಕೌಟುಂಬಿಕ ಹಿಂಸೆಗೆ ಗುರಿಯಾಗುತ್ತಿರುತ್ತಾಳೆ. ಕುಡುಕ ಗಂಡ ದುಡಿದು ಸಂಪಾದನೆ ಮಾಡಿದೆಲ್ಲವನ್ನು ಕುಡಿದು ಹಾಳು ಮಾಡುವುದು, ಮನೆಗೆ ಬರಿಗೈಯಲ್ಲಿ ಬಂದು ಹೆಂಡತಿ ಕೂಲಿ ಕೆಲಸ ಮಾಡಿ ಸಂಪಾದಿಸಿದ ಹಣಕ್ಕಾಗಿ ಜಗಳ ಮಾಡುವುದು, ಹೆಂಡತಿಯನ್ನು ಬೈಯ್ಯುವುದು, ಹೊಡೆಯುವುದು, ಮನೆಯಲ್ಲಿ ಕುಟುಂಬದ ಸದಸ್ಯರಿಂದ ಸಹ ಕಿರುಕುಳ, ಹಿಂಸೆಯನ್ನು ಮಹಿಳೆ ಅನುಭವಿಸುತ್ತಿರುತ್ತಾಳೆ.

ಅಪೌಷ್ಠಿಕತೆ:

ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಇಂದು ಬಡ ಕೂಲಿಕಾರ ಮಹಿಳೆಯರು ರಕ್ತ ಹೀನತೆ, ಅಪೌಷ್ಠಿಕತೆಯಂತಹ ದೈಹಿಕ ಸಮಸ್ಯೆಗಳಿಂದ ನರಳುತ್ತಿರುತ್ತಾರೆ. ಚಿಕ್ಕಂದಿನಿಂದಲೇ ತಾರತಮ್ಯಕ್ಕೆ ಒಳಗಾಗುತ್ತಾ ಬೆಳೆಯುವ ಹೆಣ್ಣು ಮಗು ಮುಂದೆ ಮದುವೆಯಾಗಿ ಗರ್ಭ ಧರಿಸುವ

ಪುಟ 9 ಕ್ಕೆ

ಬೂದಿಯಲ್ಲಿ ಬೂದಿಯಾದ ಬಡವರು......

ಪುಟ 8 ರಿಂದ

ಆಸರೆಯಾಗಬೇಕಿತ್ತು. ಆದರೆ ಈ ಯೋಜನೆಯ ಅನುದಾನವನ್ನು ಕೇಂದ್ರ ಸರಕಾರ ಕಡಿತಗೊಳಿಸಿದ ಪರಿಣಾಮ ಸಮರ್ಪಕ ಕೆಲಸ ಸಿಗದಂತಾಗಿದೆ. ಸಿಗುವ ಅಲ್ಪಸ್ವಲ್ಪ ಕೆಲಸಗಳಲ್ಲಿ ಯಂತ್ರಗಳ ಬಳಕೆಯಿಂದಾಗಿ ಕೂಲಿಕಾರರಿಗೆ ಕೆಲಸ ಕನಸಾಗಿದೆ. ಈ ದುಸ್ಥಿತಿಗೆ ಬಡ ಕುಟುಂಬಗಳು ದಿನದ ತುತ್ತಿಗೆ ತತ್ತರಿಸಿವೆ.

ಯಾವುದೇ ದಾರಿ ಕಾಣದೆ ಹಸಿದ ತುತ್ತಿನ ಚೀಲಕ್ಕೆ ಅನ್ನ ಕಾಣಿಸಲು ಜಿಂದಾಲ್ ಬೂದಿಯಲ್ಲಿ ದಕ್ಕುವ ತುಂಡು ಕಬ್ಬಿಣಕ್ಕೆ ಕೈಚಾಚಿವೆ.

ಬೂದಿ ಮಾಪಿಯಾ:

ಜಿಂದಾಲ್ ಕಾರ್ಖಾನೆ ಹೊರಚೆಲ್ಲಿದ ಬೂದಿಯ ಕಿಟ್ಟದಲ್ಲೂ ಕೋಟಿ ಲಾಭದ ಕೋಟೆ ಕಟ್ಟಲು ಬೂದಿ ಮಾಫಿಯಾ ತಲೆ ಎತ್ತಿದೆ. ಕುಡಿತಿನಿಯಲ್ಲಿ ಈ ಮಾಪಿಯಾ ಬಲಯುತವಾಗಿದೆ. ಇದರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ಹಿಂಬಾಲಕರಿದ್ದಾರೆ. ಇವರಿಗೆ ಎರಡೂ ಪಕ್ಷದ ಬೆಂಬಲವೂ ಇದೆ. ಇದರಲ್ಲಿ 6 ಜನ ಪ್ರಮುಖರಾಗಿದ್ದಾರೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ಕಬ್ಬಿಣದ ಬೆಲೆ ಏರಿಕೆಯಾದ ಕಾರಣ ಈ ಮಾಫಿಯಾದ ಚಟುವಟಿಕೆ ಎಗ್ಗಿಲ್ಲದೆ ಕಾನೂನು ಬಾಹಿರವಾಗಿ ನಡೆದಿದೆ.

ಕೆಲಸವಿಲ್ಲದೆ ಚಿಂತಾಜನಕ ಸ್ಥಿತಿಯಲ್ಲಿರುವ ಕೂಲಿಕಾರ ಕುಟುಂಬಗಳು ಇವರ ಹಿತಾಶಕ್ತಿಗೆ ಬಲಿಯಾಗಿವೆ. ಬೂದಿಯಲ್ಲಿ ಕಬ್ಬಿಣದ ತುಂಡುಗಳನ್ನು ಆಯ್ದು ತರುವಂತೆ ಬಡ ಕೂಲಿಕಾರರಿಗೆ ತಿಳಿಸಿ, ಆಯ್ದು ತಂದ ಕಬ್ಬಿಣವನ್ನು ಕೇಜಿ.ಗೆ 15 ರೂ. ನೀಡಲಾಗುತ್ತದೆ. ಹೀಗೆ ಟನ್ ಗಟ್ಟಲೆ ಕಬ್ಬಿಣ ಸಂಗ್ರಹಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾರುತ್ತಾರೆ.

ಎರಡು ಗ್ರಾಮದ ಕೃಷಿಕೂಲಿಕಾರರ ಸಾವಿಗೆ ಇವರೂ ಕಾರಣರಾಗಿದ್ದಾರೆ.

ಕಣ್ಣುಮುಚ್ಚಿದ ಸರಕಾರ:

ಘಟನಾ ಸ್ಥಳಕ್ಕೆ ಎ.ಸಿ, ಎಮ್.ಎಲ್.ಎ., ಮತ್ತು ಪೊಲೀಸ್ ಅಧಿಕಾರಿಗಳು ಬೇಟಿ ನೀಡಿದ್ದಾರೆ. ಆದರೆ ಮೃತ ಕುಟುಂಬಗಳ ಮನೆಗೆ ಭೇಟಿ ನೀಡಿಲ್ಲ. ಭೇಟಿ ನೀಡಿದ ನಂತರ ಕುಡುತಿನಿ ಪೊಲೀಸ್ ಠಾಣೆ ದೂರು ದಾಖಲಿಸಿಕೊಂಡಿದೆ. ದೂರಿನಲ್ಲಿ ಜಿಂದಾಲ್ ಕಾರ್ಖಾನೆ ಡಸ್ಕ್ ಯಾರ್ಡ್ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಧೊರಣೆ ಅನುಸರಿಸಿದೆ ಎಂಬ ಕಾರಣಕ್ಕೆ ಜಿಂದಾಲ್ ಆಡಳಿತ ಮಂಡಳಿ ಮೇಲೆ ಹಾಗೂ ಬೂದಿ ಮಾಫಿಯಾದಲ್ಲಿ ತೊಡಗಿದ 6 ಜನ ಈ ಅವಘಡಕ್ಕೆ ಕಾರಣ ಎಂಬ ಕಾರಣಕ್ಕೆ 6 ಜನರ ಮೇಲೆ ಕೇಸ್ ಮಾಡಲಾಗಿದೆ. ಅಲ್ಲದೆ ಮೃತ ಸಂಸ್ಕಾರಕ್ಕೆಂದು ಒಂದು ಕುಟುಂಬಕ್ಕೆ 15, ಮತ್ತೊಂದು ಕುಟುಂಬಕ್ಕೆ 20 ಸಾವಿರ ರೂ. ಗಳನ್ನು ಮಾಫಿಯಾದವರಿಂದ ಕೊಡಿಸಿ ಕೈ ತೊಳೆದುಕೊಂಡಿದ್ದಾರೆ. ಇದನ್ನು ಬಿಟ್ಟರೆ ಮೃತರ ಕಟುಂಬದ ಜೀವನೋಪಾಯಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಸರಕಾರ ಕಣ್ಣುಮುಚ್ಚಿಕೊಂಡಿದೆ.

ಕುಟುಂಬಗಳ ದಾರುಣ ಸ್ಥಿತಿ:

ಬೂದಿಯಲ್ಲಿ ಮೃತಪಟ್ಟ ರಾಜಾಪುರದ ಹೊನ್ನೂರ ಸ್ವಾಮಿ ಕುಟುಂಬದ ಸ್ಥಿತಿ ನೋಡಿದರೆ ಕಲ್ಲೆದೆಯೂ ಕರಗುತ್ತದೆ.

ಈ ಕುಟುಂಬ ಗಾಳಿಗೆ ಎಗರುವ ಗುಡಿಸಲಲ್ಲಿ ವಾಸವಾಗಿದೆ. ಮೃತರ ತಂದೆ ಬೆನ್ನೆಲುಬು ಮುರಿದಿರುವ ಕಾರಣ ದುಡಿಯುವ ಸ್ಥಿತಿಯಲ್ಲಿಲ್ಲ. ತಾಯಿ ಕೂಲಿ. ಇರುವ ಒಬ್ಬ ತಮ್ಮ ಹಾಗೂ ತಂಗಿ ಚಿಕ್ಕವರಿದ್ದಾರೆ. ಇಡೀ ಕುಟುಂಬಕ್ಕೆ ಆಧಾರವಾಗಿದ್ದ ಹೊನ್ನೂರ ಸ್ವಾಮಿಯನ್ನು ಬೂದಿ ನುಂಗಿ ಹಾಕಿದೆ. ಮನೆಯ ಆಧಾರ ಕಂಬವನ್ನೇ ಕಳೆದುಕೊಂಡ ಈ ಕುಟುಂಬ ಬೀದಿಗೆ ಬಿದ್ದಿದೆ.

"ಮನಿಗೆ ಆದಾರದಂಗಿದ್ದ ತೊಲೆನೇ ಮುರುದು ಬಿದ್ದೈತಪ್ಪೋ. ನಮ್ಮನ್ನ ಕಾಪಾಡೋರು ಯಾರದಾರ. ಎಲ್ಲರ ಹೊಟ್ಟಿಗೆ ಕೂಳು ಹೆಂಗಾ. ಅಪ್ಪನ ರೋಗಕ್ಕ ಅಸುದಿಗೆ ಆಕಾತೇಳು ಅಂತೇಳಿ ಬೂದ್ಯಾಗ ಕಬ್ಣ ಆರ್ಸಾಕ್ ಓಗಿ ಬೂದಿ ಪಾಲಾಗಿ ಬಿಟ್ಟ ಮಗ" ಎಂದು ಮೃತರ ತಾಯಿ ಗೋಳಿಡುತ್ತಾಳೆ.

ಇನ್ನು ತುಮಟಿ ಗ್ರಾಮದ ಮೃತರ ಕುಟುಂಬದ ಸ್ಥಿತಿ ಇನ್ನೂ ಚಿಂತಾಜನಕ. ತಗಡಿನ ಷೆಡ್ ನಂತಿರುವ ಮನೆಯಲ್ಲಿ ಇವರ ವಾಸ. ಈ ಕುಟುಂಬಕ್ಕೆ ಮೃತ ರಾಮಾಂಜನಿಯೆ ಆಧಾರ. ಮೂರು ಗಂಡು ಎರೆಡು ಹೆಣ್ಣು ಮಕ್ಕಳು. ಎಲ್ಲರೂ ಶಾಲೆಗೆ ಹೋಗುತ್ತಾರೆ. ಎರಡು ಎಕರೆ ಜಮೀನಿರುವ ಬಡ ರೈತ. ಕಳೆದ ವರ್ಷ ಖಾಸಗಿಯವರಲ್ಲಿ ಸಾಲ ಮಾಡಿ ತೋಟಗಾರಿಕೆಗೆ ಕೈ ಚಾಚಿದ್ದ. ತೋಟದ ಬೆಳೆ ರೋಗಕ್ಕೆ ತುತ್ತಾಗಿ ಈತನಿಗೆ ದಕ್ಕಿದ್ದು ಸಾಲದ ಹೊರೆ ಮಾತ್ರ.

ಕುಟುಂಬ ಹಾಗೂ ಸಾಲದ ಹೊರೆ ತಡೆಯಲಾಗದೆ ಬೂದಿಯಲ್ಲಿ ಕಬ್ಬಿಣ ಆಯಲು ಮುಂದಾದಾಗ ಬೂದಿಯೇ ಇವರನ್ನು ನುಂಗಿತು. ಮನೆಗೆ ಆಧಾರವಾಗಿದ್ದವನೆ ಇಲ್ಲದ ಕಾರಣ ಈ ಕುಟುಂಬ ಅಕ್ಷರ ಸಹ ಬೀದಿ ಪಾಲಾಗಿದೆ. ಮಕ್ಕಳ ಶಿಕ್ಷಣ ಮೊಟಕುಗೊಂಡಿದೆ.

ಈ ಘಟನೆಯನ್ನು ಸಂಪೂರ್ಣವಾಗಿ ಶೋಧ ನಡೆಸಲು ಬಳ್ಳಾರಿ ಜಿಲ್ಲಾ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸತ್ಯ ಶೋಧನಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಏಪ್ರಿಲ್ 9, 2022 ರಂದು ಎರಡೂ ಗ್ರಾಮಗಳಿಗೆ ಭೇಟಿ ನೀಡಿತು. ಮೃತರ ಕುಟುಂಬಗಳ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದೆ. ಅಲ್ಲದೆ ಈ ಬಗ್ಗೆ ಸರಕಾರದ ಹಾಗೂ ಜಿಲ್ಲಾಡಳಿತದ ಗಮನ ಸೆಳೆಯಲು ಮೃತರ ಕುಟುಂಬಗಳ ಜೊತೆ ನಿಂತು ಹೋರಾಟಕ್ಕೆ ಮುಂದಾಗಿದೆ.

ಸಮಿತಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಜೆ. ಸತ್ಯಬಾಬು, ಜೀವವಿಮಾ ನೌಕರರ ಮುಖಂಡರಾದ ಜೆ.ಎಂ. ಚೆನ್ನಬಸವಯ್ಯ, ಡಿವೈಎಫ್ಐ ಮುಖಂಡ ಎ. ಸ್ವಾಮಿ, ಸಾಹಿತಿ ಪಿ.ಆರ್. ವೆಂಕಟೇಶ್, ಸಿಐಟಿಯು ಮುಖಂಡರಾದ ಪಾಂಡುರಂಗ, ಕನಕಪ್ಪ, ದೇವದಾಸಿ ಸಂಘದ ಮುಖಂಡ ಧನುಂಜಯ ಮತ್ತಿರರು ಇದ್ದರು.

ಈ ಹಿನ್ನೆಲೆಯಲ್ಲಿ ದಿನಾಂಕ 23.05.2022 ರಂದು ಮೃತರ ಮನೆಯಿಂದ ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿಯವರೆಗೆ ಪಾದಯಾತ್ರೆ ಆರಂಭವಾಗಿದೆ.

ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗಿದೆ.

ಹೋರಾಟದ ದಾರಿ

ಬೇಡಿಕೆಗಳು

1. ರಾಜಾಪುರ ನಿವಾಸಿಯಾದ ಹೊನ್ನೂರ್ ಸ್ವಾಮಿ (ಪರಿಶಿಷ್ಟ ಪಂಗಡ) ತುಮಿಟಿ ನಿವಾಸಿಯಾದ ರಾಮಾಂಜಿನಿ (ಪರಿಶಿಷ್ಟ ಜಾತಿ) ಎರಡು ಕುಟುಂಬಗಳಿಗೆ ತಲಾ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಮತ್ತು ಜಿಂದಾಲ್ ಆಡಳಿತ ಮಂಡಳಿ ಸೇರಿ ಪರಿಹಾರ ನೀಡಬೇಕು.
2. ಎರಡು ಕುಟುಂಬಗಳಿಗೆ ಎರಡು ಹೆಕ್ಟೇರ್ (5 ಎಕರೆ) ಕೃಷಿ ಯೋಗ್ಯ ಭೂಮಿ ನೀಡಬೇಕು.
3. ಕುಟುಂಬದಲ್ಲಿ ಇರುವ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಸರ್ಕಾರ ನೀಡಬೇಕು.
4. ಜಿಂದಾಲ್ ಸಂಸ್ಥೆಯಲ್ಲಿ ಆ ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ನೀಡಬೇಕು.
5. ಎರಡು ಕುಟುಂಬಗಳಿಗೆ ಸರ್ಕಾರ ಯೋಜನೆ ಯಲ್ಲಿ ಮನೆ ನಿರ್ಮಿಸಬೇಕು.
6. ಜಿಂದಾಲ್ ಕಾರ್ಖಾನೆ ಅವರು ವೇಸ್ಟ್ (ಬೂದಿ) ಡಂಪಿಂಗ್ ಯಾರ್ಡ್ ನಲ್ಲಿಯೇ ಪ್ರವೇಶ ಮಾಡದ ಹಾಗೆ ಕಟ್ಟು ನಿಟ್ಟಿನ ಸೆಕ್ಯೂರಿಟಿ ಹಾಕಬೇಕು. ಮುಂದಿನ ದಿನದಲ್ಲಿ ಈ ರೀತಿ ಆಗದ ಹಾಗೆ ಕ್ರಮ ವಹಿಸಿಬೇಕು.

ಪಾದಯಾತ್ರೆ ಯಶಸ್ವಿ ಗಾಗಿ 22–05–2022 ಆದಿತ್ಯವಾರ ಸಾಯಂಕಾಲ 4 ಗಂಟೆಗೆ ರಾಜಾಪುರ ದಲ್ಲಿ ಬಹಿರಂಗ ಸಭೆ ನಡೆದಿದೆ. 23 ರಂದು ತುಮಟಿಯಿಂದ ಬಳ್ಳಾರಿಯತ್ತ ಪಾದಯಾತ್ರೆ ಆರಂಭಗೊಂಡಿದೆ.

ಮಹಿಳಾ ಕೃಷಿ ಕೂಲಿಕಾರರ ಬದುಕು–ಬವಣೆಗಳು.....

ಪುಟ 9 ರಿಂದ

ಕಾಲಘಟ್ಟದಲ್ಲಿಯೂ, ಚಿಕ್ಕಮಗುವಿನ ತಾಯಿ ಆಗಿರುವಾಗಲೂ ಪೌಷ್ಟಿಕ ಆಹಾರದ ಕೊರತೆಯಿಂದ ಬಾಧಿತಳಾಗಿರುತ್ತಾರೆ.

ಶೌಚಾಲಯಗಳ ಕೊರತೆ:

ಶೌಚಕ್ಕಾಗಿ ಕತ್ತಲಾಗುವುದನ್ನೇ ಕಾಯುವ ಪರಿಸ್ಥಿತಿ, ಮುಳ್ಳುಕಂಟಿ–ಪೊದೆಗಳನ್ನು ಹುಡುಕುವ ಆತಂಕ, ರಸ್ತೆ ಬದಿಗಳಲ್ಲಿ ಕುಳಿತುಕೊಂಡವರು ವಾಹನಗಳ ಬೆಳಕು ಬಿದ್ದಾಗ ಎದ್ದು ನಿಲ್ಲಬೇಕಾದ ಅವಮಾನ ಇವೆಲ್ಲವನ್ನು ನಮ್ಮ ಗ್ರಾಮೀಣ ಮಹಿಳೆಯರು ಇಂದಿಗೂ ಅನುಭವಿಸುತ್ತಿದ್ದಾರೆ. ಬಯಲು ಶೌಚ ಮುಕ್ತಗೊಳಿಸುವ ಯೋಜನೆಗಳೇನೂ ಪ್ರಚಾರ ಪಡೆಯುತ್ತಿವೆ. ಆದರೆ ಶೌಚಾಲಯ ಕಟ್ಟಿಕೊಳ್ಳಲು ಸ್ವಂತ ನಿವೇಶನವೇ ಇಲ್ಲದ ಕುಟುಂಬಗಳು ಏನು ಮಾಡಬೇಕು? ನಗರ ಪ್ರದೇಶಗಳಲ್ಲಿ ಇರುವಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಸುಸಜ್ಜಿತವಾದ ಸಾರ್ವಜನಿಕ ಶೌಚಾಲಯಗಳನ್ನು ಏಕೆ ನಿರ್ಮಿಸಿ ನಿರ್ವಹಿಸಬಾರದು?

ಮಹಿಳಾ ನೇತೃತ್ವದ ಕುಟುಂಬಗಳು:

ಬೇರೆ ಬೇರೆ ಕಾರಣಗಳಿಗಾಗಿ ಮಹಿಳೆಯರೇ ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ಹೊರಬೇಕಾಗುವ ಸಂದರ್ಭಗಳು ಇರುತ್ತವೆ. ಗಂಡ ನಿಧನವಾಗಿ ಮಹಿಳೆ ವಿಧವೆಯಾದಾಗ, ಅಥವ ಗಂಡನಿಂದ ತ್ಯಜಿಸಲ್ಪಟ್ಟು ಒಂಟಿಯಾದಾಗ ಮಕ್ಕಳನ್ನು ಬೆಳೆಸುವ, ಮನೆಯನ್ನು ನಿರ್ವಹಿಸುವ ಜವಾಬ್ದಾರಿ ಮಹಿಳೆಯ ಮೇಲೆ ಬೀಳುತ್ತದೆ. ಪುರುಷರು ಕೆಲಸಕ್ಕಾಗಿ ವಲಸೆ ಹೋದಾಗ ಮನೆ ನಡೆಸುವ ಜವಾಬ್ದಾರಿಯನ್ನು ಮಹಿಳೆಯೇ ವಹಿಸಿಕೊಳ್ಳಬೇಕಾಗುತ್ತದೆ. ನಮ್ಮ ಸಮಾಜ, ನಮ್ಮ ಸರ್ಕಾರ ಇಂತಹ ಮಹಿಳೆಯರ ನೆರವಿಗೆ ಬರುತ್ತಿರುವುದಿಲ್ಲ.

ಮನೆ ಮತ್ತು ಮನೆ ಬಾಡಿಗೆ ಪ್ರಶ್ನೆ:

ಪುರುಷರಿಗಿಂತ ಹೆಚ್ಚಾಗಿ ಮಹಿಳೆ ಒಂದು ಸ್ವಂತ ಮನೆಗಾಗಿ ಹಾತೊರೆಯುತ್ತಾಳೆ. ಮಕ್ಕಳಿಗೆ ಜನ್ಮ ನೀಡಲು, ಅವರ ಪಾಲನೆ ಪೋಷಣೆ ಮಾಡಲು ತಾಯಿಗೆ ಮನೆ ಬಹಳ ಮುಖ್ಯವಾಗುತ್ತದೆ. ಮನೆ ನಿವೇಶನದ ಪ್ರಶ್ನೆ, ದುಬಾರಿ ಮನೆ ಬಾಡಿಗೆಯ ಪ್ರಶ್ನೆ ಇಂದು ತುಂಬಾ ಮಹತ್ವವನ್ನು ಪಡೆಯುತ್ತಿದೆ. ಮನೆ ನಿವೇಶನಕ್ಕಾಗಿ ಒತ್ತಾಯಿಸಿ ನಡೆಯುವ ಹೋರಾಟಗಳಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದನ್ನು ನೋಡಬಹುದು.

ದೇವದಾಸಿ ಮಹಿಳೆಯರು:

ಮಹಿಳಾ ಕೃಷಿ ಕೂಲಿಕಾರರಲ್ಲಿ ದಲಿತ ಮಹಿಳೆಯರೇ ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಜಾತಿ ಅಸ್ಪೃಶ್ಯತೆ, ಜಾತಿ ದಮನ, ಜಾತಿ ತಾರತಮ್ಯದ ಅವಮಾನಕ್ಕೆ ಅವರು ಒಳಗಾಗುತ್ತಿರುತ್ತಾರೆ.

ದಲಿತ ಸಮುದಾಯದಲ್ಲಿ ದೇವದಾಸಿ ಪದ್ಧತಿ ಒಂದು ಅನಿಷ್ಠ ಪದ್ಧತಿಯಾಗಿ ಉಳಿದುಕೊಂಡಿದೆ. ಮೂಢನಂಬಿಕೆಗಳಲ್ಲಿ ಮುಳುಗಿರುವ ದಲಿತ ಸಮುದಾಯದಲ್ಲಿ ಕೆಲವರು ಈಗಲೂ ಹೆಣ್ಣು ಮಕ್ಕಳನ್ನು ಬಲವಂತವಾಗಿ ಈ ಪದ್ಧತಿಗೆ ತಳ್ಳುತ್ತಿರುತ್ತಾರೆ. ಗ್ರಾಮೀಣ ಶ್ರೀಮಂತರ ಒತ್ತಡವೂ ಇದರ ಹಿಂದೆ ಇರುತ್ತದೆ. ಇದರ ವಿರುದ್ಧ ವ್ಯಾಪಕ ಜನ ಜಾಗೃತಿ ಅಗತ್ಯವಿದೆ. ಈ ಪದ್ಧತಿಯಿಂದ ಹೊರಬರಲು ಅವರನ್ನು ಪ್ರೇರೇಪಿಸಬೇಕಾಗಿದೆ ಹಾಗೂ ಸರ್ಕಾರ ಅವರಿಗೆ ಅಗತ್ಯ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ವಿವಾಹದ ಸಮಸ್ಯೆಗಳು:

ಕೂಲಿಕಾರ ಮಹಿಳೆಯರಿಗೆ ವಿವಾಹವೂ ಒಂದು ಸಮಸ್ಯೆಯಾಗುತ್ತಿರುತ್ತದೆ. ಬಾಲ್ಯ ವಿವಾಹ ಪದ್ಧತಿ ಇನ್ನೂ ಜೀವಂತವಾಗಿದೆ. ಚಿಕ್ಕ ವಯಸ್ಸಿನಲ್ಲಿ ವಿಧವೆಯಾದ ಮಹಿಳೆಗೆ ಪುನರ್ ವಿವಾಹವಾಗುವುದು ಅನಿವಾರ್ಯವಾಗಿದ್ದರೂ ಅದಕ್ಕೆ ಪೂರಕವಾದ ವಾತಾವರಣ ಹಳ್ಳಿಗಳಲ್ಲಿ ಇರುವುದಿಲ್ಲ. ಅದೇ ರೀತಿಯಲ್ಲಿ ಬೇರೆ ಬೇರೆ ಜಾತಿಗಳಿಗೆ ಕೋಮುಗಳಿಗೆ ಸೇರಿರುವ ಯುವಕ ಯುವತಿಯರಿಗೆ ಪರಸ್ಪರ ಇಷ್ಟಪಟ್ಟು ವಿವಾಹವಾಗಲೂ ಸಮಾಜದಿಂದ ಅಗತ್ಯ ಪ್ರೋತ್ಸಾಹ ದೊರೆಯುತ್ತಿಲ್ಲ. ತಮ್ಮ ಇಚ್ಛೆಗೆ ವಿರುದ್ಧವಾಗಿ ಅಂತರ ಜಾತಿ ವಿವಾಹವಾಗಲು ಮುಂದಾಗುವ ತಮ್ಮ ಮಕ್ಕಳನ್ನೇ ಕೊಚ್ಚಿಕೊಲೆ ಮಾಡಲು ಹೇಸದವರು ನಮ್ಮ ನಡುವೆ ಇದ್ದಾರೆ. ಇಂತಹ ಪ್ರವೃತ್ತಿ ವಿರುದ್ಧ ಜನ ಜಾಗೃತಿ ಅತ್ಯಗತ್ಯವಾಗಿದೆ.

ಮೂಢನಂಬಿಕೆಗಳಿಂದ ಮುಕ್ತಿ:

ಮಹಿಳೆಯರು, ವಿಶೇಷವಾಗಿ ಗ್ರಾಮೀಣ ಮಹಿಳೆಯರು ಅನೇಕ ವಿಧದ ಮೂಢನಂಬಿಕೆಗಳಿಗೆ ಒಳಗಾಗಿದ್ದಾರೆ. ಹಣೆ ಬರಹ ಎಂದು ಕೊರಗುತ್ತಾರೆ. ಮಾಟ ಮಂತ್ರಗಳಿಗೆ ಮೊರೆ ಹೋಗುತ್ತಾರೆ. ಶಿಕ್ಷಣದ ಕೊರತೆ ಒಂದು ಪ್ರಮುಖ ಕಾರಣವಾಗಿದೆ. ಅವರಲ್ಲಿ ತಿಳುವಳಿಕೆ ಮೂಡಿಸುವ ಕೆಲಸ ಆಗಬೇಕಾಗಿದೆ.

ಮೈಕ್ರೊ ಫೈನಾನ್ಸ್ ಹಾವಳಿ:

ಗ್ರಾಮೀಣ ಮಹಿಳೆಯರಿಗೆ ಕಿರುಸಾಲ ಒದಗಿಸುವುದಾಗಿ ಬಂದಿರುವ ಮೈಕ್ರೊ ಫೈನಾನ್ಸ್ ಕಂಪೆನಿಗಳು ಬರಗಾಲದ ಈ ಪರಿಸ್ಥಿತಿಯಲ್ಲಿ ಸಹ ಬಲವಂತದ ಸಾಲ ವಸೂಲಿಗೆ ಇಳಿಯುತ್ತವೆ. ಬಡ ಕೂಲಿಕಾರ ಮಹಿಳೆಯರನ್ನು ಆತ್ಮಹತ್ಯೆಗೆ ತಳ್ಳುತ್ತಿವೆ. ಈ ಕಿರು ಸಾಲ ಕಂಪೆನಿಗಳು ನಡೆಸುವ ವ್ಯವಹಾರ ಪಾರದರ್ಶಕವಾಗಿಲ್ಲ. ಸರ್ಕಾರಕ್ಕೆ ಅವುಗಳ ಮೇಲೆ ನಿಯಂತ್ರಣವಿಲ್ಲ. ಮಹಿಳಾ ಗುಂಪುಗಳಿಂದ ದುಬಾರಿ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಸಾಲ ವಸೂಲಿಗಾಗಿ ಬರುವ ಸಿಬ್ಬಂದಿ ಮಹಿಳೆಯರನ್ನು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸುತ್ತಾರೆ. ಇವರ ಕಿರುಕುಳ ತಾಳಲಾಗದೆ ರಾಜ್ಯದೆಲ್ಲೆಡೆ ಮಹಿಳೆಯರು ಪ್ರತಿಭಟಿಸುತ್ತಿದ್ದಾರೆ. ಕಿರುಕುಳ ತಾಳಲಾಗದೆ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನ ಪಟ್ಟ ಉದಾಹರಣೆಗಳಿವೆ. ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಕೃಷಿ ಕೂಲಿಕಾರ ಮಹಿಳೆಯರ ಪ್ರಶ್ನೆಗಳನ್ನು ಎತ್ತಿಕೊಂಡು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಅನೇಕ ಹೋರಾಟಗಳನ್ನು ಮಾಡಿದೆ. ಅವರು ಮಹಿಳೆಯರಾಗಿ ಎದುರಿಸುವ ಪ್ರತ್ಯೇಕ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಚರ್ಚೆಮಾಡಲು ಸಮಾವೇಶಗಳನ್ನು ರಾಜ್ಯ, ಜಿಲ್ಲಾ, ತಾಲೂಕು ಮಟ್ಟದಲ್ಲಿಯೂ ನಡೆಸಬೇಕು.

ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ನಿರ್ದೇಶಿಸುತ್ತದೆ.

ಕನಿಷ್ಟ ವರ್ಷಕ್ಕೊಮ್ಮೆಯಾದರೂ ಮಹಿಳಾ ಕೃಷಿ ಕೂಲಿಕಾರರ ಸಮಾವೇಶವನ್ನು ರಾಜ್ಯ/ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಿ ಬೇಡಿಕೆಗಳನ್ನು ಸಕಾಲಿಕಗೊಳಿಸಬೇಕು. ವರ್ಷಕ್ಕೊಮ್ಮೆಯಾದರೂ ಬೇಡಿಕೆಗಳ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅವುಗಳನ್ನು ಒತ್ತಾಯಿಸುವ ಹೋರಾಟ ನಡೆಸಬೇಕು.

ಹಲವು ಊರುಗಳಲ್ಲಿರುವ ಅರಳಿಕಟ್ಟೆ ಬೆಂಕಿಯ ಫ್ಯಾಕ್ಟರಿಗಳೆಂದರೆ ನಂಬಬಹುದೇ?

ಹಲವು ಊರುಗಳಲ್ಲಿರುವ #ಅರಳಿಕಟ್ಟೆ ಬೆಂಕಿಯ ಫ್ಯಾಕ್ಟರಿಗಳೆಂದರೆ ನಂಬಬಹುದೇ?
ಈ #ಬೆಂಕಿಯ_ಫ್ಯಾಕ್ಟರಿಗಳು ಮಕ್ಕಳಿಗಾಗಿ ವ್ರತ ಮಾಡುವ ದೇವತೆಗಳಾದದ್ದು ಹೇಗೆ?
ಅರಿವು ನೀಡಿದ #ಅಜ್ಜಿಯರು ಊರನ್ನು ಕಾಪಾಡುವ "#ಅಮ್ಮ" ದೇವತೆಗಳಾದರೇ?
ಹರಪ್ಪ–ಮೊಹೆಂಜದಾರೋಗಳಲ್ಲಿ ಜಗತ್ತಿನೆಲ್ಲೆಡೆಯಲ್ಲಿ "ಅಮ್ಮ"ನ ಮೂರ್ತಿಗಳ ಹೆಚ್ಚಾಳ.
ಅರಿವಿನ ಸ್ಫೋಟದ ಮರೆಯ ಅರಿವಿನ ಮಿತಿಗಳು, ಕೊರತೆಗಳು ಹಾಗೂ ಅವು ತಳೆದ ವಿಶಿಷ್ಟ ರೂಪಗಳು.



ಜಿ.ಎನ್. ನಾಗರಾಜ್

ಬಹಳಷ್ಟು ಊರುಗಳಲ್ಲಿ ಒಂದು ಅರಳಿ ಕಟ್ಟೆ ಇರುತ್ತದೆ.. ಆ ಕಟ್ಟೆಯ ಮೇಲೆ ಅಲ್ಲಲ್ಲಿಯ ಬುದ್ಧರ ನಡುವೆ ಅವರ ಅರಿವಿನ ಮಥನವಾಗುತ್ತಾ ಇರುವುದು ಹಳ್ಳಿಗಳಲ್ಲಿ ಸಾಮಾನ್ಯ ದೃಶ್ಯ. ಅದೇ ಕಟ್ಟೆಯಲ್ಲಿ ಸೀರೆ ಸುತ್ತಿದ, ಬಳೆಗಳ ರಾಶಿಯನ್ನೇ ಹೊತ್ತ ಬೇವಿನ ಮರ, ಅರಳಿ ಮರದ ಪಕ್ಕದಲ್ಲೇ ತಂಪು ನೆರಳನ್ನು ನೀಡುತ್ತಿರುತ್ತದೆ. ಅವುಗಳ ನಡುವೆ ತಳಿಕೆ ಹಾಕಿಕೊಂಡ ಜೋಡಿ ಸರ್ಪಗಳ ಪ್ರತಿಮೆಗಳೂ ಕೆಲವು ಇರುತ್ತವೆ. ಮಕ್ಕಳಾಗದ ಹಲವು ಮಹಿಳೆಯರು ಹರಕೆ ಹೊತ್ತು ಅರಳಿಕಟ್ಟೆಯ ಎರಡೂ ಮರಗಳ ಸುತ್ತ ಪ್ರದಕ್ಷಿಣೆ ಹಾಕುವುದು ಸಾಮಾನ್ಯ. ಬೇವಿನ ಮರಕ್ಕೆ ಸೀರೆ ಉಡಿಸುವ, ಬಳೆಗಳನ್ನು ಹಾಕುವ ಪೂಜೆ ಪುನಸ್ಕಾರಗಳೂ ನಡೆಯುತ್ತಿರುತ್ತವೆ. ನಾಗ ಪ್ರತಿಮೆಗಳು ಅಲ್ಲಿ ಸ್ಥಾಪಿಸಲ್ಪಟ್ಟಿರುವುದೂ ಇದಕ್ಕೆ ಪೂರಕವಾಗಿಯೇ!

ಆದರೆ ಈ ಅರಳಿಕಟ್ಟೆ ಎಂದರೆ ಅದು ಇರುವ ಊರುಗಳಲ್ಲಿ ಒಂದು ಬೆಂಕಿ ಪೊಟ್ಟಣ ಬರುವ ಮೊದಲಿನ ಬೆಂಕಿ ಉತ್ಪಾದಿಸುವ ಸಾಧನವಾಗಿ ಬಳಕೆಗೆ ಬಂತು ಎಂದರೆ ನಂಬಲು ಕಷ್ಟವಲ್ಲವೇ? ಈ ಬೆಂಕಿ ಉತ್ಪಾದಿಸುವ ವಿಧಾನವೇ ಮಕ್ಕಳನ್ನು ಪಡೆಯುವ ಹರಕೆ ಹೊರಲು ಕಾರಣವಾಗಿದೆ ಎಂದರೆ!

70,000 – 30,000 ವರ್ಷಗಳ ಹಿಂದೆ ಮಾನವರು ಬೆಂಕಿಯ ಬಗೆಗಿನ ಅರಿವನ್ನು ಪಡೆದುಕೊಂಡ ಸಮಯದ ಸಂಗತಿಗಳವು. ಆಹಾರ ಬೇಯಿಸಲು, ಚಳಿಯಿಂದ ರಕ್ಷಿಸಿಕೊಳ್ಳಲು, ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಬೆಂಕಿಯನ್ನು ಹೊತ್ತಿಸುವ, ನಿಯಂತ್ರಿಸುವ ಕೌಶಲ್ಯ ಗಳಿಸುವುದು ಬಹಳ ತುರ್ತಿನದು. ಅದಕ್ಕೆ ಈ ಆದಿಮಾನವರು ವಿವಿಧ ವಿಧಾನಗಳನ್ನು ಪ್ರಕೃತಿಯನ್ನು ವೀಕ್ಷಿಸಿ, ಸ್ವತಃ ಪ್ರಯೋಗಗಳನ್ನು ಮಾಡಿ ಕಲಿತರು. ಬೆಣಚು ಕಲ್ಲುಗಳನ್ನು ಒಂದರೊಡನೆ ಮತ್ತೊಂದನ್ನು ಘರ್ಷಿಸಿದಾಗ ಬೆಂಕಿಯ ಕಿಡಿಗಳು ಸಿಡಿಯುವುದು, ಮರ ಮರ ಮಥನಿಸಿ ಕಾಡುಕಿಚ್ಚು ಹೊತ್ತಿಕೊಳ್ಳುವುದು ಮೊದಲಾದವನ್ನು ಗಮನಿಸಿದರು. ಬೆಣಚು ಕಲ್ಲು ಲಭ್ಯವಿಲ್ಲದ ಪ್ರದೇಶಗಳಲ್ಲಿ ಎರಡು ಮರದ ತುಂಡುಗಳನ್ನು ಪರಸ್ಪರ ಉಜ್ಜಿ ಬೆಂಕಿ ಪಡೆಯುವುದು ಸಾಮಾನ್ಯ ವಿಧಾನ ವಾಯಿತು. ಹೀಗೆ ಮರಗಳನ್ನು ಉಜ್ಜಿ ಬೆಂಕಿ ಪಡೆಯುವಾಗ ಕೆಲವು ಮರಗಳು ಗಟ್ಟಿ ಕಾಂಡವನ್ನು, ಮತ್ತೆ ಕೆಲವು ಮೃದು ಕಾಂಡವನ್ನು ಹೊಂದಿರುವುದನ್ನು ಗಮನಿಸಿದರು. ಗಟ್ಟಿ ಮರದ ತುಂಡುಗಳನ್ನು ಕೋಲಿನಂತೆ ಲಂಬವಾಗಿ ಹಿಡಿದು ಮೃದು ಮರದ ಹಲಗೆಯ ಮೇಲೆ ಒತ್ತಿ ಕಡೆದರೆ ಹೊಗೆ ಬಂದು ಬೆಂಕಿಯ ಕಿಡಿಗಳು ಏಳುವುದು ಕಡಿಮೆ ಶ್ರಮದಾಯಕ ಎಂಬುದು ಅವರ ಅನುಭವಕ್ಕೆ ಬಂದಿತು. ಇದು ನೆನಪಿಟ್ಟುಕೊಳ್ಳಲು ಸುಲಭವಾಗುವಂತೆ ರೂಪಕಗಳ ಮೂಲಕ ಪ್ರಕೃತಿಯ ಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ಆದಿಮಾನವರ ಕಣ್ಣಿಗೆ ಇವು ಸ್ತ್ರೀ ಪುರುಷರ ಲೈಂಗಿಕ ಅವಯವಗಳಂತೆ ಮತ್ತು ಮರ ಮರಗಳ ಮಥನ ಮೈಥುನದಂತೆ ಕಂಡಿತು. ಲಂಬವಾದ ಕಡೆಗೋಲಿನಂತೆ ಬಳಸುವ ಮರಗಳನ್ನು ಗಂಡು ಮರಗಳೆಂದು ಕೆಳಗಿನ ಮರದ ಹಲಗೆಯನ್ನು ಹೆಣ್ಣು ಮರವೆಂದು ಗುರುತಿಸಲಾರಂಭಿಸಿದರು.

ಹೀಗೆ ಅರಳಿ ಗಂಡು ಮರ, ಬೇವು ಹೆಣ್ಣು ಮರವಾಯಿತು.

ಬೆಂಕಿಯನ್ನು ಪಡೆಯುವ ಸುಲಭದ ಸಾಧನವಾಗಿ ಈ ಮರಗಳನ್ನು ಊರ ಬಳಿ ಜೋಡಿಯಾಗಿ ಬೆಳೆಸಲಾರಂಭಿಸಿದರು. ಅವುಗಳನ್ನು ಗಂಡ ಹೆಂಡತಿ ಎಂದು ಭಾವಿಸಿದರು. ಅಂದು ಬಹಳವಾಗಿದ್ದ ಮಕ್ಕಳಾಗದ ಸಮಸ್ಯೆಗಳು, ಎಳೆ ಮಕ್ಕಳ ಸಾವುಗಳು ಮಕ್ಕಳಿಗಾಗಿ ಹಂಬಲಿಸುವಂತೆ ಮಾಡಿದವು. ಮಕ್ಕಳಾಗುವುದು ಹೇಗೆ, ಕೆಲವು ಬಾರಿ ಮಕ್ಕಳೇಕೆ ಆಗುವುದಿಲ್ಲ ಎಂಬ ಬಗ್ಗೆ ಹಲವು ಹತ್ತು ಸಾವಿರ ವರ್ಷ ಮಾನವರಿಗೆ ಅರಿವಿರಲಿಲ್ಲ. ತೀರಾ ಇತ್ತೀಚೆಗೆ ಜೀವ ವಿಜ್ಞಾನದ ಬೆಳವಣಿಗೆಯ ನಂತರವಷ್ಟೇ ಈ ಬಗ್ಗೆ ಅರಿವು ಮೂಡಿದ್ದಲ್ಲವೇ? ಅಂದಿನ ಮಾನವರ ಅರಿವಿನ ಈ ಮಿತಿ ಅವರು ಗಂಡ ಹೆಂಡತಿಯರೆಂದು ಭಾವಿಸಿದ, ಸರಿಯಾದ ವಿಧಾನದಿಂದ ಮಥಿಸಿದರೆ ಖಾತರಿಯಾಗಿ ಬೆಂಕಿಯನ್ನು ಉತ್ಪಾದಿಸುವ ಈ ಮರಗಳನ್ನು ಮಕ್ಕಳನ್ನು ಪಡೆಯಲು ಪೂಜಿಸುವಂತೆ ಪ್ರೇರೇಪಿಸಿತು.

ಮುಂದೆ ಹಲವು ಸಾವಿರ ವರ್ಷಗಳ ನಂತರ ಬೆಂಕಿಯನ್ನು ಪಡೆಯಲು ಬೆಂಕಿ ಪೊಟ್ಟಣವೂ ಸೇರಿದಂತೆ ಹಲವು ವಿಧಾನಗಳು ಬಳಕೆಗೆ ಬಂದ ನಂತರದಲ್ಲಿ ಈ ಮರಗಳನ್ನು ಜೋಡಿಯಾಗಿ ಬೆಳೆಸಿ ಕಟ್ಟೆ ಕಟ್ಟಿ ಸಂರಕ್ಷಿಸಿದ ನಿಜ ಉದ್ದೇಶವೇ ಮರೆಯಾಗಿ ಕೇವಲ ಮಕ್ಕಳನ್ನು ಪಡೆಯುವ ಪೂಜೆಯ ಸಾಧನವಾಗಿ, ಹಳ್ಳಿಗಳ ನ್ಯಾಯ ಪಂಚಾಯ್ತಿ ಮತ್ತಿತರ ಸಭೆಗಳ ಸ್ಥಾನವಾಗಿ, ಹರಟೆ ಕಟ್ಟೆಯಾಗಿ ಮಾತ್ರ ಬಳಕೆಯಲ್ಲಿವೆ. ತಳಿಕೆ ಹಾಕಿಕೊಂಡ ಹಾವುಗಳೂ ಕೂಡಾ ಮಕ್ಕಳನ್ನು ಪಡೆಯುವ ಪೂಜೆಯ ಸಾಧನವಾಗಿ ಬಳಕೆಗೆ ಬಂದಿದ್ದುದರಿಂದ ಅವುಗಳ ಪ್ರತಿಮೆಗಳೂ ಈ ಕಟ್ಟೆಗಳಲ್ಲಿ ತಾವು ಪಡೆದುಕೊಂಡಿವೆ.

ಅರಿವಿನ ಸ್ಫೋಟಗಳು ಮಾನವರ ಇತಿಹಾಸದ ಬಹು ಮಹತ್ವದ ಹೆಜ್ಜೆಗಳು. ಈ ಅರಿವಿನ ನೆಗೆತದ ಮರೆಯಲ್ಲಿಯೇ ಮಾನವರಿಗೆ ಅಂದು ದಕ್ಕದ ಅರಿವಿನ ಮಹಾ ಸಾಗರಗಳೂ ಇತ್ತಲ್ಲ! ಇಂದೂ ಕೂಡಾ ಮನುಷ್ಯರಿಗೆ ಪ್ರಕೃತಿಯ ವಿಸ್ತಾರದ ಒಂದು ಸಣ್ಣ ಅಂಶವಷ್ಟೇ ತಿಳಿದಿರುವುದು ಎಂದ ಮೇಲೆ ಅಂದಿನ ಮಾನವರ ಅರಿವಿನ ಮಿತಿಗಳು, ಕೊರತೆಗಳು ನಮ್ಮ ಸಹಾನುಭೂತಿಯ ಅಧ್ಯಯನಕ್ಕೆ ಗುರಿಯಾಗಬೇಕು.

ಆದರೆ ಮುಖ್ಯ ವಿಷಯವೆಂದರೆ ಅಂದಿನ ಅರಿವಿನ ಮಿತಿಗಳು ಏಕೆ ವಿಜ್ಞಾನದ ಸ್ಫೋಟಗಳನ್ನು ದಿನ ದಿನವೂ ಕಾಣುತ್ತಿರುವ ಇಂದಿನ ಆಧುನಿಕ ಮಾನವರನ್ನು ಕೂಡಾ ಗಣನೀಯವಾಗಿ ವ್ಯಾಪಿಸಿವೆ, ಅವರ ಅರಿವಿನ ಮೇಲೆ ಮಿತಿಗಳನ್ನು ಹೇರುತ್ತಿವೆ ಎಂಬುದು.

ಬೆಂಕಿ ಹೊತ್ತಿಸುವುದು ಹಲವು ಸಂದರ್ಭದಲ್ಲಿ ಸಮಸ್ಯೆಯಾದ್ದರಿಂದ ಬೆಂಕಿಯನ್ನು ಸದಾ ಕಾಪಾಡಿಕೊಳ್ಳುವುದೇ ಒಳ್ಳೆಯದು ಎಂದು ಭಾವಿಸಿದರು. ಒಬ್ಬ ಗೃಹಸ್ಥನೆಂದರೆ ಮನೆಯಲ್ಲಿ ಯಾವಾಗಲೂ ಬೆಂಕಿ ಆರದೆ ಉರಿಯುತ್ತಿರಬೇಕು. ಮದುವೆಯಾಗಿ ಹೊಸ ಮನೆ ಮಾಡಿದವರು ತಂದೆಯ ಮನೆಯಿಂದ ಬೆಂಕಿ ತಂದುಕೊಳ್ಳಬೇಕು. ಹೀಗೆ ತಲೆ ತಲಾಂತರದಿಂದ ಬೆಂಕಿ ಪಿತೃಗಳ ಮನೆಯಿಂದ ಪುತ್ರರ ಮನೆಗೆ ವರ್ಗಾವಣೆಯಾಗುತ್ತಾ ಹೋಗುವುದು ವಾಡಿಕೆಯಾಯಿತು. ಇಂತಹ ಸಂದರ್ಭದಲ್ಲಿ ಬೆಂಕಿ ಹೊತ್ತಿಸುವುದೇ ಒಂದು ವಿಶೇಷ ಕೌಶಲ್ಯವಾಗಿ ಅದನ್ನು ಬಲ್ಲವರು ಅಗ್ನಿಹೋತ್ರಿಗಳೆಂಬ ಪುರೋಹಿತ ವರ್ಗವಾದರು. ಇಂದೂ ಅರಳಿಮರ ಮತ್ತು ಬೇವಿನ ಮರದ ಅರಣಿಯಿಂದಲೇ ಬೆಂಕಿ ಹೊತ್ತಿಸಬೇಕೆಂಬ ನಂಬಿಕೆಯುಳ್ಳ ಹಲವು ಆರಾಧನಾ ಪದ್ಧತಿಗಳನ್ನು ನೋಡುತ್ತೇವೆ.

ಅರಿವು ನೀಡಿದ ಅಜ್ಜಿಯರೇ "ಅಮ್ಮ" ಂದಿರಾದರು.

ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ಊರೂರಿಗೆ ಹಲವಾರು "ಅಮ್ಮ" ಗಳ ಗುಡಿಗಳನ್ನು ನೋಡುತ್ತೇವೆ. ನಾವು ಈ "ಅಮ್ಮ" ನ ಒಕ್ಕಲು ಎಂದು ಹೇಳಿಕೊಳ್ಳುವ ಜನರು ಆ ಊರುಗಳಲ್ಲಿ, ನೆರೆಯ ಊರುಗಳಲ್ಲೂ ಇರುತ್ತಾರೆ. ಆ ಅಮ್ಮ ಅವರ ಮನೆ ದೇವರು. ಉತ್ತರ ಕರ್ನಾಟಕದಲ್ಲಿ ಈ ರೀತಿಯ ಪದ್ಧತಿ ಇದೆ: ಪ್ರತಿಯೊಂದು ಕುಟುಂಬಕ್ಕೂ ಒಂದು ಗಂಡು ದೇವರು, ಒಂದು ಹೆಣ್ಣು ದೇವರು ಮನೆ ದೇವರಾಗಿರುತ್ತಾರೆ. ಈ ರೀತಿ ಸಾವಿರಾರು "ಅಮ್ಮ"ಗಳಿದ್ದಾರೆ. ಕೆಲವು ಜಾನಪದ ಸಂಶೋಧಕರು ಈ "ಅಮ್ಮ" ಗಳ ಪಟ್ಟಿ ಮಾಡಲು ಪ್ರಯತ್ನಿಸಿ ಸೋತಿದ್ದಾರೆ. ಅಷ್ಟೊಂದು ಬಾಹುಳ್ಯ. ಅವುಗಳಲ್ಲಿ ಮಾರಮ್ಮ,ಎಲ್ಲಮ್ಮನಂತೆ ಬಹಳ ಜನರಿಂದ ಪೂಜಿಸಲ್ಪಟ್ಟ ಅಮ್ಮಗಳಿರುತ್ತಾರೆ.

"ಅಮ್ಮ" ನ ಒಕ್ಕಲಲ್ಲದವರೂ ಈ ದೇವತೆಗಳಿಗೆ ಬಹಳ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಸಿಡುಬಿನಂತಹ ಬಹಳ ಅಪಾಯಕಾರಿ ಕಾಯಿಲೆಗಳು ಬಂದಾಗ ಅದು ಅಮ್ಮ ಎಂದೇ ಪರಿಗಣಿಸಿ ಅಮ್ಮನಿಗೆ ಪೂಜೆ ಸಲ್ಲಿಸುವುದು ಸಾಮಾನ್ಯ. ಅಂತಹ ಅಪಾಯಕಾರಿಯಲ್ಲದ ಕಾಯಿಲೆಗಳು, ಮಳೆ ಮತ್ತಿತರ ಪ್ರಕೃತಿಯ ವಿಕೋಪಗಳು ಇಂತಹವುಗಳ ಬಗ್ಗೆಯೂ "ಅಮ್ಮ" ನಿಗೆ ವಿವಿಧ ರೀತಿಯಲ್ಲಿ ಪೂಜೆಗಳನ್ನು ಸಲ್ಲಿಸುತ್ತಾರೆ. ಅಮ್ಮಗಳ ಜಾತ್ರೆ, ಪೂಜೆಗಳ ಸಮಯದಲ್ಲಿ ಪ್ರಾಣಿ ಬಲಿ– ಕೋಣ,ಕುರಿ,ಆಡು,ಕೋಳಿ ಇತ್ಯಾದಿಗಳ ಬಲಿ ಕೆಲವು ದೇವತೆಗಳಿಗೆ ಸಾಮಾನ್ಯ.

ಇಂದು ಇಡೀ ವಿಶ್ವದಲ್ಲಿ ದಕ್ಷಿಣ ಭಾರತ "ಅಮ್ಮ" ದೇವತೆಗಳ ನೆಲೆವನೆಯಾಗಿದೆ. ಆದರೆ ಇತಿಹಾಸದಲ್ಲೊಮ್ಮೆ ಇಡೀ ವಿಶ್ವವನ್ನೇ "ಅಮ್ಮ" ದೇವತೆಗಳು ಆವರಿಸಿದ್ದ ಲಕ್ಷಣಗಳು ವಿಶ್ವದ ಹಲವು ಭಾಗಗಳಲ್ಲಿ ಕಾಣುತ್ತವೆ. ಹಲವು ಪ್ರದೇಶಗಳಲ್ಲಿ ಈಗ ಬೇರೆ ಗಂಡು ಏಕದೇವತಾ ಆರಾಧನೆಯ ಪದ್ಧತಿಯ ಅಡಿಪಾಯದಲ್ಲಿ ಈ "ಅಮ್ಮ"ಗಳು ಹುದುಗಿ ಹೋಗಿವೆ. ನಮ್ಮ ಭಾಗದ ಹರಪ್ಪಾ– ಮೊಹೆಂಜದಾರೋ ಸಿಂಧೂ ನದಿಯ ಸಂಸ್ಕೃತಿ, ಮೆಸಪಟೋಮಿಯಾ, ಈಜಿಪ್ಟ್, ಬಾಬಿಲೋನಿಯಾ ಮೊದಲಾದ ಹಲವು ಪ್ರಾಚೀನ ಸಂಸ್ಕೃತಿಗಳ ಪ್ರದೇಶದಲ್ಲಿನ ಉತ್ಖನನಗಳು ಆಯಾ ಪ್ರದೇಶಗಳಲ್ಲಿ ಹತ್ತಾರು ಸಾವಿರ ಹೆಣ್ಣು ಮೂರ್ತಿಗಳನ್ನು ಬೆಳಕಿಗೆ ತಂದಿವೆ. ಈ ಹೆಣ್ಣು ಮೂರ್ತಿಗಳು ಆಯಾ ಪ್ರದೇಶದ "ಅಮ್ಮ" ಗಳ ಆರಾಧನೆಯ ಕುರುಹುಗಳಾಗಿವೆ. ಈ ಕೆಲವು ಪ್ರದೇಶಗಳಲ್ಲಿ ಕೆಲವು ದೇವತೆಗಳ ಆರಾಧನೆ ಉಳಿದುಬಂದಿದೆ. ಈ "ಅಮ್ಮ" ಗಳ ಆರಾಧನೆ ಬಹು ಮಟ್ಟಿಗೆ 70,000–30,000 ವರ್ಷಗಳ ಹಿಂದಿನ ಮೊದಲ ಅರಿವಿನ ಸ್ಫೋಟದ ಸಮಯದಲ್ಲಿ ಆರಂಭವಾಗಿದೆ. ಆ ಸಮಯದಲ್ಲಿ ಹೆಣ್ಣು ಮೂರ್ತಿಗಳು ಬಹಳ ವಿಪುಲವಾಗಿ ದೊರಕುತ್ತವೆ. ನಂತರವೂ ಐದು ಸಾವಿರದಿಂದ ಮೂರು ಸಾವಿರ ವರ್ಷದ ಹಿಂದಿನವರೆಗೂ ಹಲವು ಪ್ರದೇಶಗಳಲ್ಲಿ ಇವುಗಳ ಪೂಜೆ ಮುಂದುವರೆದಂತೆ ಸಂಶೋಧನೆಗಳು ತಿಳಿಸಿವೆ.


ಈ "ಅಮ್ಮ" ಗಳ ಪೂಜೆಯ ಪದ್ಧತಿಯ ಉಗಮ ಮೊದಲ ಅರಿವಿನ ಸ್ಫೋಟದೊಂದಿಗೆ ಜೋಡಿಸಿಕೊಂಡಿರುವುದು ವಿಶೇಷ. ಈ ಲೇಖನಮಾಲೆಯ ಹಿಂದಿನ ಲೇಖನಗಳಲ್ಲಿ ಹೇಳಿದಂತೆ ಲಕ್ಷಾಂತರ ವರ್ಷಗಳ ಕಾಲ ಮಾನವರಿಗೆ ಅಪ್ಪಂದಿರಾರು ಎಂಬುದೇ ಗೊತ್ತಿರಲಿಲ್ಲ ಮಾತ್ರವಲ್ಲ ಮಕ್ಕಳ ಹುಟ್ಟಿಗೆ ಗಂಡು ಬೇಕೆಂದೇ ಗೊತ್ತಿರಲಿಲ್ಲ. ಯಾವಾಗಲೋ ಒಂದು ದಿನ ಗಂಡು ಹೆಣ್ಣು ತಮ್ಮ ಲೈಂಗಿಕ ತೃಪ್ತಿಗೆ ಕೂಡಿದ್ದಕ್ಕೂ ಮತ್ತೆ ಹಲ ದಿನಗಳು ಕಳೆದ ನಂತರ ಯಾವಾಗಲೋ ಒಂದು ದಿನ ಹೆರಿಗೆಯಾಗಿ ಮಗು ಜನಿಸುವುದಕ್ಕೂ ಸಂಬಂಧವಿದೆ ಎಂಬುದು ಅವರ ಅರಿವಿಗೆ ದಕ್ಕಿರಲಿಲ್ಲ. ಆಗ ತಿಂಗಳು, ಋತುಗಳು, ವರ್ಷಗಳು ಎಂಬ ಕಾಲ ಗಣನೆ ಕೂಡಾ ಗೊತ್ತಿರಲಿಲ್ಲವಲ್ಲ. ಹೀಗಾಗಿ ಅಮ್ಮ ಮಾತ್ರವೇ ಮಕ್ಕಳ ಹುಟ್ಟಿಗೆ ಕಾರಣ. ಅಮ್ಮನಲ್ಲಿ ಯಾವುದೋ ಒಂದು ವಿಶೇಷ ಶಕ್ತಿ ಇದೆ. ಈ ಶಕ್ತಿಯ ಬಲದಿಂದ ಅಮ್ಮ ಮಕ್ಕಳ ಹುಟ್ಟಿಗೆ ಕಾರಣಳು. ಅವಳ ಬಸಿರು, ಲೈಂಗಿಕ ಅವಯವಗಳು, ಹಾಲೂಡಿ ಬೆಳೆಸುವ ಮೊಲೆಗಳಲ್ಲಿ ಈ ಶಕ್ತಿ ಅಡಗಿದೆ ಎಂದು ಆ ಆದಿ ಮಾನವರು ಭಾವಿಸಿದರು. ಅಂದಿನ ಮಾನವ ಸಂಬಂಧಗಳು ಅಮ್ಮ, ಆಕೆಯ ಮಕ್ಕಳು ಎಂಬ ಜಗತ್ತಿನ ಅತ್ಯಂತ ಸಮೀಪದ ಭಾಂಧವ್ಯದೊಂದಿಗೆ ತಳುಕಿ ಹಾಕಿಕೊಂಡಿತ್ತು. ಮಾನವ ಸಮುದಾಯದ ಬುಡಕಟ್ಟುಗಳ ಮೂಲ ಘಟಕವೆಂದರೆ ಅಮ್ಮ ಮತ್ತು ಆಕೆಯ ಮಕ್ಕಳು. ಆಕೆಯ ಹೆಣ್ಣು ಮಕ್ಕಳಿಗೆ ಹುಟ್ಟುವ ಮಕ್ಕಳು ಇದೇ ಘಟಕದಲ್ಲಿ ಮುಂದುವರೆಯುತ್ತಾರೆ. ಮೊದಲಿಗೆ ಈ ಘಟಕ ಬಹಳ ಸಣ್ಣದು. ಏಕೆಂದರೆ ಅಮ್ಮ ಜೀವಿಸುತ್ತಿದ್ದುದೇ ಬಹಳ ಅಲ್ಪ ಕಾಲ. ಸರಾಸರಿಯಾಗಿ 20 ವರ್ಷ. ಎಂದರೆ ಕೆಲವರು ಮಾತ್ರ 30–40 ವರ್ಷ ಕಾಣುತ್ತಿದ್ದರು.

ಮುಂದೆ ಮೊದಲ ಅರಿವಿನ ಸ್ಫೋಟದ ಪರಿಣಾಮವಾಗಿ ಮಾನವರ ಆಯುಸ್ಸು ದುಪ್ಪಟ್ಟಾದಾಗ ಮಾತ್ರ ಮಾನವರು ಮೊದಲ ಬಾರಿಗೆ ಅಜ್ಜಿ, ಅಜ್ಜಂದಿರನ್ನು (ಅಜ್ಜ ಎಂದರೆ ಆಗ ಅಪ್ಪ, ಅಮ್ಮನ ಅಪ್ಪ ಅಲ್ಲ. ಅಜ್ಜಿಯ ತಮ್ಮಂದಿರು, ಈಗಿನ ಸಂಬಂಧದ ಪದ ಬಳಕೆಯಂತೆ ಸೋದರ ಮಾವಂದಿರು) ಕಂಡರು. ಆಗ ಈ ಮೂಲ ಘಟಕ ಅಮ್ಮ, ಮಕ್ಕಳು, ಮೊಮ್ಮಕ್ಕಳು, ಅಪರೂಪಕ್ಕೆ ಮರಿಮಕ್ಕಳು ಎಂದು ಸ್ವಲ್ಪ ವಿಸ್ತಾರವಾಯಿತು.

ಹಿಂದಿನ ಲೇಖನಗಳಲ್ಲಿ ವಿವರಿಸಿದಂತೆ ಈ ಅಜ್ಜಿಯರು ಹಲವು ದಶಕಗಳ ಕಾಲ ತಾವು ವೀಕ್ಷಿಸಿ, ತುಲನೆ ಮಾಡಿದ ಆಧಾರದಲ್ಲಿ ಸಸ್ಯ, ಪ್ರಾಣಿಗಳ ಬಗೆಗಿನ ಅರಿವನ್ನು ಮೊಮ್ಮಕ್ಕಳ ತಲೆಮಾರಿಗೆ ನೀಡಿದರು. ಯಾವುದು ಆಹಾರ, ಯಾವುದು ಅಲ್ಲ, ಯಾವ ಕಾಯಿಲೆಗೆ ಯಾವ ಗಿಡದ ಮದ್ದು ಎಂದೆಲ್ಲಾ ತಿಳಿಸುವುದರ ಮೂಲಕ ಮಕ್ಕಳು, ಮೊಮ್ಮಕ್ಕಳನ್ನು ಕಾಪಾಡಿದರು. ಆದ್ದರಿಂದ ಈ ಗುಂಪುಗಳಿಗೆ ಅಜ್ಜಿಯರ ಮೇಲೆ ತಮ್ಮನ್ನು ಹಸಿವು, ರೋಗಗಳಿಂದ ಕಾಪಾಡಿದವರು ಎಂದು ಅಪಾರ ಗೌರವ, ಪ್ರೇಮ ಇರುವುದು ಸಹಜ.

ಗುಂಪುಗಳು, ಗುಂಪಿನ ಮೂಲವಾದ ಅಜ್ಜಿ ಅಥವಾ ಮುತ್ತಜ್ಜಿಯ ಹೆಸರಿನಿಂದ ಗುರುತಿಸಲ್ಪಟ್ಟವು. ಈ ಅಜ್ಜಿ, ಮುತ್ತಜ್ಜಿಯರು ಸತ್ತ ಮೇಲೂ ಆ

ಪುಟ 12 ಕ್ಕೆ



ಎಲ್ಲ ಡೈರಿ ರೈತರಿಗೆ ನ್ಯಾಯಯುತ, ಫಲದಾಯಕ ಬೆಲೆ ಸಿಗಬೇಕು –ಅಖಿಲ ಭಾರತ ಡೈರಿ ರೈತರ ಕಾರ್ಯಾಗಾರದ ಆಗ್ರಹ

ಕೋಝಿಕ್ಕೋಡ್‌ನಲ್ಲಿ ಮೇ 14 ಮತ್ತು 15ರಂದು ನಡೆದ ಮೊದಲ ಅಖಿಲ ಭಾರತ ಡೈರಿ ರೈತರ ಕಾರ್ಯಾಗಾರದಲ್ಲಿ ಅಂಗೀಕರಿಸಲಾದ ಬೇಡಿಕೆಗಳ ಚಾರ್ಟರ್ ಎಲ್ಲಾ ಹೈನುಗಾರರಿಗೆ ನ್ಯಾಯಯುತ ಫಲದಾಯಕ ಬೆಲೆಯನ್ನು ಖಚಿತಪಡಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಲಭ್ಯವಿರುವ ಅಂಕಿಅಂಶಗಳ ಪ್ರಕಾರ, ಹೈನುಗಾರರಿಗೆ ಡೈರಿ ಸಹಕಾರಿ ಸಂಘಗಳು ಮತ್ತು ಖಾಸಗಿ ಕಾರ್ಪೊರೇಟ್ ಡೈರಿಗಳ ಮಧ್ಯವರ್ತಿಗಳ ಮೂಲಕ ಪಡೆಯುವ ಬೆಲೆಯಲ್ಲಿ ಉತ್ಪಾದನಾ ವೆಚ್ಚವೂ ಸಿಗುತ್ತಿಲ್ಲ. ಲಾಕ್‌ಡೌನ್ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಹಾಲಿನ ದರವನ್ನು ಅರ್ಧಕ್ಕೆ ಇಳಿಸಲಾಗಿದ್ದು, ರೈತರಿಗೆ ಭಾರಿ ನಷ್ಟ ಮತ್ತು ದೊಡ್ಡ ಡೈರಿ ಕಾರ್ಪೊರೇಟ್ ಮತ್ತು ಸಹಕಾರಿ ಸಂಸ್ಥೆಗಳು ಆಕರ್ಷಕ ಲಾಭ ಗಳಿಸಿವೆ. ಸಹಕಾರಿ ಸಂಸ್ಥೆಗಳು ಹಾಗೂ ಕಾರ್ಪೊರೇಟ್ ಕಂಪನಿಗಳು ಹಾಲು ಉತ್ಪಾದಕರಿಗೆ ಅವರಿಂದ ಸಂಗ್ರಹಿಸಿದ ಹಾಲಿನ ಅನುಪಾತಕ್ಕೆ ಅನುಗುಣವಾಗಿ ಹೆಚ್ಚುವರಿ ದರದಲ್ಲಿ ಮೌಲ್ಯವರ್ಧಿತ ಹಾಲಿನ ಉತ್ಪನ್ನಗಳ ಕೈಗಾರಿಕಾ ಹೆಚ್ಚುವರಿ ಹಂಚಿಕೆಯನ್ನು ಖಚಿತಗೊಳಿಸಲು ಕೇಂದ್ರ ಸರ್ಕಾರವು ಕಾನೂನನ್ನು ಜಾರಿಗೊಳಿಸಬೇಕು ಎಂದು ಕಾರ್ಯಾಗಾರ ಒತ್ತಾಯಿಸಿತು.

ದೇಶದ ಇತರ ಭಾಗಗಳಲ್ಲಿನ ಹೈನುಗಾರರು ಹಸುವಿನ ಹಾಲಿಗೆ ರೂ.17 ರಿಂದ ರೂ.35 ರ ನಡುವೆ ಪಡೆಯುತ್ತಿದ್ದರೆ, ಕೇರಳ ಸಹಕಾರಿ ಡೈರಿ ಸಂಸ್ಥೆ ಒಖಐಒಂ ಪ್ರತಿ ಲೀಟರ್‌ಗೆ 38 ರೂಪಾಯಿಗಳನ್ನು ನೀಡುತ್ತದೆ, ಹಾಲಿನ ಮಾರಾಟದಿಂದ ಬರುವ ಆದಾಯದ 83% ಹಾಲು ಉತ್ಪಾದಕರಿಗೆ ಮೀಸಲಿಟ್ಟಿರುವುದರಿಂದ ಇದು ಸಾಧ್ಯವಾಗಿದೆ. ಬೇರೆಡೆಗಳಲ್ಲಿ ರೈತರಿಗೆ ಉತ್ಪಾದನಾ ವೆಚ್ಚವೂ ಸಿಗದೆ ನಷ್ಟವನ್ನು ಅನುಭವಿಸಬೇಕಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಗೆ ತಿದ್ದುಪಡಿ ತಂದು ಹೈನುಗಾರಿಕೆಯನ್ನು ಅದರಲ್ಲಿ ಸೇರಿಸಬೇಕು ಮತ್ತು ಕನಿಷ್ಠ ಎರಡು ಹಾಲು ಜಾನುವಾರುಗಳನ್ನು ಹೊಂದಿರುವ ಮತ್ತು ಸಹಕಾರ ಸಂಘಕ್ಕೆ ಹಾಲು ನೀಡುವ ರೈತರಿಗೆ 100 ದಿನಗಳ ಕೂಲಿ ಒದಗಿಸಬೇಕು. ಇದು ಸಾಧ್ಯ ಎಂಬುದನ್ನು ಕೇರಳದ ಎಲ್‌ಡಿಎಫ್ ಸರ್ಕಾರವು ಅಯ್ಯಂಕಾಲಿ ನಗರ ಉದ್ಯೋಗ ಖಾತರಿ ಯೋಜನೆ (ಎಯುಇಜಿಎಸ್) ಮೂಲಕ ಜಾರಿಗೆ ತಂದ ಮಾದರಿಯು ತೋರಿಸುತ್ತದೆ. ಈ ಯೋಜನೆಯಡಿ ನಗರ ಪ್ರದೇಶದ ಹೈನುಗಾರರಿಗೆ ವರ್ಷಕ್ಕೆ 32,400 ರೂ. ಬಿಡುಗಡೆ ಮಾಡಲಾಗುತ್ತದೆ. ಇದನ್ನು ದೇಶಾದ್ಯಂತ ವಿಸ್ತರಿಸಿದರೆ, ಭಾರತದಲ್ಲಿ ಡೈರಿ ಕ್ಷೇತ್ರ ಮತ್ತು ಹಾಲು ಉತ್ಪಾದನೆಯಲ್ಲಿ ಅದ್ಭುತ ಅಭಿವೃದ್ಧಿಯನ್ನು ತರುತ್ತದೆ ಮತ್ತು ಗ್ರಾಮೀಣ ಪ್ರದೇಶದ ಜನರ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುತ್ತದೆ ಎಂದು ಕಾರ್ಯಾಗಾರ ಅಭಿಪ್ರಾಯ ಪಟ್ಟಿದೆ.

ಖಾಸಗಿ ಡೈರಿ ಕಾರ್ಪೊರೇಟ್ ಕಂಪನಿಗಳ ದೊಡ್ಡ ಪ್ರಮಾಣದ ಪ್ರವೇಶ ಮತ್ತು ವಿದೇಶಿ ಡೈರಿ ಉತ್ಪನ್ನಗಳ ಆಮದು ಡೈರಿ ಸಹಕಾರಿಗಳ ಅಸ್ತಿತ್ವಕ್ಕೆ ಧಕ್ಕೆ ತರುತ್ತದೆ. ಅನೇಕ ವಿದೇಶಿ ಕಂಪನಿಗಳು ಭಾರತೀಯ ಡೈರಿ ಕಂಪನಿಗಳೊಂದಿಗೆ ವಿಲೀನಗೊಂಡು ಇಂದು ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿವೆ. ಡೈರಿ ಸಹಕಾರಿ ಸಂಸ್ಥೆಗಳು ತಮ್ಮ ಸರ್ಕಾರಗಳಿಂದ ಭಾರೀ ಸಬ್ಸಿಡಿಯನ್ನು ಪಡೆಯುವ ವಿದೇಶಿ ಕಾರ್ಪೊರೇಟ್ ಕಂಪನಿಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲ ಎಂದಿರುವ ಕಾರ್ಯಾಗಾರ ಸಾಮ್ರಾಜ್ಯಶಾಹಿ ಶಕ್ತಿಗಳ ಒತ್ತಡದ ಅಡಿಯಲ್ಲಿ ಹಾಲು ಮತ್ತು ಹಾಲು ಆಧಾರಿತ ಉತ್ಪನ್ನಗಳ ಮೇಲೆ ಮುಕ್ತ ವ್ಯಾಪಾರಕ್ಕೆ ಅನುಮತಿ ನೀಡುವ ಮೂಲಕ ಭಾರತೀಯ ಮಾರುಕಟ್ಟೆಯನ್ನು ತೆರೆಯುವ ತನ್ನ ಯೋಜನೆಯಿಂದ ಕೇಂದ್ರ ಸರ್ಕಾರವು ಹಿಂದೆ ಸರಿಯಬೇಕು ಎಂದು ಆಗ್ರಹಿಸಿದೆ.



ಆರ್‌ಎಸ್‌ಎಸ್–ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಹಲವಾರು ರಾಜ್ಯಗಳಲ್ಲಿ ಗೋಹತ್ಯೆ ಸಮಸ್ಯೆಯನ್ನು ಕೋಮುವಾದೀಕರಿಸಿ ಜಾನುವಾರು ವ್ಯಾಪಾರವನ್ನು ನಿಷೇಧಿಸಿವೆ, ಹೀಗಾಗಿ ರೈತರ ಕುಟುಂಬಗಳ ಕುಟುಂಬದ ಆದಾಯದ 27% ಅನ್ನು ಒದಗಿಸುತ್ತಿದ್ದ ಜಾನುವಾರು ಆರ್ಥಿಕತೆಗೆ ಹಾನಿಯನ್ನುಂಟು ಮಾಡಿವೆ. ಈ ವಿವೇಚನಾರಹಿತ ಕ್ರಮವು ಡೈರಿ ರೈತರ ಮೇಲೆ ದ್ವಿಗುಣ ದುಷ್ಪರಿಣಾಮ ಬೀರಿದೆ– ಅವರ ಜಾನುವಾರು ಸಂಪತ್ತಿನಿಂದ ಆದಾಯವನ್ನು ಕಳೆದುಕೊಳ್ಳುವುದು ಮತ್ತು ನಿಂತಿರುವ ಬೆಳೆಗಳನ್ನು ನಾಶಪಡಿಸುವ ಬೀದಿ ದನಗಳ ಕಾಟ. ಕಾರ್ಯಾಗಾರವು ಆರ್‌ಎಸ್‌ಎಸ್–ಬಿಜೆಪಿ ನಾಯಕತ್ವದ ಕೋಮುವಾದಿ ಮನಸ್ಥಿತಿಯನ್ನು ಬಲವಾಗಿ ಖಂಡಿಸಿತು ಮತ್ತು ತಕ್ಷಣವೇ ಜಾನುವಾರು ವ್ಯಾಪಾರದ ಮಾರುಕಟ್ಟೆಗಳನ್ನು ತೆರೆಯಬೇಕು ಅಥವಾ ಆಯಾ ರಾಜ್ಯ ಸರ್ಕಾರಗಳು ಜಾನುವಾರುಗಳಿಗೆ ಮಾರುಕಟ್ಟೆ ಬೆಲೆಯನ್ನು ಪಾವತಿಸಲಿ ಮತ್ತು ಗೋಶಾಲೆಗಳಲ್ಲಿ ಅವುಗಳನ್ನು ಸಾಕಲಿ ಎಂದು ಒತ್ತಾಯಿಸಿದೆ..

ಈ ಮೊದಲ ಅಖಿಲ ಭಾರತ ಡೈರಿ ರೈತರ ಕಾರ್ಯಾಗಾರದಲ್ಲಿ 71 ಪ್ರತಿನಿಧಿಗಳು ಭಾಗವಹಿಸಿದ್ದರು. ಅಖಿಲ ಭಾರತ ಕಿಸಾನ್ ಸಭಾ ಮತ್ತು ಪಿ ಸುಂದರಯ್ಯ ಸ್ಮಾರಕ ಟ್ರಸ್ಟ್ ಜಂಟಿಯಾಗಿ ಈ ಕಾರ್ಯಾಗಾರವನ್ನು ಆಯೋಜಿಸಿದ್ದವು. ಕಾರ್ಯಾಗಾರವನ್ನು ಎಐಕೆಎಸ್ ಅಧ್ಯಕ್ಷ ಡಾ.ಅಶೋಕ್ ಧವಳೆ ಉದ್ಘಾಟಿಸಿದರು. ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಪಿ ಮೋಹನನ್ ಮಾಸ್ತರ್ ಮತ್ತು ಪನೋಳಿ ವಲ್ಸನ್ ಮಾತನಾಡಿದರು.

ಡಾ ಸುಧೀರ್ ಬಾಬು (ಕೇರಳ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯ(ಕೆವಿಎಎಸ್‌ಯು)ದ ರಿಜಿಸ್ಟ್ರಾರ್ ಡಾ ದಿನೇಶ್ ಅಬ್ರೋಲ್ (ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಇನ್ಸ್ಟಿಟ್ಯೂಟ್ ಫಾರ್ ಸ್ಟಡೀಸ್‌ನಲ್ಲಿ ಫ್ಯಾಕಲ್ಟಿ), ವಿಜಯಂಬಾ ಆರ್ (ಭಾರತೀಯ ಅಂಕಿಅಂಶ ಸಂಸ್ಥೆ), ಇಂದರ್‌ಜಿತ್ ಸಿಂಗ್, ಡಾ ಅಜಿತ್ ನವಳೆ, ನವಳೆ, ರಂಜಿನಿ ಬಸು, ನಿಧೀಶ ಜಾನಿ ವಿಲ್ಲಟ್ ಮತ್ತು ಪಿ ಕೃಷ್ಣಪ್ರಸಾದ್ ವಿವಿಧ ಅಧಿವೇಶನಗಳನ್ನು ಉದ್ದೇಶಿಸಿ ಮಾತನಾಡಿದರು. ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ತೆಲಂಗಾಣ, ಕರ್ನಾಟಕ, ತ್ರಿಪುರ, ಮಹಾರಾಷ್ಟ್ರ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಒಡಿಶಾ, ಹರಿಯಾಣ, ಗುಜರಾತ್, ಅಸ್ಸಾಂ, ಯುಪಿ ಮತ್ತು ಮಣಿಪುರದ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಅಖಿಲ ಭಾರತ ಡೈರಿ ರೈತರ ಒಕ್ಕೂಟ ರಚನೆ:

ಪಿ. ಕೃಷ್ಣಪ್ರಸಾದ್, ಅಜಿತ್ ನವಲೆ, ಪದ್ಮಕುಮಾರ್ ಮತ್ತು ಮಹಮ್ಮದ್ ಅಲಿ ಸಂಯೋಜಕರಾಗಿರುವ ಮತ್ತು ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಮತ್ತು ಡೈರಿ ಸಹಕಾರಿಗಳ ಪ್ರತಿನಿಧಿಗಳಿರುವ ಸಂಘಟನಾ ಸಮಿತಿಯನ್ನು ಕಾರ್ಯಾಗಾರವು ನಿರ್ಧರಿಸಿತು. ಅಖಿಲ ಭಾರತ ಹೈನುಗಾರರ ಒಕ್ಕೂಟದ ರಚನೆಯು ಡೈರಿ ಸಹಕಾರಿ ಸಂಘಗಳನ್ನು ಸುಧಾರಿಸಲು ಮತ್ತು ರೈತರ ಹಿತಾಸಕ್ತಿ ಕಾಪಾಡಲು ಮಧ್ಯಪ್ರೇಶಿಸುತ್ತದೆ, ಈ ವಲಯದಲ್ಲಿ ಹೋರಾಟಗಳನ್ನು ಮುಂದಕ್ಕೆ ಕೊಂಡೊಯ್ಯುತ್ತದೆ.

ಡೈರಿ ರೈತರ ದಿನ:

ನವೆಂಬರ್ 26, ವರ್ಗೀಸ್ ಕುರಿಯನ್ ಅವರ ಜನ್ಮದಿನವನ್ನು ಡೈರಿ ರೈತರ ದಿನವಾಗಿ ಆಚರಿಸಲು ಕಾರ್ಯಾಗಾರ ನಿರ್ಧರಿಸಿತು.

ಡೈರಿ ರೈತರ ಬೇಡಿಕೆ ಪಟ್ಟಿ:

ಒಂದು ಜ್ಞಾಪನ ಪತ್ರ ಮತ್ತು ಬೇಡಿಕೆಗಳ ಪಟ್ಟಿಯನ್ನು ಸಂಬಂಧಪಟ್ಟ ಸಚಿವಾಲಯಕ್ಕೆ ಸಲ್ಲಿಸಲಾಗುವುದು ಮತ್ತು ರಾಜ್ಯ ಮಟ್ಟದ ಸಂಘಟನೆಗಳನ್ನು ರಚಿಸಿ ಡೈರಿ ರೈತರ ಪ್ರಶ್ನೆಗಳ ಮೇಲೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಲು ಕಾರ್ಯಾಗಾರ ನಿರ್ಧರಿಸಿದೆ.

ಕೋಮುವಾದಿ ವಿಚಾರ ಸೇರ್ಪಡೆ ವಿರೋಧಿಸಿ ಎಸ್‌ಎಫ್‌ಐ ಪ್ರತಿಭಟನೆ......

ಪುಟ 4 ರಿಂದ

ನೀತಿಯ ಗುರಿಯೇ ಶಿಕ್ಷಣದ ಕೋಮುವಾದೀಕರಣ ಆಗಿರುವುದರಿಂದ ಎನ್‌ಇಪಿ–2020 ಜಾರಿ ಅಂದರೆ ರಾಜ್ಯದ ವಿದ್ಯಾರ್ಥಿಗಳು ಓದುವ ಪಠ್ಯಪುಸ್ತಕಗಳಲ್ಲಿ ಬಿಜೆಪಿ – ಆರ್‌ಎಸ್‌ಎಸ್ ಕೋಮುವಾದಿ ವಿಚಾರಗಳನ್ನು ತುಂಬುವುದಾಗಿದೆ. ಇದರ ಭಾಗವಾಗಿ ಪಠ್ಯಪುಸ್ತಕದಲ್ಲಿ 5ನೇ ಪಾಠವಾಗಿ "ನಿಜವಾದ ಆದರ್ಶ ಪುರುಷ ಯಾರಾಗಬೇಕು?" ಪಾಠವನ್ನು ಸೇರಿಸಲಾಗಿದೆ. ಈ ಆದರ್ಶ ಪುರುಷ ಸಂಘಪರಿವಾರದವರಿಗೆ ಮಾತ್ರ ಆದರ್ಶ. ಆದರೆ, ಇಡೀ ದೇಶಕ್ಕೆ ಭಗತ್ ಸಿಂಗ್, ಮಹಾತ್ಮ ಗಾಂಧಿ, ಅಂಬೇಡ್ಕರ್, ಬಸವಣ್ಣ ರಂತಹವರು ಆದರ್ಶ ಆಗಿದ್ದಾರೆ ಎಂದರು.

ಪ್ರಗತಿಪರ ಸಾಹಿತಿಗಳಾದ ಪಿ. ಲಂಕೇಶ್ ಅವರ "ಮೃಗ ಮಟ್ಟು ಸುಂದರಿ" ಮತ್ತು ಜಿ. ರಾಮಕೃಷ್ಣ ಅವರ "ಭಗತ್ ಸಿಂಗ್", ಸಾರಾ ಅಬೂಬಕ್ಕರ್ ಅವರ "ಯುದ್ಧ", ಎ.ಎನ್. ಮೂರ್ತಿ ರಾವ್ ಅವರ "ವ್ಯಾಘ್ರ ಕಥೆ" ಮತ್ತು ಶಿವಕೋಟ್ಯಾಚಾರ್ಯರ "ಸುಕುಮಾರ ಸ್ವಾಮಿ ಕಥೆ"ಯನ್ನುಪಾಠಗಳನ್ನು ಸಹ ಕೈಬಿಡಲಾಗಿದೆ.

ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಹೇಳಿದಂತೆ ಕೆ.ಬಿ. ಹೆಗ್ಡೆವಾರ್ ಅವರನ್ನು ಬರಹಗಾರರಾಗಿ ಆಯ್ಕೆ ಮಾಡಿದ್ದೇವೆ ಹೊರತು ಅವರ ಸಿದ್ಧಾಂತ ಅಥವಾ ಸಂಘಟನೆಯ ಆಧಾರದ ಮೇಲೆ ಅಲ್ಲ ಎಂದು ತಿಳಿಸಿದ್ದಾರೆ. ಆದರೆ, ಇದು ಒಂದು ಕಪಟಿಯಾಗಿ ಕೋಮುವಾದ ಹರಡಿಸುವ ಹೇಳಿಕೆ ಆಗಿದೆ. ಈ ಪಠ್ಯ ವಿಧ್ಯಾರ್ಥಿಗಳು ಓದಿದರೆ ನಾಡಿನ ಸೌಹಾರ್ದತೆ ನಾಶವಾಗಲಿದೆ. ಯಾವುದೇ ವ್ಯಕ್ತಿಯ ಬರಹ ಸೈದ್ಧಾಂತಿಕ ನೆಲೆಯಲ್ಲಿಯೇ ಗುರುತಿಸಬೇಕೆ ವಿನಹಃ ಅವರ ಬರಹಗಾರ ಎಂಬ ಹಣೆ ಪಟ್ಟೆಯಲ್ಲಿ ಅಲ್ಲಾ ಎಂಬುದು ಸ್ಪಷ್ಟ ಎಂದು ಎಸ್‌ಎಫ್‌ಐ ಆಗ್ರಹವಾಗಿದೆ.

ಅಷ್ಟಕ್ಕೂ ಈ ಹೆಗ್ಡೆವಾರ್ ಯಾವ ಸಾಮಾಜಿಕ ನೆಲೆಯಲ್ಲಿ ಅವರು ಸಾಹಿತ್ಯ ಕೃಷಿ ಮಾಡಿದ್ದಾರೆ ಎಂದು ತಿಳಿಸಬೇಕು ಎಂದು ಎಸ್‌ಎಫ್‌ಐ ಸಂಘಟನೆ ಸವಾಲು ಹಾಕಿದೆ. ಕನ್ನಡ ನಾಡಿನ ಹಲವು ಬರಹಗಾರರ ಪಠ್ಯ ನೀಡಬೇಕಿತ್ತು. ಬದಲಿಗೆ ಸಂಘಪರಿವಾರದ ಸಂಸ್ಥಾಪಕನನ್ನು ಪರಿಚಯಿಸಿ ಶಿಕ್ಷಣದ ಕೇಸರೀಕರಣ, ಕೋಮುವಾದೀಕರಣ ಮೂಲಕ ವಿಷ ಬೀಜ ಬಿತ್ತುವ ಕೆಲಸಕ್ಕೆ ರಾಜ್ಯ ಬಿಜೆಪಿ ಸರ್ಕಾರ ಕೈ ಹಾಕಿರುವುದಕ್ಕೆ ನಾಡಿನ ಪ್ರಜ್ಞಾವಂತ ಜನರ ವಿರೋಧವಿದೆ ಎಂದಿದ್ದಾರೆ.

ಹೆಗ್ಡೆವಾರ್ ಅವರ ಭಾಷಣ ಸಂಘ ಪರಿವಾರಕ್ಕೆ ಆದರ್ಶ ಅನಿಸಬಹುದು ಆದರೆ, ಈ ನಾಡಿನ ವಿದ್ಯಾರ್ಥಿಗಳಿಗಲ್ಲಾ ಎಂದಿರುವ ಎಸ್ ಎಫ್ ಐ ರಾಜ್ಯ ಸಮಿತಿಯು ಸರ್ಕಾರವು ತಕ್ಷಣವೇ ಪಠ್ಯವನ್ನು ಮೊದಲಿನಂತೆ ಯತಾವತ್ತಾಗಿ ಜಾರಿ ಮಾಡಬೇಕು. ಜಾರಿ ಮಾಡದಿದ್ದರೆ ಸಾರ್ವಜನಿಕರು, ದೇಶಪ್ರೇಮಿಗಳು, ಶಿಕ್ಷಣ ಪ್ರೇಮಿಗಳ, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು, ಪಾಲಕರನ್ನು ಒಳಗೊಂಡು ರಾಜ್ಯದಾದ್ಯಂತ ತೀವ್ರ ಹೋರಾಟಕ್ಕೆ ಮುಂದಾಗುತ್ತದೆ ಎಂದು ಎಚ್ಚರಿಸಿದ್ದಾರೆ.


ಪ್ರತಿಭಟನೆಯಲ್ಲಿ ಎಸ್‌ಎಸ್‌ಐ ರಾಜ್ಯ ಉಪಾಧ್ಯಕ್ಷ ದಿಲಿಪ್ ಶೆಟ್ಟಿ, ರಾಜ್ಯ ಪದಾಧಿಕಾರಿಗಳಾದ ಸೋಮಶೇಖರ್, ಶಿವಪ್ಪ, ದೊಡ್ಡ ಬಸವರಾಜ್, ಗಣೇಶ್, ಅಂಕಿತಾ, ರಾಥೋಡ್, ಬಸವರಾಜ್ ಭೋವಿ, ಆನಂದ್, ರಾಜಶ್ವೇರಿ, ಅಭಿಷೇಕ್, ಮಹೇಶ್ ಹಾಗೂ ವಿಧ್ಯಾರ್ಥಿಗಳು ಭಾಗವಹಿಸಿದ್ದರು.

ಹಲವು ಊರುಗಳಲ್ಲಿರುವ ಅರಳಿಕಟ್ಟೆ...

ಪುಟ 11 ರಿಂದ

ಗುಂಪುಗಳು ಅವರ ಹೆಸರಿನಲ್ಲೇ ಗುರುತಿಸಿಕೊಳ್ಳುವುದು ಮುಂದುವರೆಯಿತು. ಜೊತೆಗೆ ಅಳಿದ ಅಜ್ಜಿ ಯಾ ಮುತ್ತಜ್ಜಿಯರನ್ನು ನಿರ್ದಿಷ್ಟ ಸ್ಥಳದಲ್ಲಿ ಹುಗಿದು ಅವರಿಗೆ ಆಗಾಗ ಗೌರವ ಸಲ್ಲಿಸುವ ಪದ್ಧತಿ ಬೆಳೆಯಿತು. ಹೀಗೆ ಒಂದು ಮೂಲ ಘಟಕ ತಮ್ಮ ಅಜ್ಜಿ ಯಾ ಮುತ್ತಜ್ಜಿಯರ ಒಕ್ಕಲೆಂದು ಪರಿಗಣಿತವಾದರು. ತಮ್ಮ ಕುಲದ ಗುರುತಾದ ಅಜ್ಜಿಯರು ಆ ಕುಲ ದೇವತೆ ಎಂದು ಪೂಜಿಸಲ್ಪಟ್ಟರು. ತಮ್ಮನ್ನು ಕಾಪಾಡುವ ಈ "ಅಮ್ಮ" ದೇವತೆಗೆ, ಬೇಟೆಯೇ ಪ್ರಧಾನವಾದ ಆಹಾರವಾಗಿದ್ದ ಕಾಲದ "ಅಮ್ಮ" ನಿಗೆ ಇಷ್ಟವಾದ ಬೇಟೆಯನ್ನು ಆಹಾರವಾಗಿ ಸಮರ್ಪಿಸಿ, ಅವಳ ನೆನಪಿನಲ್ಲಿ ತಾವೂ ತಿಂದು ಸಂತಸಪಟ್ಟರು. "ಅಮ್ಮ" ಪೂಜೆ ಮತ್ತು ಜಾತ್ರೆಗಳು ಹೀಗೆ ಆರಂಭವಾದವು. "ಅಮ್ಮ" ಗಳ ಈ ಉಗಮವೂ ಕೂಡಾ ಮಕ್ಕಳ ಹುಟ್ಟಿನ ಪ್ರಕ್ರಿಯೆಯ ಬಗೆಗಿನ ಅರಿವಿನ ಕೊರತೆಯಿಂದ ತಾಯೊಬ್ಬಳೇ ಮಕ್ಕಳ ಹುಟ್ಟಿಗೆ ಕಾರಣ ಎಂಬ ಕಲ್ಪನೆಯಿಂದ ಮೂಡಿ ಬಂದದ್ದು ಎಂಬುದನ್ನು ತಿಳಿಸುತ್ತದೆ. ಮುಂದೆ ಮಕ್ಕಳ ಹುಟ್ಟಿಗೆ ಅಪ್ಪನ ಅವಶ್ಯಕತೆಯ ಅರಿವು ಮೂಡುವುದರ ಜೊತೆಗೆ ಪುರುಷಾಧಿಪತ್ಯ ಆರಂಭವಾದಾಗ ಜಗತ್ತಿನ ಹಲವು ಪ್ರದೇಶಗಳಲ್ಲಿ "ಅಮ್ಮ" ದೇವತೆಗಳ ಪೂಜೆಯ ಅಳಿವನ್ನು ಕಾಣುತ್ತೇವೆ. ಆದರೆ ದಕ್ಷಿಣ ಭಾರತದಲ್ಲಿ ಹಲವು "ಅಮ್ಮ"ಗಳ ಪೂಜೆ, ಉತ್ತರ ಭಾರತದಲ್ಲಿ ಕೆಲವೇ ಹೆಣ್ಣು ದೇವತೆಗಳ ಪೂಜೆ ಉಳಿದುಕೊಂಡು ಬಂದಿರುವುದರ ಹಿನ್ನೆಲೆಯನ್ನು ಸಂಶೋಧನೆಗೆ ಒಳಪಡಿಸಬೇಕು. ಹೀಗೆ ಮನುಷ್ಯರ ಅರಿವಿನ ಸ್ಫೋಟಗಳು ಅವರ ಬೆಳವಣಿಗೆಯ ಮಜಲುಗಳಾಗಿರುವಂತೆ, ಆ ಅರಿವಿನ ಮಿತಿ, ಕೊರತೆಗಳು ಹಲವು ಕಲ್ಪನೆ, ನಂಬಿಕೆಗಳ ಹುಟ್ಟಿಗೆ ಕಾರಣವಾಗಿವೆ. (ಅವಧಿಮ್ಯಾಗ್ ಇನ್, ಅರಿವಿನ ಬೆಡಗು ಬರಹ)

ಬಂಡವಾಳಶಾಹಿ ವ್ಯವಸ್ಥೆಯ ಇಬ್ಬಂದಿತನ ಮತ್ತು ಅಮಾನವೀಯತೆ



ಬಂಡವಾಳಶಾಹಿ ವ್ಯವಸ್ಥೆಯನ್ನು "ಅಮಾನವೀಯ" ಎನ್ನುವುದು ಅದು ಜನರಿಗಿಂತ ಮೊದಲು ಲಾಭಕ್ಕೇ ಆದ್ಯತೆ ನೀಡುವ ಕಾರಣಕ್ಕಾಗಿಯಷ್ಟೇ ಅಲ್ಲ. ಅದು ಎಲ್ಲ ಮನುಷ್ಯರ ಜೀವನವೂ ಸಮಾನ ಬೆಲೆಯುಳ್ಳದ್ದು ಎಂದು ನೋಡುವುದಿಲ್ಲ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ "ಇಬ್ಬಗೆಯ ಮಾನದಂಡಗಳನ್ನು" ಅದು ಅನುಸರಿಸುತ್ತದೆ ಎಂಬ ಅರ್ಥದಲ್ಲಿ. ಈ ಮೂಲಭೂತ ತಾರತಮ್ಯ ಅಥವಾ "ಇಬ್ಬಗೆಯ ಮಾನದಂಡಗಳನ್ನು" ಆಧರಿಸಿದ ಸಾಮಾಜಿಕ ವ್ಯವಸ್ಥೆಯು ಹುಟ್ಟಿಸಿದ ಅಸಮಾಧಾನವನ್ನು ಕೊರೊನಾ ಪಿಡುಗಿನ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣಬಹುದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಕಳೆದ ಎರಡು ವರ್ಷಗಳಿಂದಲೂ ನಮ್ಮ ಈ ಜಗತ್ತು ಎದುರಿಸುತ್ತಿರುವ ಕೊರೊನಾ ಸಾಂಕ್ರಾಮಿಕ ಪಿಡುಗು ಇನ್ನೂ ಕೊನೆಯಾಗಿಲ್ಲ. ಶತಮಾನದಲ್ಲಿ ಕಂಡರಿಯದ ಈ ಪಿಡುಗಿನಿಂದ ಈಗಾಗಲೇ ಒಂದೂವರೆ ಕೋಟಿ ಮಂದಿ ಜೀವ ಕಳೆದುಕೊಂಡಿದ್ದಾರೆಂದು ವಿಶ್ವ ಆರೋಗ್ಯ ಸಂಸ್ಥೆಯೇ ಹೇಳಿದೆ. ಈ ಪಿಡುಗು ಇಡೀ ಮನುಕುಲವನ್ನೇ ಒಂದು ಅಭೂತಪೂರ್ವ ಬಿಕ್ಕಟ್ಟಿಗೆ ತಳ್ಳಿದೆ. ಈ ಬಿಕ್ಕಟ್ಟನ್ನು ಪರಿಹರಿಸಲು ಪ್ರತಿಯೊಂದು ದೇಶದ ಸರ್ಕಾರವೂ ಅತಿ ಹೆಚ್ಚು ಶ್ರಮ ವಹಿಸಬೇಕಾದ ಅಗತ್ಯವಿದೆ. ಅದರಲ್ಲೂ ವಿಶೇಷವಾಗಿ, ಮೂರನೆಯ ಜಗತ್ತಿನ ದೇಶಗಳ ಸರ್ಕಾರಗಳು ಮಿತಿ ಮೀರಿ ಶ್ರಮಿಸಬೇಕಾಗಿದೆ. ಈ ದೇಶಗಳಲ್ಲಿ ಜನರು ಈ ಸಾಂಕ್ರಾಮಿಕ ಪಿಡುಗಿನಿಂದ ನರಳುವುದರ ಜೊತೆಗೆ ಅದಕ್ಕೆ ಸಂಬಂಧಿಸಿದ ಔಷದೋಪಚಾರ ಮತ್ತಿತರ ಕಾರಣಗಳಿಂದಾಗಿ ನಿರ್ಗತಿಕತನಕ್ಕೂ ಗುರಿಯಾಗುತ್ತಾರೆ.

ಈ ಪಿಡುಗಿನ ನಿವಾರಣೆಗಾಗಿ ಎಲ್ಲ ದೇಶಗಳ ಸರ್ಕಾರಗಳೂ ಆಸ್ಪತ್ರೆ ಸೌಲಭ್ಯಗಳನ್ನು ವಿಸ್ತರಿಸಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯ ಹಾಸಿಗೆಗಳನ್ನು ಸಿದ್ಧವಾಗಿಡಬೇಕಾಗುತ್ತದೆ. ರೋಗ–ಪರೀಕ್ಷಾ ಸೌಲಭ್ಯಗಳನ್ನು ನಿರ್ಮಿಸಬೇಕಾಗುತ್ತದೆ. ಲಸಿಕೀಕರಣ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಬೇಕಾಗುತ್ತದೆ ಮತ್ತು ಲಸಿಕೆಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ, ಇತ್ಯಾದಿ. ಜೊತೆಯಲ್ಲಿ, ನೇರ ಹಣ ವರ್ಗಾವಣೆಯ ಮೂಲಕ ಜನರಿಗೆ ಪರಿಹಾರವನ್ನು ಸರ್ಕಾರಗಳು ಒದಗಿಸಬೇಕಾಗುತ್ತದೆ. ಕಿರು ಉತ್ಪಾದಕರಿಗೆ ಅಗತ್ಯ ಸಹಾಯ ಒದಗಿಸಬೇಕಾಗುತ್ತದೆ. ಈ ಎಲ್ಲ ಕಾರ್ಯಗಳಿಗೂ ಸರ್ಕಾರಗಳು ಅಪಾರ ಹಣ ಖರ್ಚು ಮಾಡಬೇಕಾಗುತ್ತದೆ. ಆದರೆ, ಸಾಂಕ್ರಾಮಿಕದಿಂದಾಗಿ ಉತ್ಪಾದನಾ ಚಟುವಟಿಕೆಗಳು ಕುಂಠಿತಗೊಳ್ಳುತ್ತವೆ ಮತ್ತು ಅದರೊಂದಿಗೆ ತೆರಿಗೆಗಳ ಹಾಲಿ ದರಗಳ ಮಟ್ಟದಲ್ಲಿ ಸರ್ಕಾರದ ಆದಾಯವೂ ಕಡಿಮೆಯಾಗುತ್ತದೆ. ಸಂಪತ್ತಿನ ತೆರಿಗೆ ದರಗಳನ್ನು ಹೆಚ್ಚಿಸದಿದ್ದರೆ, ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ನವ–ಉದಾರವಾದದ ಕಟ್ಟುಪಾಡುಗಳಾದ "ವಿತ್ತೀಯ ಹೊಣೆಗಾರಿಕೆ" ಕಾಯ್ದೆಯ ಮೂಲಕ ಹೇರಿದ ನಿರ್ಬಂಧಗಳನ್ನು ಉಲ್ಲಂಘಿಸುವ ಮತ್ತು "ಮಿತವ್ಯಯ" ಹಣಕಾಸು ನೀತಿಯನ್ನು ತ್ಯಜಿಸುವ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಸರ್ಕಾರಗಳಿಗೆ ಅನಿವಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಿಜಕ್ಕೂ ಆಗಿರುವುದೇನು ಎಂಬುದನ್ನು ನೋಡೋಣ.

ಜಾಗತಿಕ ಅರ್ಥವ್ಯವಸ್ಥೆಯ ನಿಧಾನಗತಿಯಿಂದಾಗಿ, ಮೂರನೇ ಜಗತ್ತಿನ ದೇಶಗಳ ರಫ್ತುಗಳು ತೊಂದರೆಗೀಡಾದವು. ಖಚಿತವಾಗಿ ಹೇಳುವುದಾದರೆ, ಜಿಡಿಪಿ ಬೆಳವಣಿಗೆಯ ನಿಧಾನಗತಿಯಿಂದಾಗಿ ಈ ದೇಶಗಳ ಆಮದುಗಳೂ ಕುಗ್ಗಿದವು. ಜಿಡಿಪಿಯ ಇಳಿಕೆಯ ಪ್ರಮಾಣಕ್ಕೆ ತಕ್ಕಂತೆ ರಫ್ತು ಮತ್ತು ಆಮದುಗಳೂ ಸಹ ಅದೇ ಪ್ರಮಾಣದಲ್ಲಿ ಇಳಿಕೆಯಾಗಿವೆ ಮತ್ತು ವ್ಯಾಪಾರ ಕೊರತೆ ಅಥವಾ ವ್ಯಾಪಾರ ಹೆಚ್ಚುವರಿ ಇವೂ ಸಹ ಜಿಡಿಪಿಗೆ ತಕ್ಕ ಪ್ರಮಾಣದಲ್ಲಿವೆ ಎಂದು ಭಾವಿಸಿಕೊಂಡರೂ ಸಹ, ಜಿಡಿಪಿಯ ಅನುಪಾತಕ್ಕೆ ಹೋಲಿಸಿದರೆ, ಬಾಕಿ ಇರುವ ಬಾಹ್ಯ ಸಾಲಗಳ ಪ್ರಮಾಣವು ಸಾಪೇಕ್ಷವಾಗಿ ಹೆಚ್ಚಿನ ಮಟ್ಟದಲ್ಲಿರುತ್ತದೆ. ಹೊರಗಿನ ಈ ಸಾಲಗಳ ಮರುಪಾವತಿಯನ್ನು ಸೂಕ್ತವಾಗಿ ಮುಂದೂಡಬೇಕಾಗುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಜಿಡಿಪಿಯ ಅನುಪಾತದಲ್ಲಿ ಎಲ್ಲ ದೇಶಗಳ ವ್ಯಾಪಾರದ ಹರಿವುಗಳು ಸರ್ವ ವ್ಯಾಪಿ ಕೊರೊನಾ ಪಿಡುಗು ಹರಡುವ ಮೊದಲು ಇದ್ದ ಪ್ರಮಾಣದಲ್ಲೇ ಇದ್ದರೂ ಸಹ, ಜಿಡಿಪಿಯ ಬೆಳವಣಿಗೆಯೇ ಸ್ಥಗಿತವಾಗಿದ್ದ ಕಾರಣದಿಂದಾಗಿ, ಇಳಿಕೆಯಾದ ಜಿಡಿಪಿಯ ಗಾತ್ರಕ್ಕೆ ಹೋಲಿಸಿದರೆ, ಅನುಪಾತದ ಲೆಕ್ಕಾಚಾರದಲ್ಲಿ, ಬಾಹ್ಯ ಸಾಲಗಳ ಗಾತ್ರವು ದೊಡ್ಡದಾಗಿ ಕಾಣುತ್ತದೆ. ಹಾಗಾಗಿ, ಸಾಲದ ಹೊರೆ ದೊಡ್ಡದಾಗುತ್ತದೆ. ಆದ್ದರಿಂದ, ಮೂರನೇ ಜಗತ್ತಿನ ದೇಶಗಳು ತಮ್ಮ ಸಾಲವನ್ನು ಮರುಪಾವತಿ ಮಾಡಲು ಹೆಚ್ಚಿನ ಕಾಲಾವಕಾಶ ಕೊಡಬೇಕಾಗುತ್ತದೆ.



ಕಲೆ: ಲಾಬನಿ, ಕೃಪೆ: ಪಿಎಆರ್‌ಐ

"ಮಿತವ್ಯಯ" ಸಲಹೆ

ಇದನ್ನು ಕಾರ್ಯಗತ ಮಾಡಬಹುದಾದ ಸರಳ ಮಾರ್ಗವೆಂದರೆ, ಒಂದು ನಿಗದಿತ ಕಾಲಾವಧಿಯವರೆಗೆ ಸಾಲ ವಸೂಲಾತಿಯನ್ನು ಮುಂದೂಡಬೇಕಾಗುತ್ತದೆ (ಮೊರಟೋರಿಯಂ). ಸಮಕಾಲೀನ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಕಾರ್ಯಭಾರವನ್ನು ನಿರ್ವಹಿಸಬಹುದಾದ ಸಂಸ್ಥೆ ಎಂದರೆ, ಐಎಂಎಫ್. ಬಿಕ್ಕಟ್ಟಿನ ಸಂದರ್ಭದಲ್ಲಿ "ಮಿತವ್ಯಯ" ನೀತಿಯನ್ನು ಕೈಬಿಡುವಂತೆ ಮತ್ತು ಜನರ ಆರೋಗ್ಯ ಸಂರಕ್ಷಣೆಗಾಗಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗಾಗಿ ಹೆಚ್ಚು ಹಣ ಖರ್ಚು ಮಾಡುವಂತೆ ಎಲ್ಲ ದೇಶಗಳನ್ನೂ ಐಎಂಎಫ್ ಪ್ರೋತ್ಸಾಹಿಸಬೇಕಾಗುತ್ತದೆ. ಹಾಗೆ ನೋಡಿದರೆ, ಐಎಂಎಫ್‌ನ ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜೀವಾ ಅವರು ಈ ಬಿಕ್ಕಟ್ಟಿನ ಸಂದರ್ಭದಲ್ಲಿ "ಮಿತವ್ಯಯ" ನೀತಿಯನ್ನು ತ್ಯಜಿಸುವಂತೆ ಐಎಂಎಫ್‌ನ ಕೆಲವು ಸದಸ್ಯ ದೇಶಗಳಿಗೆ ಆಗಾಗ ಹೇಳುತ್ತಾ ಬಂದಿದ್ದಾರೆ. ಅವರ ಈ ಹೇಳಿಕೆಯ ಮೂಲಕ ಐಎಂಎಫ್ ಕೊನೆಗಾದರೂ ಕೊರೊನಾ ಪಿಡುಗು ಇಡೀ ಮಾನವಕುಲಕ್ಕೆ ಒಡ್ಡಿದ ಬೆದರಿಕೆಯ ಅಗಾಧತೆಯನ್ನು ಗಮನಿಸಿದೆಯಲ್ಲಾ ಎಂಬ ಸಮಾಧಾನದ ಭಾವನೆ ಮೂಡುತ್ತದೆ. ಉದಾಹರಣೆಗೆ, "ಆರ್ಥಿಕ ಚೇತರಿಕೆಯನ್ನು ಉಸಿರುಗಟ್ಟಿಸುವ ಬಲವುಳ್ಳ ಮಿತವ್ಯಯ ನೀತಿಗಳಿಂದ ಅಪಾಯವಾಗದಂತೆ" ನೋಡಿಕೊಳ್ಳುವಂತೆ ಕ್ರಿಸ್ಟಲಿನಾ ಜಾರ್ಜೀವಾ ಅವರು ಇತ್ತೀಚೆಗೆ ಯುರೋಪಿನ ದೇಶಗಳನ್ನು ಆಗ್ರಹಿಸಿದ್ದರು.


ಆದರೆ, ವಾಸ್ತವ ಪರಿಸ್ಥಿತಿ ಬೇರೆಯೇ ಇದೆ ಎಂದು ತೋರುತ್ತದೆ. ಕೊರೊನಾ ಪಿಡುಗಿನ ಎರಡನೇ ವರ್ಷದಲ್ಲಿ ಮೂರನೇ ಜಗತ್ತಿನ ದೇಶಗಳೊಂದಿಗೆ ಐಎಂಎಫ್ ಸಹಿ ಹಾಕಿದ 15 ಸಾಲ ಒಪ್ಪಂದಗಳನ್ನು ಆಕ್ಸ್‌ಫ್ಯಾಮ್ ಎಂಬ ಸಂಸ್ಥೆಯು ವಿಶ್ಲೇಷಣೆಗೊಳಪಡಿಸಿದೆ. ಇತ್ತೀಚೆಗೆ ಪ್ರಟಿಸಿರುವ ಈ ವಿಶ್ಲೇಷಣೆಯ ಪ್ರಕಾರ, 15 ಸಾಲ ಒಪ್ಪಂದಗಳ ಪೈಕಿ 13 ಪ್ರಕರಣಗಳಲ್ಲಿ "ಮಿತವ್ಯಯ" ನೀತಿಯನ್ನು ಪಾಲಿಸುವಂತೆ ಒತ್ತಿಹೇಳಲಾಗಿದೆ. ಇಂತಹ "ಮಿತವ್ಯಯ" ಕ್ರಮಗಳಲ್ಲಿ, ಆಹಾರ ಮತ್ತು ಇಂಧನದ ಮೇಲೆ ತೆರಿಗೆ ವಿಧಿಸುವ ಮತ್ತು ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಂತಹ ಮೂಲಭೂತ ಸೇವೆಗಳಿಗಾಗಿ ಸರ್ಕಾರದ ಖರ್ಚು ವೆಚ್ಚಗಳ ಕಡಿತಗಳು ಸೇರಿವೆ. ಸಾಲ ಸಂಬಂಧವಾಗಿ ಮಾತುಕತೆಗಳು ನಡೆಯುತ್ತಿರುವ ಇನ್ನೂ ಆರು ದೇಶಗಳ ವಿಷಯದಲ್ಲೂ ಸಹ, ಇದೇ "ಮಿತವ್ಯಯ" ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ಐಎಂಎಫ್ ಒತ್ತಾಯಿಸುತ್ತಿದೆ.

ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ

"ಮಿತವ್ಯಯ" ನೀತಿಯನ್ನು ಪಾಲಿಸುವಂತೆ ಐಎಂಎಫ್‌ನ ಈ ಒತ್ತಾಯವನ್ನು ಒಂದು ಅಪವಾದವೆಂದು ತಳ್ಳಿಹಾಕಲಾಗದು. ಇದಕ್ಕೂ ಮೊದಲು ಅಕ್ಟೋಬರ್ 12, 2020 ರಂದು ಆಕ್ಸ್‌ಫ್ಯಾಮ್ ಸಂಸ್ಥೆಯು, ಕೊರೊನಾ ಪಿಡುಗನ್ನು ಒಂದು ಸರ್ವವ್ಯಾಪಿ ಸಾಂಕ್ರಾಮಿಕವೆಂದು ಘೋಷಣೆ ಮಾಡಿದ ಮಾರ್ಚ್ 2020 ರಿಂದ 91 ಸಾಲಗಳನ್ನು ಮಂಜೂರು ಮಾಡುವ ಬಗ್ಗೆ ಐಎಂಎಫ್ 81 ದೇಶಗಳೊಂದಿಗೆ ಮಾತುಕತೆ ನಡೆಸಿದೆ ಎಂದು ವರದಿ ಮಾಡಿತ್ತು. ಈ 91 ಸಾಲಗಳ ಪೈಕಿ 76 ರಲ್ಲಿ(ಅಂದರೆ, 84% ಸಾಲ ಒಪ್ಪಂದಗಳಲ್ಲಿ), "ಮಿತವ್ಯಯ" ಪಾಲನೆಯ ಬಗ್ಗೆ ಒತ್ತಾಯವಿತ್ತು. ಈ ಒತ್ತಾಯವು ಕೊರೊನಾದಿಂದ ನರಳುವ ಬಡ ಜನರ ಜೀವನವನ್ನು ಕಷ್ಟಮಯವಾಗಿಸುವುದು ಮಾತ್ರವಲ್ಲದೆ ಆರೋಗ್ಯ ರಕ್ಷಣೆಯ ವೆಚ್ಚಗಳ ಕಡಿತಕ್ಕೂ ಕಾರಣವಾಗುತ್ತದೆ ಎಂಬುದಂತೂ ಸ್ಪಷ್ಟವೇ. ಆದರೂ, ಐಎಂಎಫ್‌ನ ಈ ಒತ್ತಾಯವು ವಿಶ್ವದ ಜನರು ಅದರ ಕನಿಷ್ಠ ಭಾರವನ್ನೂ ಹೊರಲಾರದ ಕೊರೊನಾ ಪಿಡುಗಿನ ಸಮಯದಲ್ಲಿಯೂ ಸಹ ಎಂದಿನಷ್ಟೇ ಬಲವಾಗಿ ಮುಂದುವರಿದಿತ್ತು. ಈ ಸನ್ನಿವೇಶದಲ್ಲಿ "ಮಿತವ್ಯಯ"ದಿಂದ ನಿರ್ಬಂಧಿಸಲ್ಪಡಬಾರದು ಎಂದು ಯೂರೋಪಿನ ದೇಶಗಳಿಗೆ ಕ್ರಿಸ್ಟಲಿನಾ ಜಾರ್ಜೀವಾ ನೀಡಿದ ಸಲಹೆ ಮತ್ತು "ಮಿತವ್ಯಯ" ನೀತಿಯನ್ನು ಅಳವಡಿಸಿಕೊಳ್ಳವಂತೆ ಮೂರನೇ ಜಗತ್ತಿನ ದೇಶಗಳನ್ನು ಒತ್ತಾಯಿಸುವ ಕ್ರಮಗಳು, ಇವುಗಳ ನಡುವಿನ ತಾರತಮ್ಯವನ್ನು ಆಕ್ಸ್‌ಫ್ಯಾಮ್ ಎತ್ತಿ ತೋರಿಸಿದೆ ಮತ್ತು ಈ ನಡತೆಯ ಆಧಾರದ ಮೇಲೆ, ಐಎಂಎಫ್ "ಇಬ್ಬಂದಿ ನೀತಿ"ಯನ್ನು ಅನುಸರಿಸುತ್ತಿದೆ ಎಂದು ಆಕ್ಸ್‌ಫ್ಯಾಮ್ ಆರೋಪಿಸಿದೆ. ಮುಂದುವರಿದ ದೇಶಗಳಿಗೆ ಬೆಣ್ಣೆ ಮತ್ತು ಮೂರನೇ ಜಗತ್ತಿನ ದೇಶಗಳಿಗೆ ಸುಣ್ಣದ ರೀತಿಯ ತಾರತಮ್ಯವು ಯಾವತ್ತೂ ಅಸಹ್ಯಕರವೇ. ಆದರೆ, ಇಡೀ ಮನುಕುಲವನ್ನೇ ಬಿಕ್ಕಟ್ಟಿಗೆ ತಳ್ಳಿದ ಕೊರೊನಾ ಪಿಡುಗಿನ ಸಂದರ್ಭದಲ್ಲಿ ತೋರಿಸಿದ ಈ ತಾರತಮ್ಯವು ಇನ್ನೂ ಹೆಚ್ಚು ಅಸಹ್ಯಕರವಾಗುತ್ತದೆ.

ಆಕ್ಸ್‌ಫ್ಯಾಮ್‌ನ ಈ ವಿಶ್ಲೇಷಣೆಯಲ್ಲಿ ಕಾಣೆಯಾದ ಅಂಶವೆಂದರೆ, ಐಎಂಎಫ್‌ನ ನಡವಳಿಕೆಯಲ್ಲಿ ವ್ಯಕ್ತವಾಗುವ ಇಬ್ಬಗೆಯ ಮಾನದಂಡಗಳು ಬಂಡವಾಳಶಾಹಿಯ ಸ್ವಭಾವದಲ್ಲಿಯೇ ಅಂತರ್ಗತವಾಗಿವೆ ಎಂಬುದು. ವಾಸ್ತವವಾಗಿ, ಒಂದು ವರ್ಗ ಸಮಾಜವು ಇಬ್ಬಗೆಯ ಮಾನದಂಡಗಳನ್ನು ಅನಿವಾರ್ಯವಾಗಿ ಒಳಗೊಂಡಿರುತ್ತದೆ: ಒಬ್ಬ ಕಾರ್ಮಿಕನು ಒಂದು ಬ್ಯಾಂಕಿಗೆ ಹೋಗಿ ಅರ್ಜಿ ಸಲ್ಲಿಸಿ ಸಾಲ ಪಡೆಯುವುದು ಸಾಧ್ಯವಿಲ್ಲ. ಆದರೆ, ಒಬ್ಬ ಶ್ರೀಮಂತನು ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಆತ ಸಾಲ ಪಡೆಯುವುದು ಖಚಿತವೇ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಬ್ಬ ವ್ಯಕ್ತಿಯು "ಹೊರಗಿನ" ಮೂಲಗಳಿಂದ ಪಡೆಯಬಹುದಾದ ಬಂಡವಾಳದ ಪ್ರಮಾಣವು ಅವನು ಹೊಂದಿರುವ "ಸ್ವಂತ" ಬಂಡವಾಳದ ಪ್ರಮಾಣವನ್ನು ಅವಲಂಬಿಸಿರುತ್ತದೆ. ಹಾಗಾಗಿಯೇ,

ಪುಟ 14 ಕ್ಕೆ



ಃಬಂಡವಾಳಶಾಹಿ ಒಂದು ಕಾಯಿಲೆಯೇ?–ಚಿತ್ರಕೃಪೆ: ಮಂತ್ಲಿ ರಿವ್ಯೂ

ಬಂಡವಾಳಶಾಹಿ ವ್ಯವಸ್ಥೆಯ ಇಬ್ಬಂದಿತನ.......... ಪುಟ 13 ರಿಂದ

ಒಬ್ಬನು ಬಂಡವಾಳಶಾಹಿಯಾಗಲು ಅವನು ಬಂಡವಾಳವನ್ನು ಹೊಂದಿರುವುದು ಒಂದು ಅಗತ್ಯ ಷರತ್ತಾಗುತ್ತದೆ. ಅದಲ್ಲದಿದ್ದರೆ, ಯಾರು ಬೇಕಾದರೂ ಬಂಡವಾಳಶಾಹಿಯಾಗಬಹುದು, ವರ್ಗ ವಿಭಜನೆ ಇಲ್ಲದ ಪರಿಪೂರ್ಣವಾದ ಸಾಮಾಜಿಕ ಚಲನಶೀಲತೆ ಇರುವಲ್ಲಿ.

ಜೋಸೆಫ್ ಶಂಪೀಟರ್ ಅವರಂಥಹ ಬಂಡವಾಳಶಾಹಿಯ ಬೌದ್ಧಿಕ ಸಮರ್ಥಕರು, ಲಾಭದ ಮೂಲವನ್ನು ಉತ್ಪಾದನಾ ಸಾಧನಗಳ ಮಾಲೀಕತ್ವದಲ್ಲಿ ಅಲ್ಲ, ಬದಲಿಗೆ, ಬಂಡವಾಳಗಾರರು ಹೊಂದಿರುವ ಒಂದು ವಿಶೇಷ ಪ್ರತಿಭೆಯಲ್ಲಿ ಕಾಣಬಹುದು ಎಂದು ಪ್ರತಿಪಾದಿಸಿದ್ದರು. ಮತ್ತು, ಈ ವಿಶೇಷ ಪ್ರತಿಭೆಯನ್ನು ಅವರು ನಾವೀನ್ಯತೆ ಎಂದು ಕರೆದರು. ಅಂತಹ ನವೀನತೆಯನ್ನು ಹೊಂದಿರುವ ಯಾರಾದರೂ, ಅಂದರೆ – ಒಂದು ಹೊಸ ಉತ್ಪಾದನಾ ಪ್ರಕ್ರಿಯೆ ಅಥವಾ ಒಂದು ಹೊಸ ಉತ್ಪನ್ನವನ್ನು ತಯಾರಿಸಲು ಬಳಸಬಹುದಾದ ಕಲ್ಪನೆಯನ್ನು ಹೊಂದಿರುವ ಯಾರಾದರೂ, ಬ್ಯಾಂಕುಗಳಿಂದ ಸಾಲವನ್ನು ಪಡೆಯಬಹುದು ಮತ್ತು ತಮ್ಮ ವ್ಯವಹಾರವನ್ನು ಸ್ಥಾಪಿಸಬಹುದು ಎಂಬುದನ್ನು ಪ್ರತಿಪಾದಿಸಿದ್ದರು. ಆದರೆ, ಸಮಾಜದಲ್ಲಿರುವ ವರ್ಗ ವಿಭಜನೆಗಳನ್ನು ಮರೆಮಾಚುವ ಇಂತಹ ಪ್ರಯತ್ನಗಳು ಸ್ಪಷ್ಟವಾಗಿ ತಪ್ಪೇ ತಪ್ಪು. ಒಬ್ಬ ಕೃಷಿ ಕಾರ್ಮಿಕನು, ಅವನು ಎಷ್ಟೇ ನಾವೀನ್ಯತೆಯನ್ನು ಹೊಂದಿರಲಿ, ಒಂದು ವ್ಯವಹಾರವನ್ನು ಅವನು ಸ್ಥಾಪಿಸುವುದು ಸಾಧ್ಯವಿಲ್ಲ. ಅವನ ಈ ಆಲೋಚನೆಯನ್ನು ಒಬ್ಬ ಶ್ರೀಮಂತನು ಕದಿಯಬಹುದು, ಅಷ್ಟೇ!

ಇಬ್ಬಗೆಯ ಮಾನದಂಡಗಳು

ಅದೇ ರೀತಿಯಲ್ಲಿ, ದೇಶಗಳನ್ನು ಎರಡು ವಿಭಿನ್ನ ವರ್ಗಗಳಾಗಿ ವಿಂಗಡಿಸಿರುವ ಸಾಮ್ರಾಜ್ಯಶಾಹಿ ಜಗತ್ತಿನಲ್ಲಿ – ಮುಂದುವರೆದ(ಮೆಟ್ರೋಪಾಲಿಟನ್) ಮತ್ತು ಅಂಚಿನಲ್ಲಿರುವ ದೇಶಗಳು – ಮೆಟ್ರೋಪಾಲಿಟನ್ ಬ್ಯಾಂಕುಗಳು ಇಂತಹ ದೇಶಗಳಿಗೆ ಸಾಲ ಕೊಡಲು ಹಿಂಜರಿಯುತ್ತವೆ. ಸಾಲ ಕೊಡುವ ವಿಷಯದಲ್ಲಿ "ಇಬ್ಬಗೆಯ ಮಾನದಂಡಗಳು" ಇರುತ್ತವೆ. ಮೆಟ್ರೋಪಾಲಿಟನ್ ದೇಶಗಳ ಹಣಕಾಸು ಸಂಸ್ಥೆಗಳು ಪ್ರಾಬಲ್ಯ ಹೊಂದಿರುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಒಬ್ಬ ಪಾಲಕನಾಗಿ ಐಎಂಎಫ್, ಸಾಲಗಳನ್ನು ಮಂಜೂರು ಮಾಡುವಲ್ಲಿ ಮತ್ತು ಸಾಲಗಳನ್ನು ಮರಳಿ ಪಡೆಯುವ ಷರತ್ತುಗಳನ್ನು ವಿಧಿಸುವಲ್ಲಿ ಈ "ಇಬ್ಬಗೆಯ ಮಾನದಂಡ"ಗಳನ್ನೇ ಪಾಲಿಸಿಕೊಂಡೇ ಬರಬೇಕಾಗುತ್ತದೆ. ಆದ್ದರಿಂದ, ಐಎಂಎಫ್ ಅನುಸರಿಸುವ "ಇಬ್ಬಗೆಯ ಮಾನದಂಡ"ಗಳ ಬಗ್ಗೆ ಆಕ್ಸ್‌ಫ್ಯಾಮ್‌ನ ಟೀಕೆಯು, ಐಎಂಎಫ್ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ನೋಡಿಕೊಳ್ಳುವ ಒಂದು ಬಂಡವಾಳಶಾಹಿ ಸಂಸ್ಥೆಯಾಗಿರದೆ, ಒಂದು ಅರ್ಥಪೂರ್ಣ ಮಾನವೀಯ ಸಂಸ್ಥೆಯಾಗಿದ್ದು, ಮಾನವಕುಲದ ಹಿತಾಸಕ್ತಿಗಳನ್ನು ನೋಡಿಕೊಳ್ಳುತ್ತದೆ ಎಂಬ ತಪ್ಪು ಕಲ್ಪನೆಯನ್ನು ಆಧರಿಸಿದೆ.

ಹೀಗೆ, ಐಎಂಎಫ್‌ನ ನಡವಳಿಕೆಯು ಬಂಡವಾಳಶಾಹಿಯ ಸ್ವಭಾವವನ್ನೇ, ಅದರ ಮೂಲಭೂತ ಅಮಾನವೀಯತೆಯನ್ನೇ ಪ್ರತಿಬಿಂಬಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯನ್ನು "ಅಮಾನವೀಯ" ಎಂದು ನಾನು ಕರೆಯುವಾಗ, ಅದು ಜನರಿಗಿಂತ ಮೊದಲು ಲಾಭಕ್ಕೇ ಆದ್ಯತೆ ನೀಡುವ ಕಾರಣದಿಂದ ಅಲ್ಲ. ಎಲ್ಲ ಮನುಷ್ಯರ ಜೀವನವೂ ಸಮಾನ ಬೆಲೆಯುಳ್ಳದ್ದು ಎಂದು ನೋಡುವುದಿಲ್ಲ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ "ಇಬ್ಬಗೆಯ ಮಾನದಂಡಗಳನ್ನು" ಅದು ಅನುಸರಿಸುತ್ತದೆ ಎಂಬ ಅರ್ಥದಲ್ಲಿ. ಉದಾಹರಣೆಗೆ, ಮಾಲಿನ್ಯಕಾರಕ ಕೈಗಾರಿಕೆಗಳನ್ನು ಮೆಟ್ರೋಪಾಲಿಟನ್ ದೇಶಗಳಿಂದ ಅಂಚಿನ ದೇಶಗಳಿಗೆ ಸ್ಥಳಾಂತರಿಸಬೇಕು ಎಂಬ ಬೇಡಿಕೆಯನ್ನು ಎತ್ತಿದಾಗ, ಈ ಬೇಡಿಕೆಯ ಹಿಂದಿರುವ ಸ್ಪಷ್ಟ ಭಾವನೆಯೆಂದರೆ, ಅಂಚಿನ ದೇಶಗಳ ಮನುಷ್ಯರ ಜೀವನವು ಮುಂದುವರೆದ ದೇಶಗಳ ಮನುಷ್ಯರ ಜೀವನದಷ್ಟು ಮುಖ್ಯವಲ್ಲ ಎಂಬುದು.

ಈ ಮೂಲಭೂತ ತಾರತಮ್ಯ ಅಥವಾ "ಇಬ್ಬಗೆಯ ಮಾನದಂಡಗಳನ್ನು" ಆಧರಿಸಿದ ಸಾಮಾಜಿಕ ವ್ಯವಸ್ಥೆಯು ಹುಟ್ಟಿಸಿದ ಅಸಮಾಧಾನವನ್ನು ಕೊರೊನಾ ಪಿಡುಗಿನ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣಬಹುದು. ನಾವು ಎಲ್ಲ ಮನುಷ್ಯರ ಜೀವನದ ಬಗ್ಗೆಯೂ ಕಾಳಜಿ ವಹಿಸಬೇಕು ಎಂಬುದನ್ನು ಮಾನವೀಯತೆ ಮತ್ತು ಜಾಣತನಗಳೆರಡೂ ಬಯಸುತ್ತವೆ. ಆದರೆ, ಮನುಷ್ಯ–ಮನುಷ್ಯರ ನಡುವೆ ತಾರತಮ್ಯ ಮಾಡುವ ಅಥವಾ ಕೆಲವರ ಜೀವಗಳಿಗೆ ಮಾತ್ರ ಬೆಲೆ ಕೊಡುವ (ಮತ್ತು ಇತರರಿಗಲ್ಲ ಎಂದು ಪರಿಗಣಿಸುವ) ಸಾಮಾಜಿಕ ವ್ಯವಸ್ಥೆಯ ಅಮಾನವೀಯತೆ ಮತ್ತು ಅತಾರ್ಕಿಕತೆ ಎದ್ದು ಕಾಣುತ್ತದೆ.

‘ನವ ಭಾರತ’ದ ಬುಲ್ಡೋಜರ್ ಹತ್ತಿ ಬರುತ್ತಿದೆ ದ್ವೇಷ, ರಕ್ತಪಾತ....... ಪುಟ 16 ರಿಂದ

ಇರುವೆಡೆಗಳಲ್ಲಿ, ಘರ್ಷಣೆಗಳಾದ ಪ್ರದೇಶಗಳಲ್ಲಿ ಬುಲ್ಡೋಜರ್‌ಗಳನ್ನು ಹೊರತರಲು ಕರೆ ನೀಡಲಾಗಿತ್ತು – ಬಹುತೇಕ ಮುಸ್ಲಿಮರ ಮನೆಗಳನ್ನು ಗುರಿಯಾಗಿಸಿ ದಾಳಿ ಮಾಡಲಾಯಿತು. ಈ ಗಡಿಬಿಡಿಯಲ್ಲಿ ಕೆಲವು ಅಮಾಯಕ ಬಹುಸಂಖ್ಯಾಕ ಸಮುದಾಯದವರ ಮನೆಗಳನ್ನೂ ಬೀಳಿಸಿ ಹಾಕಲಾಯಿತು.

2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ದೇಶದಲ್ಲಿ 5,417 ಕೋಮು ಹಿಂಸಾಚಾರದ ಪ್ರಕರಣಗಳು ನಡೆದಿವೆ. ಇವುಗಳಲ್ಲಿ 9,078 ಜನರು ಗಾಯಗೊಂಡರು. ಕೊನೇಪಕ್ಷ 494 ಜನರು ಸಾವಿಗೆ ತುತ್ತಾದರು. ಇವು 2020 ರ ವರೆಗೆ ನಡೆದ ಘಟನೆಗಳು, ಪೋಲಿಸರೇ ದಾಖಲಿಸಿರುವ ‘ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೋ’(ಎನ್‌ಸಿಆರ್‌ಬಿ) ವರದಿ ಮಾಡಿದ ಸಂಗತಿಗಳಾಗಿವೆ. ಇಂತಹ ಪ್ರಕರಣಗಳನ್ನು ದಾಖಲಿಸುವಲ್ಲಿ ಮತ್ತು ವರದಿ ಮಾಡುವಲ್ಲಿ ಹಲವು ನ್ಯೂನತೆಗಳಿವೆ. ಸಣ್ಣ ಪ್ರಕರಣಗಳು ಹಾಗೂ ದೂರದ ಸ್ಥಳಗಳ ಘಟನೆಗಳು ಕಡೆಗಣಿಸಲ್ಪಡುತ್ತವೆ. ಆದಾಗ್ಯೂ, ಮೋದಿ ಸರ್ಕಾರದ ಅಡಿಯಲ್ಲಿ ಕಳೆದ ಏಳು ವರ್ಷಗಳಲ್ಲಿ ಪ್ರತಿನಿತ್ಯ ಎರಡು ಕೋಮು ಗಲಭೆಗಳು ನಡೆದಿರುವುದು ನಿಜಕ್ಕೂ ಆಘಾತದ ಸಂಗತಿಯೇ ಸರಿ. ಪದೇ ಪದೇ ಗಲಭೆಗಳು ಅಥವಾ ದಾಳಿಗಳು ಆರ್‌ಎಸ್‌ಎಸ್ ಪರಿವಾರದವರ ಕುಮ್ಮಕ್ಕಿನಿಂದ ಪ್ರಚೋದಿತವಾದವುಗಳೇ ಆಗಿವೆ. ಇತ್ತೀಚೆಗಿನ ಘಟನೆ ಹಾಗೂ 2018 ರಲ್ಲಿ ಬಿಹಾರದಲ್ಲಿ ಸಂಭವಿಸಿದ ಪ್ರಕರಣಗಳು ಅವರ ಪ್ರಚೋದನೆಯಿಂದಲೇ ನಡೆದಿವೆ.

ಹಲ್ಲೆಗಳಿಗೆ ವಿಧ–ವಿಧ ನೆಪಗಳು

ಆದರೆ ಈ ಹಿಂದುತ್ವ ಬುಲ್ಡೋಜರ್ ಈ ರೀತಿಯ ಪ್ರತ್ಯಕ್ಷ ದೈಹಿಕ ಹಿಂಸೆಗಳ ಮೇಲೆ ಮಾತ್ರವೇ ಅವಲಂಬಿತವಾಗಿಲ್ಲ. ಆಳುವ ಬಿಜೆಪಿ ಸರ್ಕಾರದ ಅಭಯರಕ್ಷೆಯಿಂದಾಗಿ ಮುಸ್ಲಿಮರನ್ನು (ಮತ್ತು ಕ್ರಿಶ್ಚಿಯನ್ನರನ್ನು) ಇಡಿಯಾಗಿ ಕೆಣಕುವ ಅಥವಾ ಪ್ರಚೋದಿಸುವ ಬತ್ತಳೀಕೆಯೇ ಎದ್ದು ಬಂದಿದೆ. ಮೋದಿ ಆಳ್ವಿಕೆಯ ಆರಂಭದ ದಿನಗಳಲ್ಲಿ ಗೋರಕ್ಷಕರೆಂಬ ಕಾವಲುಕೋರ ಪಡೆಗಳಿಂದ ಇದು ಆರಂಭವಾಯಿತು. ಗೃಹ ಸಚಿವಾಲಯದ ಪ್ರಕಾರ 2014 ಮತ್ತು 2018 ರ ನಡುವೆ ದೊಂಬಿಹತ್ಯೆಗಳ 40 ಪ್ರಕರಣಗಳು ದಾಖಲಾಗಿವೆ, ಆದರೆ ಇತರ ಸಮೀಕ್ಷೆಗಳ ಪ್ರಕಾರ ದೊಂಬಿ ಹಲ್ಲೆಗಳ 80 ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳ ಬಹುಪಾಲು ಸಂತ್ರಸ್ತರು ಮುಸ್ಲಿಮರು ಇಲ್ಲವೇ ದಲಿತರು/ಆದಿವಾಸಿಗಳು.

ಆನಂತರದಲ್ಲಿ, ಆರ್‌ಎಸ್‌ಎಸ್ ಮುಸ್ಲಿಮರ ಮೇಲೆ ದೊಂಬಿ ಹಲ್ಲೆ ನಡೆಸಬಹುದಾದ ಹೊಸ ‘ವಿಚಾರ ಗುಚ್ಛ’ಗಳನ್ನು ಒದಗಿಸಿದೆ– ಹಿಜಬ್, ಹಲಾಲ್, ಸಮಾನ ನಾಗರಿಕ ಸಂಹಿತೆ, ಸಾರ್ವಜನಿಕ ಸ್ಥಳಗಳಲ್ಲಿ ನಮಾಜು, ಮಸೀದಿಗಳಲ್ಲಿ ಧ್ವನಿವರ್ಧಕ ಬಳಸುವುದು ಇತ್ಯಾದಿ. ಈ ವಿಷಯಗಳನ್ನೆಲ್ಲ ಹಿಂಸಾಚಾರಕ್ಕೆ ಇಳಿಯುವ ಪ್ರವೃತ್ತಿಯ ಜನಜಂಗುಳಿಗಳು ಎತ್ತುತ್ತಿವೆ, ಇದಕ್ಕೆ ರಾಜ್ಯಗಳಲ್ಲಿನ ಬಿಜೆಪಿ ಮುಖಂಡರ ಬೆಂಬಲ ಸಿಗುತ್ತಿದೆ. ಇವುಗಳು ನಿರ್ಬಂಧಗಳಿಗೆ ಕಾರಣವಾಗಿವೆ. ಈ ಹಿಂದೆ, ದೇಶದ್ರೋಹಿಗಳು, ಪಾಕಿಸ್ತಾನಕ್ಕೆ ಬೆಂಬಲ ನೀಡುವವರು, ಗೋಮಾಂಸ ತಿನ್ನುವವರು ಎಂಬ ಆಪಾದನೆಗಳನ್ನು ಆಗಾಗ ಎತ್ತುತ್ತಿದ್ದರು. ಜಮ್ಮು ಕಾಶ್ಮೀರದಲ್ಲಿ ಪರಿಚ್ಛೇದ 370 ರ ರದ್ದತಿ ಮತ್ತು ರಾಜ್ಯವನ್ನು ಮೂರು ಭಾಗಗಳಾಗಿ ವಿಭಜನೆ ಮಾಡಿದ್ದನ್ನು ಮುಸ್ಲಿಮರ ಪ್ರಾಬಲ್ಯದ ವಿರುದ್ಧ ‘ತಾಕತ್ತಿನ’ ಕ್ರಮಗಳು ಎಂಬ ‘ರಾಷ್ಟ್ರೀಯಯವಾದಿ’ ವಾಗ್ಝರಿ ಕೇಳಬರುತ್ತಿತ್ತು.

ದಬ್ಬಾಳಿಕೆಯ ಬುಲ್ಡೋಜರ್ ವಿರುದ್ಧ..

ಈ ವಿಷಪೂರಿತ ದಾಳಿಯು ದೇಶಾದ್ಯಂತ ಅನಗತ್ಯ ಉದ್ವಿಗ್ನತೆ ಹಾಗೂ ದ್ವೇಷದ ಸ್ಥಿತಿಯನ್ನು ಸೃಷ್ಟಿಸುತ್ತಿದೆ ಎಂಬುದನ್ನು ನಾವು ನೆನಪಿಡಬೇಕು. ಆರ್‌ಎಸ್‌ಎಸ್/ಬಿಜೆಪಿಗೆ ಈ ಕ್ರಮಗಳು ಭಾರತವನ್ನು ಅಖಂಡ ಹಿಂದೂರಾಷ್ಟ್ರವನ್ನಾಗಿ ಪರಿವರ್ತನೆ ಮಾಡುವತ್ತ ಕೊಂಡೊಯ್ಯುವ ಹೆಜ್ಜೆಗಳು. ಆದರೆ ದೇಶಕ್ಕೆ ಅವುಗಳು ತೀವ್ರ ವಿಭಜನಕಾರಿ ಸ್ವರೂಪದವುಗಳಾಗಿದ್ದು ಅವುಗಳನ್ನು ಎದುರಿಸಿ ಹೋರಾಡದಿದ್ದರೆ ಅವು ಭವಿಷ್ಯದಲ್ಲಿ ಹಿಂಸೆ, ರಕ್ತಪಾತ ಮತ್ತು ಅರಾಜಕತೆಯನ್ನು ಉಂಟುಮಾಡುವಂತವುಗಳು. ಅದು ಸಂವಿಧಾನವನ್ನು ಹಾಗೂ ಅದರ ಆಧಾರಸ್ಥಂಭಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಹಾಗೂ ಒಕ್ಕೂಟತತ್ವವನ್ನು ನಾಶಮಾಡುತ್ತದೆ ಕೂಡ. ಬುಲ್ಡೋಜರ್ ಯಾವುದನ್ನೂ ಉಳಿಸುವುದಿಲ್ಲ.

ಈಗ ಅದು, ಜನರ ಗಮನವನ್ನು ಮೋದಿ ಸಕಾರದ ಕಾರ್ಪೊರೇಟ್ ಪರ ನೀತಿಗಳು ಉಂಟುಮಾಡಿರುವ ಜನಗಳ ವ್ಯಾಪಕ ಆರ್ಥಿಕ ಸಂಕಟಗಳು ಮತ್ತು ದಾರಿದ್ರ್ಯದಿಂದ ಬೇರೆಡೆಗೆ ತಿರುಗಿಸುವ ಉದ್ದೇಶವನ್ನು ಕೂಡ ಹೊಂದಿದೆ. ಗಗನಕ್ಕೇರುತ್ತಿರುವ ಹಣದುಬ್ಬರ ಹಾಗೂ ಉದ್ಯೋಗಹೀನತೆಯಿಂದ ತೀವ್ರವಾಗಿ ಬಳಲುತ್ತಿರುವ ಬಡ ಜನರೇ ಕೋಮು ಗಲಭೆಗಳಾದಾಗ ತಮ್ಮ ಜೀವ ಉಳಿಸಿಕೊಳ್ಳುವ, ಈ ಗಲಭೆಗಳ ಪರಿಣಾಮವಾಗಿ ಆಡಳಿತದ ದಬ್ಬಾಳಿಕೆಯ ಕ್ರಮಗಳಿಂದ ತಮ್ಮ ಅಲ್ಪಸ್ವಲ್ಪ ಆಸ್ತಿಪಾಸ್ತಿಗಳನ್ನು ರಕ್ಷಿಸಿಕೊಳ್ಳುವ ಭೀತಿಗೆ ಒಳಗಾಗುವವರು ಕೂಡ.

ದೇಶದಲ್ಲಿರುವ ಎಲ್ಲಾ ಪ್ರಗತಿಪರ ಹಾಗೂ ಸ್ವಾತಂತ್ರ್ಯಪ್ರೇಮಿ ಜನಗಳು ಈ ಮತಾಂಧತೆ ಹಾಗೂ ಹಿಂಸಾತ್ಮಕ ದಬ್ಬಾಳಿಕೆಯ ಬುಲ್ಡೋಜರ್‌ಗಳ ವಿರುದ್ಧ ದನಿಯೆತ್ತಲು ಮುಂದಾಗಬೇಕು.

‘ಬಂಡವಾಳಶಾಹಿಯ ಕೊಚ್ಚೆಯಿಂದ ಜಗತ್ತಿನ ಭವಿಷ್ಯವನ್ನು ಪಾರು ಮಾಡಿ’: ಕಾರ್ಮಿಕರಿಗೆ WFTU ಕರೆ

ಭವಿಷ್ಯವು ಶ್ರಮದ ಮತ್ತು ಹೋರಾಟಗಳ ಜಗತ್ತಿಗೆ ಸೇರಿದೆ. ಆದರೆ ವ್ಲಾಡಿಮಿರ್ ಮಾಯಕೊವಸ್ಕಿ ಕವನಗಳಲ್ಲಿ ಹೇಳಿದಂತೆ ಈ ‘ಭವಿಷ್ಯ ತನ್ನಿಂತಾನೇ ಬರುವುದಿಲ್ಲ’ ಅದನ್ನು ಬಂಡವಾಳಶಾಹಿಯ ಕೊಚ್ಚೆಯಿಂದ ಹೊರಗೆಳೆದು ಪಾರು ಮಾಡಬೇಕಾಗಿದೆ. ಬಂಡವಾಳಶಾಹಿ ಕಾರ್ಮಿಕ ವರ್ಗದ ಭವಿಷ್ಯ ಆಗಲಾರದು. ಕಾರ್ಮಿಕ ವರ್ಗ ಐಕ್ಯತೆಯಿಂದ ವರ್ಗ ಹೋರಾಟ ಮತ್ತು ಕಾರ್ಮಿಕ ಅಂತರ್‍ರಾಷ್ಟ್ರೀಯತೆಯ ಧೋರಣೆಯಿಂದ ಸಾಗಬೇಕು. ಹೀಗೆಂದು ಇಟಲಿಯ ರೋಮ್ ನಲ್ಲಿ ಮೇ 6–8 ರಂದು ಸೇರಿದ್ದ ವಿಶ್ವ ಟ್ರೇಡ್ ಯೂನಿಯನ್ ಗಳ ಒಕ್ಕೂಟ (WFTU) ತನ್ನ 18ನೆಯ ಮಹಾಧಿವೇಶನದಲ್ಲಿ ಜಗತ್ತಿನ ಕಾರ್ಮಿಕ ವರ್ಗಕ್ಕೆ ಕರೆ ಕೊಟ್ಟಿದೆ.

“ಐಕ್ಯತೆಯಿಂದ ನಾವು ನಮ್ಮ ಸಮಕಾಲೀನ ಆವಶ್ಯಕತೆಗಳನ್ನು ಪೂರೈಸುವತ್ತ, ಸಾಗುತ್ತೇವೆ” ಎಂಬುದು ಮಹಾಧಿವೇಸನದ ಘೋಷವಾಕ್ಯವಾಗಿತ್ತು. 133 ದೇಶಗಳಲ್ಲಿ ಈ ಒಕ್ಕೂಟದ ಸದಸ್ಯರಾಗಿರುವ 10.5 ಕೋಟಿಗೂ ಹೆಚ್ಚು ಕಾರ್ಮಿಕರನ್ನು ಪ್ರತಿನಿಧಿಸಿ 430 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಜಗತ್ತಿನ ಹಲವು ದೇಶಗಳಲ್ಲಿ ಮುಂದುವರೆಯುತ್ತಿರುವ ಕೊರೊನಾ ಪರಿಸ್ಥಿತಿಯಿಂದಾಗಿ ಮಹಾಧಿವೇಶನವನ್ನು ಜಂಟಿ (ದೈಹಿಕ + ಆನ್–ಲೈನ್) ವಿಧಾನದಲ್ಲಿ ನಡೆಸಲಾಯಿತು. 330 ಪ್ರತಿನಿಧಿಗಳು ಭೌತಿಕವಾಗಿ ಭಾಗವಹಿಸಿದರೆ 100 ಪ್ರತಿನಿಧಿಗಳು ಆನ್–ಲೈನ್ ನಲ್ಲಿ ಭಾಗವಹಿಸಿದರು. WFTU ನ ಸದಸ್ಯ ಸಂಘಟನೆಯಾಗಿರುವ CITU ವನ್ನು ಪ್ರತಿನಿಧಿಸಿ 4 ನಾಯಕರು ದೈಹಿಕವಾಗಿ ಮತ್ತು 15 ಪ್ರತಿನಿಧಿಗಳು ಆನ್–ಲೈನ್ ನಲ್ಲಿ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಮೊದಲೇ ಹಂಚಲಾಗಿದ್ದ ಮಹಾಧಿವೇಶನದ. “ಸಿದ್ಧಾಂತಗಳು ಮತ್ತು ಆದ್ಯತೆಗಳು” ಎಂಬ ಕೇಂದ್ರೀಯ ದಸ್ತಾವೇಜಿನ ಕರಡನ್ನು ಮಹಾಧಿವೇಶನದಲ್ಲಿ ಮಂಡಿಸಿ ಚರ್ಚಿಸಲಾಯಿತು.

ಕಾರ್ಮಿಕ ವರ್ಗದ ಸಮಕಾಲೀನ ಆವಶ್ಯಕತೆಗಳನ್ನು ಪೂರೈಸುವತ್ತ ಸತತ ಹೋರಾಟಗಳನ್ನು ಸಂಘಟಿಸಿ ಅದಕ್ಕೆ ನಾಯಕತ್ವ ಕೊಡುವುದು ಮುಂದಿನ ಅವಧಿಯಲ್ಲಿ WFTU ನ ಪ್ರಮುಖ ಗುರಿಯೆಂದು ಸಾರಲಾಯಿತು. ವೇತನದಲ್ಲಿ ಹೆಚ್ಚಳವಲ್ಲದೆ 35 ಗಂಟೆಗಳ ವಾರದಲ್ಲಿ 5 ದಿನದ ಕೆಲಸದ ಸಮಯ ನಿಗದಿಸಲು ಹೋರಾಟ ಮಾಡಲಾಗುತ್ತಿದೆ. ಘನತೆಯ ಯೋಗ್ಯ ವೇತನ ಕೊಡುವ ಪೂರ್ಣಕಾಲದ ಸುಭದ್ರ ಉದ್ಯೋಗಕ್ಕಾಗಿ, ಸಾಮಾಜಿಕ ಭದ್ರತೆ ಮತ್ತು ಎಲ್ಲರಿಗೂ ಪಿಂಚಣಿ ಜಾರಿಗಾಗಿ, ಬೆಲೆಏರಿಕೆ ಮತ್ತು ಖಾಸಗೀಕರಣಗಳ ವಿರುದ್ಧ, ಆರೋಗ್ಯಕರ ಸುರಕ್ಷಿತ ಕೆಲಸದ ಸ್ಥತಳಗಳಿಗಾಗಿ, ಬಾಲಕಾರ್ಮಿಕ ಪದ್ಧತಿಯ ವಿರುದ್ಧ WFTU ಹೋರಾಟಗಳನ್ನು ಮುಂದುವರೆಸುತ್ತದೆ. ಉಚಿತ ಆರೋಗ್ಯ ಸೇವೆಯ ಹಕ್ಕು, ಯೋಗ್ಯ ಮನೆ, ಶುದ್ಧ ನೀರಿಗೆ ವ್ಯವಸ್ಥೆ, ನೆಚ್ಚಬಹುದಾದ ಸುರಕ್ಷಿತವಾದ ಅಗ್ಗವಾದ ಸಾರ್ವಜನಿಕ ಸಾಗಾಣಿಕೆಯ ಹಕ್ಕು, ➚

ಇಸ್ರೇಲಿ ಸೈನಿಕರಿಂದ ಪತ್ರಕರ್ತೆಯ ಕೊಲೆಗೆ ವ್ಯಾಪಕ ಖಂಡನೆ



ಜಗದ ಸುತ್ತ

ವಸಂತರಾಜ್ ಎನ್.ಕೆ.

ಶಿರೀನ್ ಅಬು ಅಕ್ಲೆಹ್ ಎಂಬ 'ಅಲ್ ಜಜೀರಾ' ಮಾಧ್ಯಮ ಸಮೂಹದ ಪತ್ರಕರ್ತೆಯನ್ನು ಮೇ 11ರಂದು ಇಸ್ರೇಲಿ ಸೈನಿಕರು ಮುಖದ ಮೇಲೆ ಗುಂಡು ಹೊಡೆದು ಕೊಂದ 'ಬೆಚ್ಚಿ ಬೀಳಿಸುವ' ಘಟನೆಗೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಇಸ್ರೇಲ್ ಆಕ್ರಮಿತ ಪಶ್ಚಿಮ ದಂಡೆಯ ಜೆನಿನ್ ನಿರಾಶ್ರಿತರ ಶಿಬಿರದಲ್ಲಿ ಪ್ಯಾಲೆಸ್ಟೈನ್ನರ ಮೇಲೆ ಇಸ್ರೇಲಿ ಸೈನಿಕರು ನಡೆಸುವ ದೌರ್ಜನ್ಯದ ಪ್ರತ್ಯಕ್ಷ ವರದಿ ಮಾಡುತ್ತಿದ್ದಾಗ ಮಿಲಿಟರಿ ವಾಹನದಲ್ಲಿ ಕುಳಿತಿದ್ದ ಇಸ್ರೇಲಿ ಸೈನಿಕನೊಬ್ಬ ಗುರಿಯಿಟ್ಟು ಆಕೆಯ ಮುಖದ ಮೇಲೆ ಗುಂಡು ಹಾರಿಸಿದ್ದಾನೆ. ಆಕೆ ಹೆಲ್ಮೆಟ್ ಧರಿಸಿದ್ದು 'ಪ್ರೆಸ್' ಎಂದು ಸ್ಪಷ್ಟವಾಗಿ ಗುರುತಿಸಿದ್ದ ಕೋಟು ಹಾಕಿಕೊಂಡಿದ್ದು ಇದು ಕಣ್ತಪ್ಪಿನಿಂದ ನಡೆದದ್ದಲ್ಲ ಎಂದು ಸ್ಥಳದಲ್ಲಿದ್ದ ಪತ್ರಕರ್ತರು ಹೇಳಿದ್ದಾರೆ.

ಅಲ್ ಜಜೀರಾ' ದ ಪ್ರೋಗ್ರಾಂ ಪ್ರೊಡ್ಯೂಸರ್ ಬೆನ್ನಿಗೆ ಸಹ ಗುಂಡು ಹಾರಿಸಿದ್ದು ಅವನು ಬದುಕಿದ್ದಾನೆ ಎಂದು ವರದಿಯಾಗಿದೆ. ಹೀಗೆ ಹಲವಾರು ಪ್ರತ್ಯಕ್ಷದರ್ಶಿಗಳ ಮೂಲಕ ಇಸ್ರೇಲಿ ಸೈನಿಕರು ಗುರಿಯಿಟ್ಟು ಕೊಲೆ ಮಾಡಿದ್ದೆಂದು ಜಗಜ್ಜಾಹಿರಾಗಿದ್ದರೂ, ಪ್ಯಾಲೆಸ್ಟೈನ್ ದಂಗೆಕೋರರು ಶಿರೀನ್ ಕೊಲೆ ಮಾಡಿದ್ದು ಎಂದು ದಿಕ್ಕುಗೆಡಿಸುವ ಪ್ರಯತ್ನವನ್ನು ಮಾಡಲಾಯಿತು. ಶಿರೀನ್ ಮೇಲೆ ಇಸ್ರೇಲಿ ಸೈನಿಕರ ಬರ್ಬರ ದಾಳಿ ಮತ್ತು ಕೊಲೆ "ಬೆಚ್ಚಿ ಬೀಳಿಸುವ ಘಟನೆ' ಎಂದು 'ಅಲ್ ಜಜೀರಾ' ಹೇಳಿಕೆ ನೀಡಿದೆ. ಪ್ಯಾಲೆಸ್ಟೈನ್ನರ ಮೇಲೆ ಇಸ್ರೇಲಿ ಸೈನಿಕರು ದಿನೇ ನಡೆಸುವ ದೌರ್ಜನ್ಯ ಮತ್ತು ಅತ್ಯಾಚಾರಗಳನ್ನು ದಿಟ್ಟತನದಿಂದ ವರದಿ ಮಾಡಿ ಜಗತ್ತಿಗೆ ತಿಳಿಸುತ್ತಿದ್ದ ಆಕೆಯನ್ನು ಜಾಗತಿಕ ಪತ್ರಿಕೋದ್ಯಮದಲ್ಲಿ 'ಪ್ಯಾಲೆಸ್ಟೈನ್ ಕವರೇಜ್ ನ ಐಕಾನ್' ಎಂದು ಪರಿಗಣಿಸಲಾಗಿದೆ. ಅಮೆರಿಕನ್ ಪ್ರಜೆ ಆಗಿರುವ 51 ವರ್ಷದ ಪ್ಯಾಲೆಸ್ಟೈನ್ ಮೂಲದ ಶಿರೀನ್ 1997ರಿಂದ 'ಅಲ್ ಜಜೀರಾ'ದಲ್ಲಿ ಕೆಲಸ ಮಾಡುತ್ತಿದ್ದರು.

ಈ ಕೊಲೆಗೆ ಜಗತ್ತಿನಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾಗಿದ್ದರೂ ಲೆಕ್ಕಿಸದೆ, ಶಿರೀನ್ ಶವದ ಮೆರವಣಿಗೆಯ ಮೇಲೆ ಘೋರ ಹಿಂಸಾತ್ಮಕ ದಾಳಿ ಮಾಡಿ ಅದನ್ನು ನಿಲ್ಲಿಸುವ ಪ್ರಯತ್ನದ ಮೂಲಕ ಇಸ್ರೇಲಿ ಮಿಲಿಟರಿ ತನ್ನ ದಾಷ್ಟ್ರ್ಯ ಪ್ರದರ್ಶಿಸಿತು ಎಂಬುದು ಇನ್ನೂ 'ಬೆಚ್ಚಿ ಬೀಳಿಸುವ' ಸಂಗತಿಯಾಗಿದೆ. ಇಸ್ರೇಲಿ ಸೈನಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದವರನ್ನು ಬಡಿಯುವ ಒದೆಯುವ ವಿಡಿಯೋ ವೈರಲ್ ಆಗಿತ್ತು. ದಾಳಿ ಎಷ್ಟು ಭೀಕರವಾಗಿತ್ತೆಂದರೆ ಶವ ಪೆಟ್ಟಿಗೆ ಹೊತ್ತವರು ದಾಳಿ ತಡೆಯಲಾರದೆ ಶವ ಪೆಟ್ಟಿಗೆಯೇ ಬಿದ್ದು ಹೋಗುವಂತೆ ಆಗಿತ್ತು.

ಈ 'ಬೆಚ್ಚಿ ಬೀಳಿಸುವ' ಘಟನೆಯನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಅಪರೂಪವಾದ ಸರ್ವಾನುಮತದ ನಿರ್ಣಯದಲ್ಲಿ ಖಂಡಿಸಿದ್ದು ಇಸ್ರೇಲಿ ಸರಕಾರಕ್ಕೆ ತಕ್ಷಣದ, ಸಮಗ್ರವಾದ, ಪಾರದರ್ಶಕ, ನಿಷ್ಪಕ್ಷಪಾತ ತನಿಖೆ' ನಡೆಸಬೇಕೆಂದು ನಿರ್ದೇಶಿಸಿದೆ. ವಿಶ್ವಸಂಸ್ತೆ?ಯ ಮಾನವ ಹಕ್ಕುಗಳ ಕಚೇರಿ ಸಹ ತನಿಖೆಗೆ ಒತ್ತಾಯಿಸಿದ್ದು, ಇದು 40ಕ್ಕೂ ಹೆಚ್ಚು ಪ್ಯಾಲೆಸ್ಟೈನಿ ಪತ್ರಕರ್ತರ ಕೊಲೆಯ ಭಾಗವಾಗಿ ಬಂದಿದ್ದು, ಯುದ್ಧ ಅಪರಾಧದ ಪ್ರಕರಣವಾಗಿ ನೋಡಬೇಕಾಗಬಹುದು ಎಂದು ಹೇಳಿದೆ. ಅಮ್ನೆಸ್ಟಿ ಇಂಟರ್ ನ್ಯಾಶನಲ್, 'ರಿಪೋರ್ಟರ್ಸ್ ವಿದೌಟ್ ಬೋರ್ಡರ್ಸ್' (ಗಡಿರಹಿತ ವರದಿಗಾರರು), ಪತ್ರಕರ್ತರ ಅಂತರ್ರಾಷ್ಟ್ರೀಯ ಫೆಡರೇಶನ್, ಹ್ಯೂಮನ್ ರೈಟ್ಸ್ ವಾಚ್ ಮುಂತಾದ ಸಂಘಟನೆಗಳು ಈ ಘಟನೆಯನ್ನು ಖಂಡಿಸಿವೆ. ಹೆಚ್ಚಿನವು ಇಸ್ರೇಲ್ ಸರಕಾರವನ್ನು ಖಂಡಿಸಿದ್ದು ಸ್ವತಂತ್ರ ಅಂತರ್ರಾಷ್ಟ್ರೀಯ ತನಿಖೆಗೆ ಒತ್ತಾಯಿಸಿವೆ. ಇದು ಒಂದು ಪ್ರತ್ಯೇಕ ಘಟನೆಯಲ್ಲ. ಇಸ್ರೇಲಿ ಸರಕಾರ ತನ್ನ ದಮನಚಕ್ರದ ಕುರಿತು ವಾಸ್ತವ ಹೇಳುವ ಎಲ್ಲರ ಮೇಲೂ ಈ ರೀತಿ ದಾಳಿ ಮಾಡುತ್ತಿದೆ ಎಂದಿದೆ. ಪ್ಯಾಲೆಸ್ಟೈನ್, ಯುರೋಪಿಯನ್ ಕೂಟ, ಚೀನಾ, ಯುಕೆ, ಇರಾನ್, ಪಾಕಿಸ್ತಾನ, ಕುವೈಟ್, ಕಟಾರ್ ಮುಂತಾದ ದೇಶಗಳ ಸರಕಾರಗಳೂ ಈ ಕೊಲೆಯನ್ನು ಖಂಡಿಸಿವೆ. ಇಷ್ಟು ವ್ಯಾಪಕ ಜಾಗತಿಕ ಖಂಡನೆಯಾಗುವಾಗ, ಅದೂ ತನ್ನ ಪ್ರಜೆಯ ಕೊಲೆಯಾಗಿರುವಾಗ ಸುಮ್ಮನಿರಲಾರದೆ ಘಟನೆಯನ್ನು (ತನ್ನ ಪರಮ ಮಿತ್ರ ಇಸ್ರೇಲಿ ಸರಕಾರವನ್ನಲ್ಲ) ಖಂಡಿಸಿ ತನಿಖೆಯಾಗಬೇಕೆಂದಿದೆ.

ಭಾರತದ ವಿವಿಧ ಪ್ರದೇಶ ವಿವಿಧ ಮಾಧ್ಯಮ ಸಂಸ್ಥೆಗಳ ನೂರಕ್ಕೂ ಹೆಚ್ಚು ಪತ್ರಕರ್ತರು ಇಸ್ರೇಲಿ ಪ್ರಧಾನಿಗೆ ಪತ್ರ ಬರೆದು ಸ್ವತಂತ್ರ ತನಿಖೆಯಾಗಬೇಕೆಂದು ಒತ್ತಾಯಿಸಿದ್ದಾರೆ. "ಇಸ್ರೇಲಿ ಸರಕಾರ ತನ್ನ ಕುರಿತು ಸತ್ಯವನ್ನು ಹೇಳುವ ಸ್ವತಂತ್ರ ಪತ್ರಕಾರಿತೆಯನ್ನು ಸಹಿಸುವುದಿಲ್ಲ?..ಈ ದಾಳಿಯು ಪ್ಯಾಲೆಸ್ಟೈನಿ ಜನರನ್ನು ಮನಬಂದಂತೆ ಗುರಿ ಮಾಡುವ ಇಸ್ರೇಲಿ ಮಿಲಿಟರಿ ದಾಳಿಗಳ ಮೂಲಕ "ಏನು ಮಾಡಿದರೂ ನಡೆಯುತ್ತದೆ' ಎಂಬ ವಾತಾವರಣ ಸೃಷ್ಟಿ ಮಾಡಿದ್ದರ ಹಿನ್ನೆಲೆಯಲ್ಲಿ ನಡೆದಿದೆ. ಸ್ವತಂತ್ರ ವರದಿ ಮಾಡುವ ಪತ್ರಕರ್ತರು ಹಲವು ಬಾರಿ ತಮ್ಮ ಪ್ರಾಣದ ಬೆಲೆ ತೆರಬೇಕಾಗಿದೆ. ಇಂತಹ ಗುರಿ ಮಾಡಿದ ದಾಳಿಗಳು ಕೊಲೆಗಳು ನಿಲ್ಲಬೇಕು" ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದ ಸಂಘಟನೆ **(AIPSO)** ಮೇ 13 ರಂದು ನವದೆಹಲಿಯಲ್ಲಿ ಒಂದು ಪ್ರತಿಭಟನಾ ಪ್ರದರ್ಶನ ನಡೆಸಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿಗಳಾದ ಪಲ್ಲಬ ಸೇನ್ ಗುಪ್ತಾ ಮತ್ತು ಆರ್.ಅರುಣ ಕುಮಾರ್ ಅವರು ಮಾತನಾಡಿದರು. ಪತ್ರಕರ್ತೆಯ ಕೊಲೆ ಖಂಡಿಸಿ ಹೇಳಿಕೆಯನ್ನೂ ಸಂಘಟನೆ ನೀಡಿದೆ. ಸರಕಾರಗಳಿಗೆ ಕಿರಿಕಿರಿ ತರುವ ಸತ್ಯವನ್ನು ಹೇಳುವ ಪತ್ರಕರ್ತರ ಮೇಲೆ ಜಗತ್ತಿನ ಹಲವು ದೇಶಗಳಲ್ಲಿ ಭೀಕರ ದಾಳಿಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಕೊಲೆಯನ್ನು ನೋಡಬೇಕು. ಭಾರತದಲ್ಲಿ ಸಹ ಬಲಪಂಥೀಯ ಅಧಿಕಾರಶಾಹಿ ಶಕ್ತಿಗಳು ಪತ್ರಕರ್ತರ ಮೇಲೆ ಭೀಕರ ದಾಳಿಗಳನ್ನು ನೋಡಬಹುದು. ಶಿರೀನ್ ಅವರ ಕೊಲೆ ಮಾಢಿದ ಝಿಯೋನಿಸ್ಟ್ ಶಕ್ತಿಗಳು ಮತ್ತು ಹಿಂದುತ್ವ ಕೋಮುವಾದಿ ಶಕ್ತಿಗಳ ನಡುವೆ ಆಳವಾದ ಸೈದ್ಧಾಂತಿಕ ಒಲುಮೆ ಮತ್ತು ಸ್ನೇಹವಿದೆ. ಆದ್ದರಿಂದ ಭಾರತದ ಜನತೆ ಈ ಕೊಲೆಯನ್ನು ತೀವ್ರವಾಗಿ ಖಂಡಿಸಬೇಕು. ದೇಶದಾದ್ಯಂತ ಂಖಕಖಔ ತನ್ನ ಘಟಕಗಳಿಗೆ ಈ ಕೊಲೆಯನ್ನು ಖಂಡಿಸಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕು ಎಂದು ಕರೆ ಕೊಟ್ಟಿದೆ,

ನಕ್ಬಾ–74

ಈ ಕೊಲೆಯ ಹಿನ್ನೆಲೆಯಲ್ಲಿ ಜಗತ್ತಿನಾದ್ಯಂತ ನಿರಾಶ್ರಿತರಾಗಿ ಜೀವಿಸುತ್ತಿರುವ ಮಿಲಿಯಾಂತರ ಪ್ಯಾಲೆಸ್ಟೈನ್ನರು ಮೇ 15ರ 74ನೆಯ ನಕ್ಬಾ ದಿನವನ್ನು ಪ್ರತಿಭಟನಾ ಪ್ರದರ್ಶನ, ಮೆರವಣಿಗೆಗಳ ಮೂಲಕ ಆಚರಿಸಿದರು. 1948ರ ಮೇ 15ರಂದು ಇಸ್ರೇಲಿ ಝಿಯೋನಿಸ್ಟ್ ಪುಂಡರು ಪ್ಯಾಲೆಸ್ಟೈನ್ನರ ಮೇಲೆ ಭೀಕರ ದಾಳಿ ನಡೆಸಿ, ಸುಮಾರು 7 ಲಕ್ಷ ಜನರನ್ನು 500 ಹಳ್ಳಿ–ಪಟ್ಟಣಗಳಲ್ಲಿನ ಅವರ ಮನೆಗಳಿಂದ ಮಾತ್ರವಲ್ಲ ದೇಶ ಬಿಟ್ಟು ಓಡಿಸಿ ಅವರ ಮನೆಮಾರುಗಳನ್ನು ವಶಪಡಿಸಿಕೊಂಡಿದ್ದರು. ಅವರು ಮತ್ತು ಅವರ ಪೀಳಿಗೆಯವರು ಆ ಕರಾಳ ದಿನವನ್ನು ನಕ್ಬಾ (ಅನಾಹುತದ ದಿನ) ಎಂದು ಕರೆಯುತ್ತಾರೆ. 'ನಾವು ಹಿಂದೆ ಬರುತ್ತೇವೆ', 'ಪ್ಯಾಲೆಸ್ಟೈನ್ ದೇಶ ಸ್ಥಾಪಿಸುತ್ತೇವೆ' ಎಂದು ಅಂದು ಪ್ರತಿಜ್ಞೆಗೈದರು. ಇಂದು ಸುಮಾರು 70 ಲಕ್ಷ 'ಪ್ಯಾಲೆಸ್ಟೈನ್ನರು 50 ದೇಶಗಳಲ್ಲಿ ಹೆಚ್ಚು ಕಡಿಮೆ ನಿರಾಶ್ರಿತರಂತೆ ವಾಸಿಸುತ್ತಿದ್ದಾರೆ. ಇವರಲ್ಲಿ 62 ಲಕ್ಷ ಪ್ಯಾಲೆಸ್ಟೈನ್ನರು ಇಸ್ರೇಲಿ ಆಕ್ರಮಿತ ಪಶ್ಚಿಮ ದಂಡೆ, ಗಾಜಾ ಪಟ್ಟಿ ಹಾಗೂ ನೆರೆಯ ಜೋರ್ಡಾನ್, ಲೆಬನಾನ್, ಸಿರಿಯಾ ಗಳಲ್ಲಿ ನಿರಾಶ್ರಿತರಂತೆ ವಾಸಿಸುತ್ತಿದ್ದಾರೆ. ಮೂಲ ಪ್ಯಾಲೆಸ್ಟೈನನ್ನಿನ 78% ಭೂಮಿಯನ್ನು ಇಸ್ರೇಲ್ ವಶಪಡಿಸಿಕೊಂಡಿದೆ. ■



➘ ಎಲ್ಲ ಮಕ್ಕಳಿಗೂ ಉಚಿತ ಸಾರ್ವಜನಿಕ ಶಿಕ್ಷಣ?

ಇವು ಪೂರೈಸಬೇಕಾದ ಕಾರ್ಮಿಕ ವರ್ಗದ ಸಮಕಾಲೀನ ಆವಶ್ಯಕತೆಗಳೆಂದು ಗುರುತಿಸಲಾಯಿತು. ಮಹಾಧಿವೇಶನ ವಿವಿಧ ಜಾಗತಿಕ ವಿದ್ಯಮಾನಗಳು, ವಿಷಯಗಳ ಕುರಿತು WFTU ಯ ಧೋರಣೆ ಪ್ರಕಟಿಸುವ "ರೋಮ್ ಘೋಷಣೆ' ಎಂಬ ಇನ್ನೊಂದು ದಸ್ತಾವೇಜನ್ನು ಮಂಡಿಸಿ, ಚರ್ಚಿಸಿ ಅಂಗೀಕರಿಸಲಾಯಿತು. ಸೆಪ್ಟೆಂಬರ್ 1 (1939ರಲ್ಲಿ ನಾಜಿ ಜರ್ಮನಿ ಎರಡನೆಯ ಮಹಾಯುದ್ಧವನ್ನು ಆರಂಭಿಸಿದ ದಿನ) ನ್ನು "ಶಾಂತಿ ಮತ್ತು ಗೆಳೆತನಕ್ಕಾಗಿ ಟ್ರೇಡ್ ಯೂನಿಯನುಗಳ ಅಂತರ್ರಾಷ್ಟ್ರೀಯ ಕಾರ್ಯಾಚರಣೆಯ ದಿನ"ವಾಗಿ ಪ್ರತಿ ವರ್ಷ ಆಚರಿಸಲು ನಿರ್ಧರಿಸಲಾಯಿತು.

ಎಲ್ಲ 5 ಖಂಡಗಳ 50 ದೇಶಗಳ ಪ್ರಾತಿನಿಧ್ಯವುಳ್ಳ ಅಧ್ಯಕ್ಷೀಯ ಮಂಡಳಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಜಾರ್ಜ್ ಮವಿಕ್ರೊಸ್ ಗೌರವ ಅಧ್ಯಕ್ಷರಾಗಿ ಮತ್ತು ಮೈಕೆಲ್ ಮಕ್ವಾಯಿಬ ಅಧ್ಯಕ್ಷರಾಗಿ ಪುನರಾಯ್ಕೆಯಾದರು. ಅಧ್ಯಕ್ಷೀಯ ಮಂಡಳಿಯು ಪದಾಧಿಕಾರಿಗಳನ್ನು ಮತ್ತು ಸೆಕ್ರೆಟಾರಿಯಟನ್ನು ಆರಿಸಿತು. ಸೈಪ್ರಸ್ ನ ಪಾಂಪಿಸ್ ಕೈರಿಟ್ಸಿಸ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸೆಕ್ರೆಟಾರಿಯಟ್ ನಲ್ಲಿ 10 ದೇಶಗಳ ಪ್ರತಿನಿಧಿಗಳಿದ್ದರು. ಸಿಐಟಿಯು ನ ಹೇಮಲತಾ ಉಪಾಧ್ಯಕ್ಷರಾಗಿ ಮತ್ತು ಸ್ವದೇಶ್ ದೇವ ರಾಯ್ ಉಪ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ■



NEW No. MAG(3)/NPP/205/2021-2022
JANASHAKTHI KANNADA VARA PATRIKE MAY 23-29, 2022 Price: Rs. 10/- Date of Publication: 20 MAY 2022 RNI No. KARKAN /2006/17926 Posted on 23-05-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



'ನವ ಭಾರತ'ದ ಬುಲ್ಡೋಜರ್ ಹತ್ತಿ ಬರುತ್ತಿದೆ ದ್ವೇಷ, ರಕ್ತಪಾತ

ಬುಲ್ಡೋಜರ್ ತನ್ನ ಇಚ್ಛೆಯನ್ನು ಇತರರ ಮೇಲೆ ಬಲವಂತವಾಗಿ ಹೇರುವುದರ ಸಂಕೇತ. ಇದರಿಂದಾಗಿ ಬಿಜೆಪಿ ಮತ್ತದರ ಸಂಘ ಪರಿವಾರದವರಿಗೆ ಅದರ ಬಗ್ಗೆ ಒಂದು ಸಹಜ ಬಂಧುತ್ವ ಇದೆ. ತನ್ನ ದಾರಿಯಲ್ಲಿ ಅಡ್ಡಬರುವ ಎಲವನ್ನೂ ನಿರ್ದಯವಾಗಿ ಸದೆಬಡಿಯುವುದು ಆರ್‌ಎಸ್‌ಎಸ್ ನ ಫ್ಯಾಸಿಸ್ಟ್ ತೆರನ ಸಿದ್ಧಾಂತದಿಂದ ಹೊರಹೊಮ್ಮಿದ ದೀರ್ಘಕಾಲದ ಚಿಂತನೆಯೇ ತಾನೇ. ಈಗ ಬಿಜೆಪಿ ಅಧಿಕಾರದಲ್ಲಿರುವುದರಿಂದ ಭಾರತವು ಬುಲ್ಡೋಜರ್ ರಾಜಕೀಯದ ಪರ್ವವನ್ನು ಕಾಣುತ್ತಿದೆ. 'ನವ ಭಾರತ'ವನ್ನು ನಿರ್ಮಾಣ ಮಾಡುವ ಅವರ ಹಾದಿಯಲ್ಲಿ ಯಾವುದೂ ಅಡ್ಡ ಬರದಂತೆ ನೋಡಿಕೊಳ್ಳಲಾಗುತ್ತಿದೆ. ಈ 'ನವಭಾರತ' ಎಂಬುದು 'ಹಿಂದೂ ರಾಷ್ಟ್ರ' ಕಟ್ಟುವ ಅವರ ನಿಜವಾದ ಕನಸನ್ನು ಮರೆಮಾಚುವ ಒಂದು ಪರದೆ ಎಂದು ಬೇರೆ ಹೇಳಬೇಕಾಗಿಲ್ಲ.

ಸವೇರಾ
ಅನು: ಟಿ ಸುರೇಂದ್ರ ರಾವ್

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಆಡಳಿತ ಪಕ್ಷ ಬಿಜೆಪಿ ಜಯ ಸಾಧಿಸಿದ ವಿಧಾನಸಭಾ ಚುನಾವಣೆಗಳಲ್ಲಿ ಒಂದು ವಿಲಕ್ಷಣ ವಿದ್ಯಮಾನ ಗೋಚರಿಸಿತು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು 'ಬುಲ್ಡೋಜರ್ ಬಾಬಾ' ಎಂದು ಪದೇ ಪದೇ ಹಾಡಿ ಹೊಗಳಲಾಯಿತು. ಅವರೂ ಆ ವಿಲಕ್ಷಣ ವಿವರಣೆಯನ್ನು ಇಷ್ಟಪಟ್ಟಂತೆ ಕಂಡಿತು. ಬುಲ್ಡೋಜರಿನ ಮೇಲೆ ಹಾಡುಗಳು ಮತ್ತು ಅದರ ಚಿತ್ರಗಳನ್ನು ಹೊತ್ತ ಮಾದರಿಗಳು ಹಾಗೂ ದೊಡ್ಡ ದೊಡ್ಡ ಭಿತ್ತಿಪತ್ರಗಳು ಪ್ರಚಾರದ ಸಮಯದಲ್ಲಿ ಇದ್ದವು ಮತ್ತು ಒಂದು ಬಹಿರಂಗ ಸಭೆಯಲ್ಲಿ ವೇದಿಕೆಯ ಪಕ್ಕ ಒಂದು ಬುಲ್ಡೋಜರನ್ನು ನಿಲ್ಲಿಸಲಾಗಿತ್ತು. ಅದನ್ನು ತೋರಿಸುತ್ತಾ ಯೋಗಿಯವರು 'ಬಳಕೆಗೆ ಸಿದ್ಧವಾಗಿದೆ' ಎಂದು ಭಾಷಣದ ಮಧ್ಯೆ ಹೇಳುತ್ತಿದ್ದರು.

ಸಾಮಾನ್ಯವಾಗಿ ಕಟ್ಟಡ ನಿರ್ಮಾಣ ಕೆಲಸ ಅಥವಾ ಕಟ್ಟಡ ಕೆಡವಲು ಬಳಸಲಾಗುವ ಬುಲ್ಡೋಜರನ್ನು ಉತ್ತರ ಪ್ರದೇಶದ ಬಿಜೆಪಿ ಒಂದು ಅಸ್ತ್ರವಾಗಿ ಮಾಡಿದೆ. ಸಮಾಜ ಘಾತುಕರು, ಅಪರಾಧಿಗಳು ಹಾಗೂ ಆಸ್ತಿಪಾಸ್ತಿಗಳ ಮೇಲೆ ಕಲ್ಲುತೂರಿ ಹಾಳುಗೆಡಹುವ ಪ್ರತಿಭಟನಾಕಾರರ ಅದನ್ನು ಬಳಸಲಾಗುವುದು ಎಂದು ಅದು ಸೂಚಿಸಿತ್ತು. ಆದರೆ ಇದು ವಾಸ್ತವವಾಗಿ ಒಂದು ನಿರ್ದಿಷ್ಟ ಸಮುದಾಯದವರನ್ನು – ಮುಸ್ಲಿಮರನ್ನು – ಸೂಚಿಸಲು ಸಂಕೇತ ಭಾಷೆಯಾಗಿತ್ತು.

ಉತ್ತರಪ್ರದೇಶದಿಂದ ಆರಂಭ

ಅಲ್ಪ ಸಂಖ್ಯಾತ ಸಮುದಾಯದವರನ್ನು ಭಯಭೀತಗೊಳಿಸುವ ಮತ್ತು ಅಪರಾಧಿಗಳು ಎಂದು ಅವರಿಗೆ ಕಳಂಕ ಹಚ್ಚುವ ಪ್ರಕ್ರಿಯೆ ಪ್ರಾರಂಭವಾಗಿದ್ದು 2019 ರಲ್ಲಿ. ಆಗ ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಹಾಗೂ ಅದರೊಂದಿಗೆ 'ರಾಷ್ಟ್ರೀಯ ಪೌರರ ದಾಖಲಾತಿ' (ಎನ್.ಆರ್.ಸಿ) ಎಂಬುದನ್ನು ರಚಿಸುವ ನಡೆಯ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದವು. ಮುಸ್ಲಿಂ ಸಮುದಾಯದ ನಾಗರಿಕರು ತಾವು ಭಾರತದ ಪೌರರು ಎಂದು ಸಾಬೀತುಪಡಿಸುವುದನ್ನು ಕಷ್ಟಕರಗೊಳಿಸಿ ಅವರು ಮತದಾನದ ಹಕ್ಕು ಹೊಂದದಂತೆ ಮಾಡುವ ಪ್ರಯತ್ನ ಅದಾಗಿತ್ತು. ಉತ್ತರ ಪ್ರದೇಶದ ಹಲವಾರು ಸ್ಥಳಗಳಲ್ಲಿ ಸಿಎಎ/ ಎನ್‌ಆರ್‌ಸಿ ವಿರೋಧಿ ಪ್ರತಿಭಟನಾಕಾರರು ಮತ್ತು ಪೋಲಿಸರ ನಡುವೆ ತಿಕ್ಕಾಟ ಉಂಟಾಗಿತ್ತು. ಪ್ರತಿಭಟನೆಯನ್ನು ನಿರ್ದಯವಾಗಿ ದಮನ ಮಾಡಬೇಕೆಂಬುದು ಯೋಗಿ ಸರ್ಕಾರದ ಆದೇಶವಾಗಿತ್ತು. ನಂತರದಲ್ಲಿ ನೂರಾರು ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಅವರಲ್ಲಿ ಬಹುತೇಕರು ಮುಸ್ಲಿಮರು. ಅವರ ಮನೆಗಳನ್ನು ಬುಲ್ಡೋಜರ್ ಬಳಸಿ ಕೆಡವಲಾಯಿತು. ಹೊಸದಾಗಿ ಜಾರಿ ಮಾಡಿದ್ದ ಕಾನೂನಿನ – ಸಾರ್ವಜನಿಕ ಆಸ್ತಿಪಾಸ್ತಿಗೆ ಉಂಟಾದ ನಷ್ಟವನ್ನು ಪ್ರತಿಭಟನಾಕಾರರು ತುಂಬಿಕೊಡಬೇಕು ಎಂಬ ಕಾನೂನಿನ – ಅಡಿಯಲ್ಲಿ ಭಾರಿ ದಂಡಗಳನ್ನು ವಿಧಿಸಲಾಯಿತು. ಆ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ತಡೆಹಿಡಿಯಿತು. ಸೂಕ್ತ ಕಾನೂನನ್ನು ಬಳಸಬೇಕೆಂದು ಸುಪ್ರೀಂಕೋರ್ಟ್ ಉತರಪ್ರದೇಶ ಸರ್ಕಾರಕ್ಕೆ ಆದೇಶಿಸಿತು. ಆದರೆ ಬುಲ್ಡೋಜರನ್ನು ದ್ವೇಷದ ಅಸ್ತ್ರವಾಗಿ ಬಳಸುವ ಪ್ರಕ್ರಿಯೆ ಅಷ್ಟರಲ್ಲೇ ಜನ್ಮತಾಳಿತ್ತು.

ಬುಲ್ಡೋಜರನ್ನು ಬಳಸುವುದು ಕಾನೂನು ಮತ್ತು ಸುವ್ಯವಸ್ಥೆಯನ್ನು ಜಾರಿ ಮಾಡುವ ಸಾಧನವಾಗಿ ಎಂದು ಔಪಚಾರಿಕವಾಗಿ ವರ್ಣಿಸಿದರೂ, ಅದು ಮುಸ್ಲಿಮರ ವಿರುದ್ಧ ಒಂದು ಅಸ್ತ್ರ ಎಂಬ ಅಧಿಕೃತ ಮುದ್ರೆ ಪಡೆದುಕೊಂಡಿತು. ಹೀಗೆ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸಲು ಮತ್ತೆ-ಮತ್ತೆ ಬುಲ್ಡೋಜರ್ ಸಂಕೇತಗಳನ್ನು ಬಳಸಲಾಯಿತು, ಈ ಮೂಲಕ ಇದು ಚುನಾವಣಾ ಕಾನೂನಿನ ತೆಕ್ಕೆಯಿಂದ ತಪ್ಪಿಸಿಕೊಳ್ಳುವ ಒಂದು ಹುನ್ನಾರವಾಯಿತು. ಆದಾಗ್ಯೂ ಇದರ ಹಿಂದಿನ ನಿಜವಾದ ಸಂದೇಶ ಎಲ್ಲರಿಗೂ ತಿಳಿಯುವಂತಿತ್ತು.

ಅಂದಿನಿಂದ ಬಿಜೆಪಿಯು ಇದನ್ನು ಅತ್ಯುತ್ಸಾಹದಿಂದ ಕೈಗೆತ್ತಿಕೊಂಡಿತು. ಅದರ ರಾಜ್ಯ ಸರ್ಕಾರಗಳು ಮನೆಗಳನ್ನು ಕೆಡವಲು ಬೀದಿ ನ್ಯಾಯದ ಸಿದ್ಧ ಮಾದರಿಯಾಗಿ ಬಳಸಲು ಶುರುಮಾಡಿದವು. ಮಧ್ಯಪ್ರದೇಶದ ಖರ್ಗೋನ್‌ನಲ್ಲಿ ಹಾಗೂ ಮತ್ತಿತರ ಸ್ಥಳಗಳಲ್ಲಿ ನಡೆದಿದ್ದನ್ನು ಎಲ್ಲರೂ ನೋಡಿದ್ದಾರೆ.

ಬುಲ್ಡೋಜರ್ ರಾಜಕೀಯದ ಪರ್ವ

ಆದರೆ ಬುಲ್ಡೋಜರ್ ಕೇವಲ ಒಂದು ಯಂತ್ರ ಅಥವಾ ಆಸ್ತ್ರವಲ್ಲ. ಅದು ತನ್ನ ಇಚ್ಛೆಯನ್ನು ಇತರರ ಮೇಲೆ ಬಲವಂತವಾಗಿ ಹೇರುವುದರ ಸಂಕೇತ. ಇದರಿಂದಾಗಿ ಬಿಜೆಪಿ ಮತ್ತದರ ಸಂಘ ಪರಿವಾರದವರಿಗೆ ಅದರ ಬಗ್ಗೆ ಒಂದು ಸಹಜ ಬಂಧುತ್ವ ಇದೆ. ತನ್ನ ದಾರಿಯಲ್ಲಿ ಅಡ್ಡಬರುವ ಎಲವನ್ನೂ ನಿರ್ದಯವಾಗಿ ಸದೆಬಡಿಯುವುದು ಆರ್‌ಎಸ್‌ಎಸ್ ನ ಫ್ಯಾಸಿಸ್ಟ್ ತೆರನ ಸಿದ್ಧಾಂತದಿಂದ ಹೊರಹೊಮ್ಮಿದ ದೀರ್ಘಕಾಲದ ಚಿಂತನೆಯೇ ತಾನೇ. ಈಗ ಬಿಜೆಪಿ ಅಧಿಕಾರದಲ್ಲಿರುವುದರಿಂದ (ಮತ್ತು ಪ್ರಧಾನ ಮಂತ್ರಿಯವರನ್ನೂ ಒಳಗೊಂಡಂತೆ ಹಲವಾರು ಆರ್‌ಎಸ್‌ಎಸ್ ಸ್ವಯಂಸೇವಕರು ಉನ್ನತ ಸರಕಾರೀ ಸ್ಥಾನಗಳನ್ನು ಅಲಂಕರಿಸಿರುವಾಗ) ಭಾರತವು ಬುಲ್ಡೋಜರ್ ರಾಜಕೀಯದ ಪರ್ವವನ್ನು ಕಾಣುತ್ತಿದೆ.


ಅವರ 'ನವ ಭಾರತ'ವನ್ನು ನಿರ್ಮಾಣ ಮಾಡುವ ಹಾದಿಯಲ್ಲಿ ಯಾವುದೂ ಅಡ್ಡ ಬರದಂತೆ ನೋಡಿಕೊಳ್ಳಲಾಗುತ್ತಿದೆ. ಈ 'ನವಭಾರತ' ಎಂಬುದು 'ಹಿಂದೂ ರಾಷ್ಟ್ರ' ಕಟ್ಟುವ ಅವರ ನಿಜವಾದ ಕನಸನ್ನು ಮರೆಮಾಚುವ ಒಂದು ಪರದೆ ಎಂದು ಬೇರೆ ಹೇಳಬೇಕಾಗಿಲ್ಲ. ಸಮಾಜವನ್ನೇ ಧಾರ್ಮಿಕ ನೆಲೆಯಲ್ಲಿ ವಿಭಜಿಸುತ್ತಿರುವಾಗ ಮತ್ತು ಅಲ್ಪಸಂಖ್ಯಾತರ ಬಾಯಿ ಬಡಿಯುತ್ತಿರುವಾಗ, ಭಯಭೀತರನ್ನಾಗಿಸುತ್ತಿರುವಾಗ, ಆರೆಸ್ಸೆಸ್ ಸಿದ್ಧಾಂತಿ ಎಂ ಎಸ್ ಗೋಲ್ವಾಲ್ಕರ್ ಕಂಡರಸಿದಂತೆ 'ಎರಡನೇ ದರ್ಜೆಯ ನಾಗರಿಕ'ರಾಗಿ ಬದುಕುವಂತೆ ಮಾಡುತ್ತಿರುವಾಗ, ವೈವಿಧ್ಯತೆಯನ್ನು, ಭಿನ್ನಾಭಿಪ್ರಾಯವನ್ನು ಅಥವಾ ಭಿನ್ನತೆಯನ್ನು ಸಂರಕ್ಷಿಸುವ ಯಾವ ಸಂಸ್ಥೆಯೂ, ಯಾವ ಕಾನೂನೂ, ಯಾವ ನಡವಳಿಕೆಗಳೂ ವಿಧ್ವಂಸ ಹಾಗೂ ವಿನಾಶದಿಂದ ಸುರಕ್ಷಿತವಾಗಿರಲಾರವು.

ಈ ಬಹುಸಂಖ್ಯಾಕವಾದೀ ಬುಲ್ಡೋಜರನ್ನು ಆರ್‌ಎಸ್‌ಎಸ್/ಬಿಜೆಪಿ ತನ್ನೆಲ್ಲಾ ಸಂಪನ್ಮೂಲಗಳೊಂದಿಗೆ ಹಾಗೂ ತನ್ನ ಹಿಂದಿರುವ ರಾಜಕೀಯ ಶಕ್ತಿಯ ಸಂಪೂರ್ಣ ಬಲದೊಂದಿಗೆ ಆಡಿಸುತ್ತಿರುವುದು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಸದಸ್ಯರ ಮೇಲಿನ ದಾಳಿಗಳಲ್ಲಿ ಎದ್ದುಕಾಣುತ್ತಿದೆ.


ಕೋಮು ತಿಕ್ಕಾಟಗಳಿಗೆ ಪ್ರಚೋದನೆ

ಏಪ್ರಿಲ್‌ನಲ್ಲಿ, ಒಂಬತ್ತು ರಾಜ್ಯಗಳಲ್ಲಿ ಒಂದಾದ ಮೇಲೊಂದರಂತೆ ಕೋಮುವಾದಿ ಹಿಂಸಾಚಾರದ ಘಟನೆಗಳು ಭುಗಿಲೆದ್ದವು. ಮೂರು ಧಾರ್ಮಿಕ– ಏಪ್ರಿಲ್ 2 ರಂದು ಹಿಂದೂ ಹೊಸ ವರ್ಷ, ಏಪ್ರಿಲ್ 10 ರಾಮನವಮಿ ಮತ್ತು ಏಪ್ರಿಲ್ 16 ಹನುಮಾನ್ ಜಯಂತಿ–ಸಂದರ್ಭಗಳಲ್ಲಿ ಮೆರವಣಿಗೆಗಳನ್ನು ಅಲ್ಪಸಂಖ್ಯಾತ ಸಮುದಾಯದವರನ್ನು ಪ್ರಚೋದಿಸಿ ಕೋಮು ಸಂಘರ್ಷವನ್ನು ಹುಟ್ಟುಹಾಕಲು ಬಳಸಲಾಯಿತು. ಅವಮಾನಕರ ಘೋಷಣೆಗಳು, ಮಸೀದಿಗಳ ಎದುರು ಧ್ವನಿವರ್ಧಕ ಬಳಸಿ ಕಿವಿಗಡಚಿಕ್ಕುವ ಸಂಗೀತ. ಆಯುಧಗಳ ಪ್ರದರ್ಶನ ತಕ್ಷಣವೇ ಉದ್ವಿಗ್ನತೆಯನ್ನು ಸೃಷ್ಟಿಸಿತು. ಕೆಲವು ಪ್ರಕರಣಗಳಲ್ಲಿ, ಜನರು ಮಸೀದಿಯೊಳಕ್ಕೆ ನುಗ್ಗಿದರು ಮತ್ತು ಕೇಸರಿ ಬಾವುಟಗಳನ್ನು ಹಾರಿಸಲು ಯತ್ನಿಸಿದರು. ನಂತರ ನಡೆದ ಹಿಂಸಾಚಾರದಲ್ಲಿ ಹಲವರು ಗಾಯಗೊಂಡರು ಮತ್ತು ಇಬ್ಬರು ಮಡಿದರು. ಬಿಜೆಪಿ ರಾಜ್ಯ ಸರ್ಕಾರಗಳು(ದೆಹಲಿಯಲ್ಲಿ ನಗರಸಭೆ)

ಪುಟ 14 ಕ್ಕೆ



ವ್ಯಂಗ್ಯಚಿತ್ರ ಕೃಪೆ: ಮೊಲಿಟಿಕ್ಸ್.ಇನ್



ವ್ಯಂಗ್ಯಚಿತ್ರ: ಮಂಜುಲ್, ನ್ಯೂಸ್ 9 ಲೈವ್.ಕಾಂ



"ನಾವು, ಜನತೆ": ವ್ಯಂಗ್ಯಚಿತ್ರ: ಸತೀಶ ಆಚಾರ್ಯ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**